"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರನಲವತ್ತಾರನೆಯ ಅಧಿವೇಶನ

17ನೇ ಫೆಬ್ರವರಿ 2022

ಗುರುವಾರ

## ವಿಷಯಾನುಕ್ರಮಣಿಕೆ (Index)

**1.ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ "ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ"**

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)
- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಸಲೀಂ ಅಹಮದ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

282–ಮದರಸಾ ಧಾರ್ಮಿಕ ಶಿಕ್ಷಣದ ಕುರಿತು

- ಶ್ರೀ ಮುನಿರಾಜು ಗೌಡ ಪಿ.ಎಂ.
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

293+308+206–ಕೇಂದ್ರದ 7ನೇ ವೇತನ ಆಯೋಗದ ಶಿಫಾರಸ್ಸು ಜಾರಿ ಕುರಿತು

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಅರುಣ ಶಹಾಪೂರ
- ಶ್ರೀ ಅ.ದೇವೇಗೌಡ
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

214–ಐ.ಎಂ.ಎ. ಹಗರಣದ ಆರೋಪಿಗಳ ಕುರಿತು

- ಶ್ರೀ ಎನ್.ರವಿಕುಮಾರ್
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

205–ವೈ.ಜಿ. ಗುಡ್ಡ ಡ್ಯಾಮ್‌ನ ಕಾಮಗಾರಿ ಬಗ್ಗೆ
- ಶ್ರೀ ಅ.ದೇವೇಗೌಡ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

239–ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಲ್ಲಿ ಬಡಾವಣೆ ನಿರ್ಮಾಣ ಮಾಡದೆ ಅನುಪಯುಕ್ತವಾಗಿ ಉಳಿದಿರುವ ಬಗ್ಗೆ.
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

234–ನಕಲಿ ಕಟ್ಟಡ ಕಾರ್ಮಿಕರ ನೋಂದಣಿ ಕುರಿತು
- ಡಾ: ತಳವಾರ್ ಸಾಬಣ್ಣ
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಕಾರ್ಮಿಕ ಸಚಿವರು)

274–ಕೋಲಾರದಲ್ಲಿರುವ ಕೆರೆಗಳ ಬಗ್ಗೆ
- ಶ್ರೀ ಗೋವಿಂದರಾಜು
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ "ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ"**

- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)
- ಶ್ರೀ ಸಲೀಂ ಅಹಮದ್
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಎನ್.ರವಿಕುಮಾರ್
- ಶ್ರೀ ನಸೀರ್ ಅಹ್ಮದ್
- ಶ್ರೀ ಕೆ.ಗೋವಿಂದರಾಜ್
- ಶ್ರೀ ಕೆ.ಟಿ.ಶ್ರೀಕಂಠೇಗೌಡ

- ಶ್ರೀ ಅಲ್ಲಂ ವೀರಭದ್ರಪ್ಪ
- ಶ್ರೀ ಎಸ್.ಎಲ್.ಭೋಜೇಗೌಡ
- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಡಿ.ಎಸ್.ಅರುಣ್
- ಶ್ರೀ ಎಸ್.ರವಿ
- ಶ್ರೀ ಆರ್.ಬಿ.ತಿಮ್ಮಾಪೂರ
- ಡಾ: ತೇಜಸ್ವಿನಿ ಗೌಡ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಪಿ.ಆರ್.ರಮೇಶ್
- ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
- ಶ್ರೀ ಅಡಗೂರು ಹೆಚ್. ವಿಶ್ವನಾಥ್
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು)
- ಶ್ರೀ ಆಯನೂರು ಮಂಜುನಾಥ್
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

**4. ಸಭೆಯ ಮುಂದಿಡಲಾದ ಕಾಗದಪತ್ರಗಳು**

~ ~ ~ ~ ~ ~ ~ ~

(058)17.02.2022 10.40 ವೈಎಲ್-ಬಿಎನ್‌ಎಸ್

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 17ನೇ ಫೆಬ್ರವರಿ 2022**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿಯವರಾದ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)ರವರು**

**ಪೀಠವನ್ನು ಅಲಂಕರಿಸಿದರು**

**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**"ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ"**

**- - - -**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ತಮ್ಮ ಗಮನಕ್ಕೆ ಕೆಲವೊಂದು ಗಂಭೀರವಾದ ವಿಚಾರವನ್ನು ನಿಲುವಳಿ ಸೂಚನೆ ಮೂಲಕ ತಂದಿದ್ದೆವು. ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರ ನಿಲುವಿನಲ್ಲಿ ಯಾವುದೇ ರೀತಿಯಲ್ಲಿ ಬದಲಾವಣೆಯಾಗಿಲ್ಲ. ಅವರು ಪುನಃ ಅದನ್ನೇ ಉಚ್ಛಾರಣೆ ಮಾಡಿ, ರಾಷ್ಟ್ರ ಧ್ವಜಕ್ಕೆ ಅಪಮಾನ ಮಾಡುವಂಥ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿರುವುದರಿಂದ, ಆ ವಿಚಾರದ ಮೇಲೆ ಚರ್ಚೆ ಮಾಡಲು ದಯವಿಟ್ಟು ಸರ್ಕಾರಕ್ಕೆ ಹೇಳಿ. "ಮಾನ್ಯ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಸಂವಿಧಾನಕ್ಕೆ ವಿರುದ್ಧವಾಗಿ ಹೋಗಿದ್ದು, ಅವರ ವಿರುದ್ಧ ದೇಶದ್ರೋಹದ ಕೇಸನ್ನು ದಾಖಲಿಸಬೇಕೆಂದು" ತಮ್ಮ ಪೀಠದ ಮೂಲಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅವರ ಪಕ್ಷದ ಸದಸ್ಯರು ತಂದಿರುವಂಥ ನಿಲುವಳಿ ಸೂಚನೆ ಏನಿದೆ, ಅದಕ್ಕೆ ನಿನ್ನೆ ದಿವಸವೇ ಮಾತನಾಡಿ ಉತ್ತರಿಸಿದ್ದೇನೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ಏನೂ ಪುನರ್ ಉಚ್ಚಾರ ಮಾಡಿಲ್ಲದಿರುವುದು ನಾನು ಸಹ ನೋಡಿದ್ದೇನೆ. ಮಾಧ್ಯಮದವರೊಂದಿಗೆ Interact ಮಾಡುವಾಗ ಆ ರೀತಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಹೇಳಿದ್ದಾರೆ ಎಂದು ನಾವು ನಿನ್ನೆ admit ಮಾಡಿಕೊಂಡಿದ್ದೇವೆ. ಕೊನೆಯಲ್ಲಿ ಹೇಳಿಕೆ ನೀಡುವಾಗ ತ್ರಿವರ್ಣ ಧ್ವಜ ಈ ದೇಶದ ರಾಷ್ಟ್ರಧ್ವಜವಾಗಿದ್ದು, ಅದಕ್ಕೆ ಅಗೌರವ ಕೊಡುವುದು ದೇಶದ್ರೋಹ ಮಾಡಿದಂತೆ, ಅಂಥವರನ್ನು ದೇಶದ್ರೋಹಿಗಳೆಂದು ಕಾಣಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಹಾಗಾಗಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಏನು ಹೇಳಿಕೆ ನೀಡಿದ್ದಾರೆ, ಅದು ಸ್ಪಷ್ಟವಾಗಿದೆ. ಎಲೆಕ್ಟ್ರಾನಿಕ್ ಮೀಡಿಯಾದವರೊಂದಿಗೆ interact ಮಾಡುವ ಸಂದರ್ಭದಲ್ಲಿ "ಹಾಗಾದರೆ, ತಾವು ಕೆಂಪು ಧ್ವಜ ಹಾರಿಸುತ್ತೀರಾ ಎಂದು ಕೇಳಿದ್ದು, ಅದಕ್ಕೆ ಮಾನ್ಯ

ಕೆ.ಎಸ್.ಈಶ್ವರಪ್ಪನವರು 200 ವರ್ಷಗಳಗೋ, 500 ವರ್ಷಗಳಗೋ ಆಗಬಹುದೆನೋ" ಎಂದು ಹೇಳಿರುವ ಹೇಳಿಕೆಯನ್ನು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು positive sense ನಲ್ಲಿ ತೆಗೆದುಕೊಳ್ಳಬಾರದಿತ್ತು ಎನ್ನುವುದು ನನ್ನ ಭಾವನೆ. ಜೊತೆಗೆ Flag Code ನಲ್ಲಿ ಸಹ "ಆ ರೀತಿಯ ವಿವಾದಾತ್ಮಕ ಹೇಳಿಕೆಯನ್ನು ಕಾನೂನಿನಲ್ಲಿ ತೀವ್ರವಾಗಿ ತೆಗೆದುಕೊಳ್ಳಬಾರದು" ಎಂದು ಸ್ಪಷ್ಟವಾಗಿ ಸೂಚಿಸುತ್ತದೆ. ಹಾಗೆಯೇ ಮಾನ್ಯ ಕೆ.ಎಸ್.ಈಶ್ವರಪ್ಪನವರು ಸಹ ಆ ರೀತಿಯ ಮಾತನ್ನು ಹೇಳಿದ್ದೇನೆ, ಅಂತಿಮವಾಗಿ ರಾಷ್ಟ್ರ ಧ್ವಜವೇ ನಮಗೆಲ್ಲಾ ಶ್ರೇಷ್ಠ, ಅದಕ್ಕೆ ಅಗೌರವ ಮಾಡುವುದು ದೇಶದ್ರೋಹದ ಕೆಲಸವಾಗುತ್ತದೆ ಎನ್ನುವುದನ್ನು ಒಳ್ಳೆಯ spirit ನಲ್ಲಿ ಹೇಳಿರುವ ಹೇಳಿಕೆಯನ್ನು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಸ್ವೀಕಾರ ಮಾಡಿ, ಈ issue ಅನ್ನು ಇಲ್ಲಿಗೆ ಮುಕ್ತಾಯಗೊಳಿಸಬೇಕೆಂದು ಅವರಿಗೆ ತಮ್ಮ ಮೂಲಕ ಕೈಮುಗಿದು ಕೇಳಿಕೊಳ್ಳುತ್ತೇನೆ. ಎಲ್ಲಿಯು ಸಹ ಪಾಸಿಟಿವ್ ಆಗಿ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ಹೇಳಿಲ್ಲ. ಆಗಬಹುದೆನೋ ಎಂದು ಹೇಳಿದ್ದಾರೆ. ಈ ಹಿಂದೆ ಸಹ ರಾಮಮಂದಿರ ಕಟ್ಟಲು ಸಾಧ್ಯವಿಲ್ಲವೆಂದು ಹೇಳಿದ್ದು, ಇವತ್ತು ಆ ಕೆಲಸ ಆಗಿಲ್ಲವೇ? ಅಂತಹ ಒಂದು ಕಾಲ ಮುಂದೆ ಬರುತ್ತದೆಯೋ, ಇಲ್ಲವೋ ಯಾರಿಗೆ ಗೊತ್ತು? 200 ವರ್ಷಗಳು, 500 ವರ್ಷಗಳ ನಂತರ ಬರಬಹುದೇನೋ ಎಂದು ಹೇಳಿಕೆ ನೀಡಿದ್ದಾರೆ. 200 ವರ್ಷಗಳವರೆಗೂ ನಾವು ಬದುಕಿರುವುದಿಲ್ಲ, ವಿರೋಧ ಪಕ್ಷದವರು ಬದುಕಿರುವುದಿಲ್ಲ. ಆ ರೀತಿ ಇರುವಾಗ ಏತಕ್ಕೆ ಅಷ್ಟು ಗಂಭೀರವಾಗಿ ಆ ವಿಚಾರವನ್ನು ತೆಗೆದುಕೊಂಡು ಕಾಂಗ್ರೆಸ್ ಪಕ್ಷದವರು ದೊಡ್ಡದಾಗಿ ಮಾಡುತ್ತಿದ್ದಾರೆ ಗೊತ್ತಿಲ್ಲ. ದಯವಿಟ್ಟು ನಾನು ಅವರಲ್ಲಿ ಮನವಿ ಮಾಡುವುದೇನೆಂದರೆ, ಈ ಸದನವು ಶಾಂತವಾಗಿ ನಡೆಯಲು ಅನುವು ಮಾಡಿಕೊಡಬೇಕು. ದಯವಿಟ್ಟು ಮಾನ್ಯ ಕೆ.ಎಸ್.ಈಶ್ವರಪ್ಪನವರು ಮತ್ತೆ ಏನೂ positive ಆಗಿ ಹೇಳಿಲ್ಲ. ಅವರು ಹೇಳಿರುವ ಹೇಳಿಕೆಯ ಕುರಿತು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ, ಅಂತಿಮವಾಗಿ ನೋಡಿದಾಗ ಮಾನ್ಯ ಕೆ.ಎಸ್.ಈಶ್ವರಪ್ಪನವರು ನೀಡಿರುವ ಹೇಳಿಕೆಯ ಬಗ್ಗೆ ಸಂಪೂರ್ಣವಾಗಿ text ಅನ್ನು ಪರಿಗಣಿಸುವ ಸಂದರ್ಭ ಬಂದರೆ ಅವರ ಹೇಳಿಕೆಗೆ ಮಾನ್ಯತೆ ನೀಡಬೇಕಾಗುತ್ತದೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ರಾಷ್ಟ್ರಧ್ವಜಕ್ಕೆ ಅತ್ಯಂತ ಹೆಚ್ಚು ಗೌರವ ನೀಡಿ ಮಾತನಾಡಿದ್ದಾರೆ. ಹಾಗಾಗಿ ಈ issue ಅನ್ನು ಡ್ರಾಪ್ ಮಾಡಬೇಕೆಂದು ತಮ್ಮ ಮೂಲಕ ಕಾಂಗ್ರೆಸ್ ಪಕ್ಷದವರಿಗೆ ಮನವಿ ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಮಂತ್ರಿ ಮಂಡಲದಲ್ಲಿಯೇ capable ಮಂತ್ರಿ. ಅವರೇ ಈ ರೀತಿ ಹೇಳಿಕೆ ನೀಡಿದರೆ ಹೇಗೆ? ಈ ರೀತಿ ಆದರೆ ನಮಗೆ ತುಂಬಾ ತಾಪತ್ರಯವಾಗುತ್ತದೆ. ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಹೇಳಿಕೆ ನೀಡುವಾಗ "ಮಾನ್ಯ ಕೆ.ಎಸ್.ಈಶ್ವರಪ್ಪನವರು ಹೇಳಿರುವುದು ನಿಜ. ಅಂತಿಮವಾಗಿ ರಾಷ್ಟ್ರ ಧ್ವಜದ ಮೇಲೆ ನಮಗೆ ಬಹಳ ಗೌರವ ಇದೆ ಎಂದು ಹೇಳಿಕೆ ನೀಡಿದ್ದಾರೆ" ಎಂದು ತಿಳಿಸಿದರು. ಈ ರೀತಿಯಾಗಿ ಪದಪುಂಜಗಳನ್ನು ಬಳಸಿ ಮಾತನಾಡುವಂಥ ಅಭ್ಯಾಸವನ್ನು ನಮಗೆ ಯಾರೂ ಹೇಳಿಕೊಟ್ಟಿಲ್ಲ, ಬೇರೆ ಕಡೆ ನಾವು ತರಬೇತಿಯನ್ನು ಪಡೆದಿಲ್ಲ, ಜನಸಾಮಾನ್ಯರು ನಮಗೆ ತರಬೇತಿ ನೀಡಿರುವುದು. ಮಾನ್ಯ ಕೆ.ಎಸ್.ಈಶ್ವರಪ್ಪನವರು "ನಾನು ಆ ವಿಚಾರದಲ್ಲಿ ಕ್ಷಮೆ ಕೇಳುವುದಿಲ್ಲ, ನಾನು ಹೇಳಿರುವುದು ನಿಜ" ಎಂಬ ಹೇಳಿಕೆ ಬಹಳ ಸ್ಪಷ್ಟವಾಗಿದೆ. ನಿನ್ನೆ ಸಹ ಸಂವಿಧಾನದ Article 51ಎ ರಲ್ಲಿ "ಯಾರು ರಾಷ್ಟ್ರಗೀತೆ, ರಾಷ್ಟ್ರಧ್ವಜ, ಸಂವಿಧಾನಕ್ಕೆ ದೈಹಿಕವಾಗಿ, ಮೌಖಿಕವಾಗಿ, ಲಿಖಿತ ರೂಪದಲ್ಲಿ ಯಾರು ಅವಹೇಳನಕಾರಿ ಹೇಳಿಕೆ ನೀಡಿ, ಅಪಮಾನ ಮಾಡುತ್ತಾರೆ, ಅಂಥವರ ವಿರುದ್ಧ ದೇಶದ್ರೋಹದ ಕೇಸನ್ನು ದಾಖಲಿಸಬೇಕೆಂದು" ಬಹಳ ಸ್ಪಷ್ಟವಾಗಿರುವುದನ್ನು ಉಲ್ಲೇಖಿಸಿದ್ದೇನೆ. ಆದ್ದರಿಂದ ನಾನು ತಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ, ತಾವು ಸಂವಿಧಾನಿಕ ಪೀಠದಲ್ಲಿ ಕುಳಿತಿರುವುದರಿಂದ ದಯವಿಟ್ಟು ಮಾನ್ಯ ಕೆ.ಎಸ್.ಈಶ್ವರಪ್ಪನವರ ಮೇಲೆ ದೇಶದ್ರೋಹದ ಕೇಸನ್ನು ದಾಖಲಿಸಬೇಕೆಂದು ಸರ್ಕಾರಕ್ಕೆ ನಿರ್ದೇಶವನ್ನು ನೀಡಿ. ನಾವು ಸರ್ಕಾರದ ಹೇಳಿಕೆಯನ್ನು ಒಪ್ಪಲು ಸಾಧ್ಯವೇ ಇಲ್ಲ. ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಮಾನ್ಯ ಕೆ.ಎಸ್.ಈಶ್ವರಪ್ಪನವರಿಗೆ ರಾಷ್ಟ್ರ ಧ್ವಜದ ಮೇಲೆ ಬಹಳ ಗೌರವ ಇದೆ ಎಂದು ಹೇಳಬಹುದು. ಆದರೆ, ನಾನು ಅದರ ಸಂಪೂರ್ಣ ಇತಿಹಾಸವನ್ನು ಉಲ್ಲೇಖಿಸಿದ್ದೇನೆ. ಇದು ಅವರ hidden agenda. ಆದ್ದರಿಂದ ಆ ವಿಚಾರವಾಗಿ ಮತ್ತೆ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಮಾನ್ಯ ಕೆ.ಎಸ್.ಈಶ್ವರಪ್ಪನವರಿಗೆ ರಾಷ್ಟ್ರ ಧ್ವಜದ ಮೇಲೆ ಎಷ್ಟು ಗೌರವ ಇದೆ ಎಂಬುದು ಈಗಾಗಲೇ ದೇಶದ ಜನರಿಗೆ ತಿಳಿದಿದೆ. ಹಾಗಾಗಿ ರಾಷ್ಟ್ರ ಧ್ವಜಕ್ಕೆ ಅಪಮಾನವಾಗಿದ್ದು, ತಾವು ಸಹ ಅಶೋಕ ಸ್ತಂಭದ ಕೆಳಗೆ ಕುಳಿತಿದ್ದೀರಿ ಹಾಗೂ ಸಂವಿಧಾನಿಕ ಪೀಠದಲ್ಲಿ ಕುಳಿತಿದ್ದು, ಸಂವಿಧಾನಿಕವಾಗಿ oath of affirmation ತೆಗೆದುಕೊಂಡಿದ್ದೀರಿ. ದಯವಿಟ್ಟು ತಾವು ಮಾನ್ಯ ಕೆ.ಎಸ್.ಈಶ್ವರಪ್ಪನವರ ಮೇಲೆ sedition case book ಮಾಡಲು

ನಿರ್ದೇಶನ ನೀಡುವುದು ಒಳ್ಳೆಯದು. ಇದು ನಮ್ಮ ಪ್ರಾರ್ಥನೆಯಾಗಿದೆ ವಿನಃ ವೈಯಕ್ತಿಕ ಪ್ರಶ್ನೆಯಾಗಿಲ್ಲ. ಏಕೆಂದರೆ, ಇವತ್ತು ರಾಷ್ಟ್ರ ಧ್ವಜಕ್ಕೆ ಅಪಮಾನ ಮಾಡುತ್ತಾರೆ, ನಾಳೆ ದಿವಸ ಸಂವಿಧಾನಕ್ಕೆ ಅಪಮಾನ ಮಾಡುತ್ತಾರೆ. ಹಾಗೂ ಈಗಾಗಲೇ ಅವರು ರಾಷ್ಟ್ರಗೀತೆಯನ್ನು ಒಪ್ಪಿಕೊಳ್ಳಲು ತಯಾರಿಲ್ಲ, ಅದರ ಬಗ್ಗೆ ಬೇಕಾದರೂ ಒಂದು ದಿವಸ ಪೂರ್ತಿ ಚರ್ಚೆ ನಡೆಯಲಿ. ನಾನು ಅದರ ಬಗ್ಗೆ ಚರ್ಚೆ ಮಾಡಲು ತಯಾರಿದ್ದೇವೆ. ಆದ್ದರಿಂದ ದಯವಿಟ್ಟು ಅವರ ಹೇಳಿಕೆಗೆ ಅವಕಾಶ ನೀಡಬೇಡಿ. ಈ ದೇಶದ ಜನತೆಗೆ ರಾಷ್ಟ್ರ ಧ್ವಜದ ಮೇಲೆ ಇನ್ನು ಗೌರವ ಉಳಿದಿದ್ದು, ಅದನ್ನು ಕಾಪಾಡುವ ಜವಾಬ್ದಾರಿ ನಮ್ಮದಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಜೆ.ಸಿ.ಮಾಧುಸ್ವಾಮಿಯವರು "ಮಾನ್ಯ ಕೆ.ಎಸ್.ಈಶ್ವರಪ್ಪನವರು ಆ ರೀತಿ ಹೇಳಿಕೆ ನೀಡಿ, ಅಂತಿಮವಾಗಿ ಸಂವಿಧಾನಕ್ಕೆ ಬದ್ಧವಾಗಿ ಬಾವುಟ ನಮ್ಮದು, ಅದಕ್ಕೆ ಗೌರವ ನೀಡುತ್ತೇವೆ ಎಂದು ಹೇಳಿದ್ದಾರೆ" ಎಂದು ತಿಳಿಸಿದರು. ಈ ವಿಚಾರವಾಗಿ ನಾನು ಹೇಳುವುದೇನೆಂದರೆ, ಒಬ್ಬ ವ್ಯಕ್ತಿ ಕೊಲೆ ಮಾಡಿದ ಮೇಲೆ ನಾನು ಆತನ ಉದ್ದೇಶ ಚೆನ್ನಾಗಿತ್ತು ಎಂದು ಹೇಳಿಕೆ ನೀಡಿದರೆ, ಆ ಕೊಲೆಗಾರರನ್ನು ಮಾಫಿ ಮಾಡುತ್ತೇವೆಯೇ? ಇವತ್ತು ಅಥವಾ ನಾಳೆ ದಿವಸ ಕೆಂಪು ಕೋಟೆಯ ಮೇಲೆ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ಮಾನ್ಯ ಕೆ.ಎಸ್.ಈಶ್ವರಪ್ಪನವರು ಹೇಳಿದ್ದಾರೆ. ಮಾನ್ಯ ಕಾನೂನು ಸಚಿವರು ಬಹಳ ನುರಿತ ಹಿರಿಯ ಸದಸ್ಯರಾಗಿದ್ದು, ಅವರಿಗೆ ಕಾನೂನು ಪ್ರಜ್ಞೆ ಬಹಳ ಚೆನ್ನಾಗಿ ಇದೆ. ಆ ರೀತಿ ಇರುವಾಗ ಮಾನ್ಯ ಕೆ.ಎಸ್.ಈಶ್ವರಪ್ಪನವರು ಇವತ್ತು ಅಥವಾ ನಾಳೆ ದಿವಸ ಕೆಂಪು ಕೋಟೆಯ ಮೇಲೆ ಕೇಸರಿ ಧ್ವಜ ಹಾರಿಸುತ್ತೇವೆ ಎಂದು ಒಂದು ಸಲ ಹೇಳಿಕೆ ನೀಡಿದ ಮೇಲೆ ಅದು ಇವತ್ತು ಆಗಬಹುದು ಅಥವಾ ನಾಳೆ ದಿವಸ ಆಗಬಹುದು, ಒಂದು ಸಲ ಹೇಳಿದ ಮೇಲೆ ಅದು ಹೇಳಿಕೆಯೇ ಆಗುತ್ತದೆ. ಅದನ್ನು ಮಾನ್ಯ ಕಾನೂನು ಸಚಿವರು ಅಲ್ಲಗಳೆಯಲು ಸಾಧ್ಯವಿಲ್ಲ ಹಾಗೂ ಪಾರ್ಟ್ ಆಗಿ ಆಮೇಲೆ ರಾಷ್ಟ್ರಧ್ವಜದ ಮೇಲೆ ನಮಗೆ ಬಹಳ ಗೌರವ ಇದೆ ಎಂದು ಹೇಳಿಕೆ ನೀಡಿದ್ದಾರೆ" ಎಂದು ತಿಳಿಸಿದರೆ ಆಗುವುದಿಲ್ಲ. ಮಾನ್ಯ ಕೆ.ಎಸ್.ಈಶ್ವರಪ್ಪನವರು ದೇಶದ್ರೋಹದ ಕೆಲಸ ಮಾಡಿದ್ದು, ಸಚಿವ ಸಂಪುಟದಲ್ಲಿ ಮುಂದುವರೆಯಲು ಅವರಿಗೆ ಅರ್ಹತೆ ಇಲ್ಲ. JNU ವಿದ್ಯಾರ್ಥಿಗಳ

ಮೇಲೆ sedition case ದಾಖಲಿಸಿದರು. ಅದರಲ್ಲಿಯು doctored video ಗೆ ಸಂಬಂಧಿಸಿದಂತೆ ಆ ವಿದ್ಯಾರ್ಥಿಗಳನ್ನು ಜೈಲಿಗೆ ಕಳುಹಿಸಿದರು. ಆದರೆ, ಈಗ ಒಬ್ಬ ಸಚಿವರಾಗಿರುವಂಥ ಮಾನ್ಯ ಕೆ.ಎಸ್.ಈಶ್ವರಪ್ಪನವರು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ? ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಮಾತನಾಡುವ ಸಂದರ್ಭದಲ್ಲಿ ಸ್ವಲ್ಪ ಹೊತ್ತು ಕಣ್ಣು ಮುಚ್ಚಿ "ಮಾನ್ಯ ಕೆ.ಎಸ್.ಈಶ್ವರಪ್ಪನವರು ಆ ರೀತಿ ಹೇಳಿಕೆ ನೀಡಿದ್ದಾರೆ" ಎಂದು ಹೇಳಿದರು. ಅವರ ಆ ಹೇಳಿಕೆ ನಮ್ಮ ದೇಶದ ಮೇಲೆ ಬಹಳ ದೊಡ್ಡ ಪರಿಣಾಮವಾಗುತ್ತದೆ. ಅವರ ಹೇಳಿಕೆಯನ್ನು ಹಾಗೆಯೇ ಬಿಟ್ಟರೆ, ನಮ್ಮ ಸಂವಿಧಾನವು ಉಳಿಯುವುದಿಲ್ಲ, ಅದಕ್ಕೆ ಕಾರಣೀಭೂತರು ಸಹ ಅವರೇ ಆಗುತ್ತದೆ. ಹಾಗಾಗಿ ಮಾನ್ಯ ಕೆ.ಎಸ್. ಈಶ್ವರಪ್ಪನವರು ರಾಜೀನಾಮೆ ನೀಡಲೇಬೇಕು, ಅವರ ವಿರುದ್ಧ sedition case ದಾಖಲಿಸಬೇಕು, ಅವರನ್ನು ಬಂಧಿಸಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಅವರು ಪ್ರತಿಷ್ಠೆಯ ಮೇಲೆ ಏತಕ್ಕೆ ನಿಂತಿದ್ದಾರೆ. ದೇಶ ಭಕ್ತಿ, ರಾಷ್ಟ್ರ ಧ್ವಜ, party with difference ಎಂದು ಅವರ ಪಕ್ಷ ಬೋಧನೆ ಮಾಡುತ್ತದೆ. ಆ ರೀತಿ ಇರುವಾಗ ಅವರ ಪಕ್ಷದ ಒಬ್ಬ ಹಿರಿಯ ಸಚಿವರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು ಆಗಿದ್ದವರು ಇಂತಹ ಬೇಜವಾಬ್ದಾರಿಯುತ ಹೇಳಿಕೆ ನೀಡುತ್ತಾರೆ, ಆ ಮಾತಿಗೆ ಅವರು ವಿಷಾದವನ್ನು ಸಹ ವ್ಯಕ್ತಪಡಿಸುವುದಿಲ್ಲ.

(ಮುಂದು)

(059) 17.02.2022/10.50/ಎಸ್‌ಕೆ-ಕೆಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಲೀಂ ಅಹಮದ್ (ಮುಂದು):-**

ನಾನು ಹೇಳಿದ್ದೇ ಸರಿ ಎಂದು ಹೇಳುತ್ತಾರೆ. ಇದಕ್ಕೆ ಅರ್ಥವೇನು? ಅವರು ನಿನ್ನೆಯೂ ಕೂಡ ಮತ್ತೆ ಅದನ್ನೇ ಹೇಳಿದ್ದಾರೆ. ನಮ್ಮ ಒತ್ತಾಯವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸಹ ಈ ಸದನಕ್ಕೆ ಬಂದಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ, ಅವರ ಮೇಲೆ ಪ್ರಕರಣ ದಾಖಲು ಮಾಡಬೇಕು. ಅವರಿಂದ ರಾಜೀನಾಮೆಯನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಇಡೀ ರಾಷ್ಟ್ರದಲ್ಲಿ ಚರ್ಚೆಯಾಗುತ್ತಿದೆ. ಕರ್ನಾಟಕದಲ್ಲಿ ಇಂತಹ ಘಟನೆ ಏಕೆ ಆಗಿದೆ. ಭಾರತೀಯ ಜನತಾ ಪಕ್ಷ ಅಧಿಕಾರವಿದ್ದರೂ ಕೂಡ ರಾಷ್ಟ್ರ ಧ್ವಜಕ್ಕೆ ಅಗೌರವ ತೋರಿಸಿದ್ದಾರೆ. ಇಲ್ಲಿಯವರೆಗೂ ಅವರ ಮೇಲೆ ಪ್ರಕರಣವನ್ನು ಏಕೆ ದಾಖಲೆ ಮಾಡಿಲ್ಲ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇವತ್ತು ಭಾರತೀಯ ಜನತಾ ಪಕ್ಷದ ಬಗ್ಗೆ ಸಿದ್ಧಾಂತದ ಬಗ್ಗೆ ಮಾತಾಡುವವರು, ಇವತ್ತು ಈ ಸದನದಿಂದ ಇಡೀ ರಾಷ್ಟ್ರಕ್ಕೆ ಒಂದು ಸಂದೇಶ ಹೋಗಲಿ. ಇಂತಹ ಘಟನೆಗಳ ಮೇಲೆ ನಿರ್ದಾಕ್ಷಣ್ಯವಾದ ಕ್ರಮ ತೆಗೆದುಕೊಳ್ಳುತ್ತೇವೆ, ನಮ್ಮ ಪಕ್ಷದ ಮಂತ್ರಿಗಳಿದ್ದರೂ ಕೂಡ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಸಂದೇಶ ತಮ್ಮ ಮೂಲಕ ಕೊಡಲಿ. ಕಾನೂನು ಸಚಿವರು ಬಹಳ ಬುದ್ಧಿವಂತರು, ಸಮರ್ಥರು ಹಾಗೂ ಅವರು ಎಲ್ಲಾ ರೀತಿಯಲ್ಲಿ ಮುಂದೆಯೂ ಹೋಗುತ್ತಾರೆ, ಹಿಂದೆಯೂ ಬರುತ್ತಾರೆ. ದಯಮಾಡಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು, ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಸಚಿವರು):-** ಮಾನ್ಯ ಸಭಾಪತಿಯವರೇ , ನಿನ್ನೆಯೂ ಕೂಡ ನಾನು ಸ್ಪಷ್ಟ ಮಾಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರಿಗೆ ಫ್ಲ್ಯಾಗ್ ಕೋಡ್‌ನ್ನು ಕೋಟ್ ಮಾಡಬೇಕಾದರೂ 'Explanation' clause ನ್ನು ನೋಡುವುದಕ್ಕೆ ಹೇಳಿದ್ದೇನೆ. In an interaction, whether any words spoken will become a part of the Statement, ಎನ್ನುವಂತಹ ಪ್ರಶ್ನೆ ಬಂದರೆ, ಆಗುವುದಿಲ್ಲ ಎಂದು ಕಾನೂನು ಸ್ಪಷ್ಟವಾಗಿ ಹೇಳಿದೆ. ಯಾರೋ electronic media ನಲ್ಲಿ ಕುಳಿತುಕೊಂಡು ಮಾನ್ಯ

ಈಶ್ವರಪ್ಪನವರಿಗೆ ಲೀಡಿಂಗ್ ಪ್ರಶ್ನೆ ಕೇಳಿದಾಗ, ಮಾನ್ಯ ನ್ಯಾಯಾಲಯದಲ್ಲಿ ಲೀಡಿಂಗ್ ಪ್ರಶ್ನೆಯನ್ನು ಕೇಳಬಾರದು ಎನ್ನುತ್ತೇವೆ. ಯಾರನ್ನು ಲೀಡ್ ಮಾಡಬಾರದು, as he may go wrong. ಲೀಡಿಂಗ್ ಪ್ರಶ್ನೆ ಕೇಳಬೇಕಾದರೆ, ಹಾಗೇ ಮಾಡುತ್ತಾರೋ, ಹೀಗೆ ಮಾಡುತ್ತಾರೋ ಎಂದಾಗ, ನಾನು ಹೇಳಿದ್ದು ನಿಜ. ನಿನ್ನೆ ಏನೂ ಹೇಳಿದ್ದಾರೋ, ಇವತ್ತು ಹೇಳಿದ್ದಾರೆ. ಆದರೆ ಕೆಂಪು ಧ್ವಜ ಹಾರಿಸುತ್ತೇನೆ ಎಂದು ಹೇಳಲಿಲ್ಲ. ಕಾಲ ಬರಬಹುದು ಏನೋ, ಇನ್ನು ಮೂರು ವರ್ಷಕ್ಕೆ ಯಾರಿಗೆ ಗೊತ್ತಿದೆ? ನಮ್ಮ ದುರಂತವೇನೆಂದರೆ, ಇಡೀ ರಾಷ್ಟ್ರದಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸಬೇಕು ಎನ್ನುವುದರ ಬಗ್ಗೆ ಹೋರಾಟ ಮಾಡಿದ ಪಕ್ಷ. ನಾವು ಪಾಠ ಹೇಳಿಸಿಕೊಳ್ಳುವ ಮಟ್ಟಕ್ಕೆ ಬಂದಿದ್ದೇವೆ ಎನ್ನುವುದು. ಹುಬ್ಬಳಿಯಲ್ಲಿ ಹಾರಿಸಬೇಕಾದಾಗ, ಗೋಲಿಬಾರ್‌ಗೆ ತುತ್ತಾದವರು. ಇಡೀ ನಿಮ್ಮ ಪಕ್ಷ  ಇವತ್ತು ಕಾಶ್ಮೀರಕ್ಕೆ ಬನ್ನಿ ನೋಡುತ್ತೇನೆ. ಕಾಶ್ಮೀರಕ್ಕೆ ಕಾಲು ಇಡಿ ಎಂದು ಹೇಳಿದಾಗ, ನಾವು ಅಲ್ಲಿಗೆ ಹೋಗಿ  ರಾಷ್ಟ್ರ ಧ್ವಜವನ್ನು ಹಾರಿಸಲೇಬೇಕು ಎಂದು  ಹಾರಿಸಿದವರು. ತ್ರಿವರ್ಣ ಧ್ವಜಕ್ಕೆ ಅತ್ಯಂತ ಹೆಚ್ಚು ಗೌರವ ಕೊಟ್ಟಿರುವಂತಹ ನಮ್ಮ ಪಕ್ಷ. ನಮ್ಮನ್ನು   ಇವತ್ತು witness box ಗೆ ಏಕೆ ನಿಲ್ಲಿಸುತ್ತಿದ್ದೀರಾ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಈ ಪಕ್ಷ ಸನ್ಮಾನ್ಯ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ರಾಷ್ಟ್ರ ಮತ್ತು ರಾಷ್ಟ್ರ ಧ್ವಜ, ರಾಷ್ಟ್ರಗೀತೆಯ ಬಗ್ಗೆ ನಾವು ಒಡಕು ಮಾತನ್ನಾಡಿಲ್ಲ, ಮಾತನಾಡುವುದಿಲ್ಲ. ಯಾವ hidden agenda ಕೂಡ ಇಲ್ಲ. ಇದೆಲ್ಲಾ ಮುಗಿದು ಹೋಗಿರುವ ಚರ್ಚೆಗಳು. ಇದನ್ನು ಎಲ್ಲರೂ ಒಪ್ಪಿರುವುದು. ನಾವ್ಯಾರು ಅವಮಾನ ಮಾಡಿಲ್ಲ. ಸನ್ಮಾನ್ಯ ಈಶ್ವರಪ್ಪನವರು ಅವಮಾನ ಮಾಡಿಲ್ಲ. ಮಾನ್ಯ ಈಶ್ವರಪ್ಪನವರು ನೇರವಾದ ಮನುಷ್ಯ. ಅವರು ಹೇಳಿಕೆಯನ್ನು ತಿರುಚುವುದಕ್ಕೆ ಹೋಗಿಲ್ಲ. ಹೌದಪ್ಪ, ಅವೊತ್ತಿನ ಸನ್ನಿವೇಶದಲ್ಲಿ ಆಗ ಆಗಿದ್ದು ನಿಜ. ಇಲ್ಲ  ಇನ್ನೊಂದು ಸಮಸ್ಯೆಯನ್ನು ನಾನು ಸೃಷ್ಟಿ ಮಾಡಿಕೊಳ್ಳುವುದಿಲ್ಲ. ಯಾರೋ ಕೇಳಿದಾಗ, ಮಾತು ಬಂದಿದೆ. ನಾನು ಸ್ಪಷ್ಟವಾಗಿದ್ದೇನೆ. ನಾನು ತ್ರಿವರ್ಣ ಧ್ವಜವೇ ರಾಷ್ಟ್ರ ಧ್ವಜ. ನಾನು ಅದಕ್ಕೆ  ಅತ್ಯಂತ ಗೌರವ ಕೊಡುತ್ತೇನೆ. ಯಾರಾದರೂ ಅಗೌರವ ತೋರಿಸಿದರೆ, ಅವರನ್ನು ನಾನು ದೇಶದ್ರೋಹಿ ಎಂದು ಕರೆಯುತ್ತೇನೆ. ಆ ತರಹ ಹೇಳಿರುವ ಮನುಷ್ಯ. ಇದನ್ನು ಬಹಳ ಹಿಂಡಿಕೊಂಡು ಹೋಗುವುದು ಎಷ್ಟರ ಮಟ್ಟಿಗೆ ಸರಿ ಹೇಳಿ?  ದಯವಿಟ್ಟು, ಇದನ್ನು ಇಲ್ಲಿಗೆ ಬಿಟ್ಟು ಬಿಡಿ. ದಯವಿಟ್ಟು, ಸದನ ನಡೆಯಲಿ. ಸಾರ್, ಬಹಳ ಒತ್ತಾಯ ಮಾಡಿ ಅಸೆಂಬ್ಲಿ ಮತ್ತು ಕೌನ್ಸಿಲ್ ಕರೆಸುತ್ತೀರಾ. ಆಮೇಲೆ ನಮ್ಮನ್ನು ಸುಮ್ಮನೆ ಸಿಕ್ಕಿ ಹಾಕಿಸಿಕೊಂಡು, ಮುಂದಕ್ಕೆ

ಹೋಗುತ್ತಾ ಹೋದರೆ, ಮಾನ್ಯ ಹರಿಪ್ರಸಾದ್ ಏನಾಗುತ್ತದೆ. ಅದರ ಬಗ್ಗೆ ಸ್ವಲ್ಪ ಗಮನ ಕೋಡೋಣ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಎಂದು ನಾನು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದರ ಬಗ್ಗೆ ಎಷ್ಟು ಬಾರಿ ಕೇಳಬೇಕೆಂದು ಹೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಕಾನೂನು ಸಚಿವರು ಅವರೊಬ್ಬ ವಕೀಲರು. ನಾನು ಕಾನೂನಿನ ವಿದ್ಯಾರ್ಥಿಯಾಗಿದ್ದರೂ ಕೂಡ ಅವರ ತರಹ ನಾನು ಪಾಸಾಗುವುದಕ್ಕಾಗಲಿಲ್ಲ. ಅವರು interpretation ಮಾಡಿದರಲ್ಲಾ, ಅದು interaction ನಲ್ಲಿ ಹೇಳಿರುವುದು ಎಂದು. ಈ ಪದ ಪುಂಜಗಳೆಲ್ಲಾ ಬೇಡ. ಅವರನ್ನು ಮಾಧ್ಯಮದವರು ಕೇಳಿದಾಗ, ಆ ಪದ ಹೇಳಿರುವಂತಹದ್ದು. ಅದು interaction ಅಲ್ಲ. It is a statement. ನಾನು ತಮ್ಮಷ್ಟು ಬುದ್ಧಿವಂತನಲ್ಲ. ನಾನು ಕಾನೂನಿನ ವಿದ್ಯಾರ್ಥಿಯಾಗಿದ್ದರೂ ಕೂಡ ಫೇಲಾಗಿರುವಂತಹ ವಿದ್ಯಾರ್ಥಿ. ಅದರಿಂದ ತಾವು ಹೇಳಿದಿರಿ. ತಾವು ಆ ಪಕ್ಷಕ್ಕೆ ಹೊಸಬರು. ಆ ಪಕ್ಷದಲ್ಲಿ ಹಳೆಯವರಿದ್ದಾರೆ ನೋಡಿ, ನಾನು ಏನಾದರೂ ಹೇಳುವುದಕ್ಕೆ ಹೋದರೆ ಮತ್ತೆ ಗಲಾಟೆಯಾಗುತ್ತದೆ.

**ಸಭಾಪತಿಯವರು:-** ತಾವು ಮಾತನಾಡುವುದು ಬೇಡ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** 'Organiser' magazine ನಲ್ಲಿ ಆಗಸ್ಟ್ 22ನೇ ತಾರೀಖು 1947ರ editorial ನಲ್ಲಿ ನೋಡಿ. ಆ ಪಕ್ಷದವರು ತ್ರಿವರ್ಣ ಧ್ವಜವನ್ನು ಒಪ್ಪುವುದಿಲ್ಲ. ಅದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ತ್ರಿವರ್ಣ ಮೂರು ಎನ್ನುವುದು, ಅದು ಅಪಶಕುನ ಎಂದು ಹೇಳಿದ್ದಾರೆ. ಅದರಿಂದ ನಾವು ಇತಿಹಾಸಕ್ಕೆ ಹೋಗುವುದು ಬೇಡ. ದಯವಿಟ್ಟು, ತಾವು ಅಶೋಕ ಸ್ಥಂಭದ ಕೆಳಗಡೆ ಕುಳಿತಿದ್ದೀರಿ. ಸಮ ಜ್ಞಾನಿಕ ಪೀಠದಲ್ಲಿ ಇದ್ದೀರಿ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹ ಕುಳಿತಿದ್ದಾರೆ. ಅವರ ಮೇಲೆ ದೇಶದ್ರೋಹ ಪ್ರಕರಣವನ್ನು ದಾಖಲು ಮಾಡುವುದಕ್ಕೆ ದಯವಿಟ್ಟು, ತಾವು ತಮ್ಮ

ಪೀಠದಿಂದ ನಿರ್ದೇಶನ ಕೊಡಿ. ನಿನ್ನೆ ಇಷ್ಟೆಲ್ಲವಾದರೂ ಕೂಡ "ನಾನು ಹೇಳಿರುವುದು ನಿಜ" ಎಂದು ಅವರು ರಾಜರೋಷವಾಗಿ ಹೇಳಿದ್ದಾರೆ.

**ಸಭಾಪತಿಯವರು:-** ದಯವಿಟ್ಟು, ತಾವು ಕುಳಿತುಕೊಳ್ಳಿ. ನಾನು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದರಿಂದ ದಯವಿಟ್ಟು, ತಾವು ಸರ್ಕಾರಕ್ಕೆ ನಿರ್ದೇಶನ ಕೊಡಿ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹ ಬಂದಿದ್ದಾರೆ. ಮಾನ್ಯ ಈಶ್ವರಪ್ಪನವರನ್ನು ವಜಾ ಮಾಡಿದರೆ, ಈ ದೇಶಕ್ಕೂ ಮತ್ತು ರಾಜ್ಯಕ್ಕೂ ಒಳ್ಳೆಯದಾಗುತ್ತದೆ ಎಂದು ನನಗೆ ಅನಿಸುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ದಯವಿಟ್ಟು ಕುಳಿತುಕೊಳ್ಳಿ. ನಾನು ತಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಮಾತನಾಡಿರುವುದು ಯಾವುದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಮಾತುಗಳನ್ನು ದಾಖಲಿಸದಿರುವಂತೆ ಮಾನ್ಯ ಸಭಾಪತಿಯವರು ಸೂಚಿಸಿದ ಹಿನ್ನೆಲೆಯಲ್ಲಿ, ಸದಸ್ಯರ ಮಾತುಗಳನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ವಿರೋಧ ಪಕ್ಷದ ನಾಯಕರೇ ಈಗಾಗಲೇ ಇದರ ಬಗ್ಗೆ ಚರ್ಚೆ ಮಾಡಿ, ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಕಾನೂನು ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ನಾನು ತಮಗೆ ವಿನಂತಿ ಮಾಡುವುದೇನೆಂದರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಲು ತಯಾರಿದ್ದಾರೆ. ಅದಕ್ಕೆ ಉತ್ತರ ಕೊಡಲು

ಮಾನ್ಯ ಸಚಿವರು ಸಹ ಸಿದ್ಧರಿದಾರೆ. ಈಗ ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ನಾನು ಎರಡು ಕಡೆ ಸಾಕಷ್ಟು ವಿಚಾರವನ್ನು ಕೇಳಿ ತಿಳಿದುಕೊಂಡಿದ್ದೇನೆ. ದಯವಿಟ್ಟು, ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ. ಅಜೆಂಡಾ ಪ್ರಕಾರ ತೆಗೆದುಕೊಳ್ಳೋಣ. ದಯವಿಟ್ಟು, ಇದಕ್ಕೆ ಸಹಕಾರ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗ ಪ್ರಶ್ನೋತ್ತರಗಳನ್ನು ಪ್ರಾರಂಭ ಮಾಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಆಗುವುದಿಲ್ಲ. ಆದ್ದರಿಂದ ನಾವು ಇದನ್ನು ಪ್ರತಿಭಟಿಸುತ್ತೇವೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಇದನ್ನು ನಾವು ಒಪ್ಪುವುದಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಹಾಗೆಯೇ, ಮಾನ್ಯ ಮುಖ್ಯಮಂತ್ರಿಗಳು . . . .

**(ಗೊಂದಲ)**

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದರ ಉತ್ತರಗಳು**

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್ ತಮ್ಮ ಪ್ರಶ್ನೆ ಸಂಖ್ಯೆ 228 ನ್ನು ಕೇಳಿ. ಮಾನ್ಯ ಮುನಿರಾಜು ಗೌಡ ತಮ್ಮ ಪ್ರಶ್ನೆ ಸಂಖ್ಯೆ 282 ನ್ನು ಕೇಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಸದನದಲ್ಲಿ ಗೈರು ಹಾಜರಾಗಿದ್ದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುನಿರಾಜು ಗೌಡ ತಮ್ಮ ಪ್ರಶ್ನೆ ಸಂಖ್ಯೆ 282 ನ್ನು ಕೇಳಿ. ದಯವಿಟ್ಟು, ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ 282**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮುನಿರಾಜು ಗೌಡ ಪಿ.ಎಂ.:–** ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ಉತ್ತರ ಸಮಾಧಾನ ತಂದಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುನಿರಾಜು ಗೌಡರವರು ಮದರಸಾ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಇದು legislation ನಲ್ಲಿ exemption ಕೊಟ್ಟಿದ್ದೇವೆ. ಸುಮಾರು 627 ಮದರಸಾಗಳಿವೆ. ಪ್ರತಿಯೊಂದು ಮದರಸಾಗಳಿಗೆ ವರ್ಷಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಉಳಿದೆಲ್ಲಾ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಭಿತ್ತಿ ಪತ್ರಗಳನ್ನು ಹಿಡಿದು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್ ತಮ್ಮ ಪ್ರಶ್ನೆ ಸಂಖ್ಯೆ 253+202ನ್ನು ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹಮದ್‌ರವರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಮಾನ್ಯ ಕೆ.ಟಿ. ಶ್ರೀಕಂಠೇಗೌಡ ತಮ್ಮ ಪ್ರಶ್ನೆ ಸಂಖ್ಯೆ 293+308+206ನ್ನು ಕೇಳಿ.

**ಪ್ರಶ್ನೆ ಸಂಖ್ಯೆ 293+308+206**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಮಗೆ ಸಮಾಧಾನ ತಂದಿಲ್ಲ. ಕಾರಣವೇನೆಂದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರುಗಳ ವೇತನದಲ್ಲಿ ಆಗಾಧವಾದಂತಹ ವ್ಯತ್ಯಾಸವಿದೆ. ರಾಜ್ಯದ "ಡಿ" ಗ್ರೂಪ್ ನೌಕರರುಗಳಿಗೆ ಸುಮಾರು ರೂ.7562 ಗಳ ವ್ಯತ್ಯಾಸವಿದೆ. "ಸಿ" ಗ್ರೂಪ್ ನೌಕರರುಗಳಿಗೆ ಸುಮಾರು ರೂ. 71,731 ಗಳ ವ್ಯತ್ಯಾಸವಿದೆ. "ಬಿ" ಗ್ರೂಪ್ ನೌಕರರುಗಳಿಗೆ ಸುಮಾರು ರೂ. 72,671 ಗಳ ವ್ಯತ್ಯಾಸವಿದೆ. "ಎ" ಗ್ರೂಪ್ ನೌಕರರುಗಳಿಗೆ ಸುಮಾರು ರೂ. 89,686ಗಳ ವ್ಯತ್ಯಾಸವಿದೆ. ಅರ್ಥ "ಎ" ಗ್ರೂಪ್ ನೌಕರರುಗಳಿಗೆ ಶೇಕಡ 135 ರಷ್ಟು, "ಬಿ" ನೌಕರರುಗಳಿಗೆ ಶೇಕಡ 49 ರಷ್ಟು, "ಸಿ" ಗ್ರೂಪ್ ನೌಕರರುಗಳಿಗೆ ಶೇಕಡ 74 ರಷ್ಟು ಹಾಗೂ "ಡಿ" ಗ್ರೂಪ್ ನೌಕರರುಗಳಿಗೆ ಶೇಕಡ 34 ರಷ್ಟು ವೇತನ ವ್ಯತ್ಯಾಸವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರುಗಳ ನಡುವೆ ವೇತನ ವ್ಯತ್ಯಾಸವಿದೆ. ಆದರೆ ಜೀವನ ನಿರ್ವಹಣೆ ವೆಚ್ಚ ಒಂದೇ ಇದೆ. ಮಾರುಕಟ್ಟೆಗೆ ತರಕಾರಿ ಬೆಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರುಗಳಿಗೂ ಒಂದೇ ಇದೆ. ಕಿರಾಣಿ ಅಂಗಡಿಗಳಿಗೆ ಹೋದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರುಗಳಿಗೆ ಒಂದೇ ಬೆಲೆ ಇದೆ. ನಮ್ಮ ರಾಜ್ಯದಲ್ಲಿರುವಂತಹ ಕೇಂದ್ರ ನೌಕರರುಗಳಾದ ಐ.ಎ.ಎಸ್., ಮತ್ತು ಐ.ಪಿ.ಎಸ್. ಅಧಿಕಾರಿಗಳಿಗೆ ಕೇಂದ್ರ ವೇತನ ಆಯೋಗದ ವೇತನ ಸಿಗುತ್ತಿದೆ. ಇವತ್ತು ರಾಜ್ಯ ಸರ್ಕಾರಿ ನೌಕರರುಗಳಿಗೆ ದೊಡ್ಡ ಪ್ರಮಾಣದ ವ್ಯತ್ಯಾಸವಿದೆ. ಇದರ ಜೊತೆಗೆ ಸುಮಾರು 2, 69,562 ಹುದ್ದೆಗಳು ಖಾಲಿ ಇವೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

(ಮುಂದು)

(060) 17.02.2022 11.00 ಟಿಸಿಹೆಚ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಈಗ ಇರುವ ನೌಕರರೇ ಆ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ. ಒಬ್ಬೊಬ್ಬರು 2 ರಿಂದ 3 ಹುದ್ದೆಗಳಗೂ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಂಡು ಕೆಲಸ ನಿರ್ವಹಣೆ ಮಾಡುತ್ತಿದ್ದಾರೆ. ಹಾಗಾಗಿ, ಇವತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ರೂ.8252 ಕೋಟಿಗಳು ಸಂಬಳದ ಹಣ ಉಳಿತಾಯವಾಗುತ್ತಿದೆ. ಈಗ ನಾವು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಈಗಾಗಲೇ ದೇಶದ 25 ರಾಜ್ಯಗಳಲ್ಲಿ ಕೇಂದ್ರದ ಸಮಾನಾಂತರವಾದ ವೇತವನ್ನು ಕೊಡಲಾಗುತ್ತಿದೆ. ನಮ್ಮ ಕರ್ನಾಟಕ ರಾಜ್ಯ ಏಕೆ ಆ 26 ನೇ ರಾಜ್ಯ ಆಗಬಾರದು? ಇಡೀ ದೇಶದ ಒಟ್ಟು 25 ರಾಜ್ಯಗಳಲ್ಲಿ ರಾಜ್ಯ ಸರ್ಕಾರಿ ನೌಕರರಿಗೂ ಕೇಂದ್ರ ಸರ್ಕಾರದ ಸಮಾನಾಂತರ ವೇತನ ಪದ್ಧತಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ದೊಡ್ಡ ಅಂತರವಿದೆ. ಸರ್ಕಾರದ ಉತ್ತರದಲ್ಲಿ 5 ರಿಂದ 6 ವರ್ಷದಲ್ಲಿ ಒಂದು ವೇತನ ಆಯೋಗ ಬರುತ್ತದೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪರಂಪರೆ ಮತ್ತು ಪದ್ಧತಿ ಬೇರೆ ಬೇರೆ ಇದೆಯೆಂದು ಹೇಳಿದ್ದೀರಿ. ಆದರೆ, ವೇತನ ಆಯೋಗ 1960 ರಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ಸುಮಾರು 58 ವರ್ಷಗಳು ಕಳೆದಿವೆ. ಈಗ ಐದು ವರ್ಷದಂತೆ ಲೆಕ್ಕ ಹಾಕಿದರೂ ಹತ್ತು ವೇತನ ಆಯೋಗಗಳು ಬರಬೇಕಾಗಿತ್ತು. ಆದರೆ, ಬರೀ 6 ವೇತನ ಆಯೋಗಗಳು ರಚನೆಯಾಗಿವೆ. ಆದ್ದರಿಂದ ದಯವಿಟ್ಟು ಸನ್ಮಾನ್ಯ ಮುಖ್ಯಮಂತ್ರಿಗಳು 7 ನೇ ವೇತನ ಆಯೋಗವನ್ನು ರಚನೆ ಮಾಡಬೇಕು. ಇಲ್ಲದಿದ್ದರೆ ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಕ್ಕೆ ಸರಿಸಮಾನವಾದಂಥ ವೇತನವನ್ನಾದರೂ ಕೊಡಬೇಕು. ಅದನ್ನು ಘೋಷಣೆ ಮಾಡಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ 6ನೇ ವೇತನ ಆಯೋಗ ಜಾರಿಯಲ್ಲಿದೆ. ಮೊದಲಿನಿಂದಲೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೇತನದಲ್ಲಿ ವ್ಯತ್ಯಾಸವಿದೆ. ಏಕೆಂದರೆ, ಕೇಂದ್ರದ ವೇತನವನ್ನು ಕೇಂದ್ರ ವೇತನ ಆಯೋಗ ನಿರ್ಧಾರ ಮಾಡುತ್ತದೆ. ರಾಜ್ಯದ ವೇತನವನ್ನು ರಾಜ್ಯ ವೇತನ ಆಯೋಗ ನಿರ್ಣಯ ಮಾಡುತ್ತದೆ. ರಾಜ್ಯದ ವೇತನ ಆಯೋಗವು ಪ್ರತಿ ಐದು ಮತ್ತು ಆರು ವರ್ಷಗಳಿಗೊಮ್ಮೆ ರಾಜ್ಯ ವೇತನ ಆಯೋಗ ಪರಿಷ್ಕರಣೆಯಾಗುತ್ತದೆ. ಕಳೆದ

2017-18ನೇ ಸಾಲಿನಲ್ಲಿ ರಾಜ್ಯದ ವೇತನ ಪರಿಷ್ಕರಣೆಯಾಗಿದೆ. ನಾವು ಇವತ್ತಿನ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳಿದಂತೆ, ನಮ್ಮ ರಾಜ್ಯದ ಸರ್ಕಾರಿ ನೌಕರರು ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ಹಲವಾರು ಜವಾಬ್ದಾರಿಗಳನ್ನು ಕೈಗೊಳ್ಳುತ್ತಿದ್ದಾರೆ. " ಕೋವಿಡ್-19 ಸಂದರ್ಭದಲ್ಲಿ ರಾಜ್ಯ ಸರ್ಕಾರಿ ನೌಕರರು ಬಹಳ ಒಳ್ಳೆಯ ಕೆಲಸಗಳನ್ನು" ಮಾಡಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು, ಈಗ ನಾವು ಹೇಗಿದ್ದರೂ ಆರ್ಥಿಕ ಸ್ಥಿತಿಗಳಿಗೆ ಸಂಬಂಧಪಟ್ಟಂತೆ ಬಜೆಟ್ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಹಾಗಾಗಿ, ಅದಕ್ಕೆ ಸಂಬಂಧಪಟ್ಟಂತೆ ಮುಂದೆ ಬರುವಂತಹ 2022-23ನೇ ಸಾಲಿನ ವರ್ಷದಲ್ಲಿ ಈ ವೇತನ ಆಯೋಗವನ್ನು ರಚನೆ ಮಾಡುವುದಕ್ಕೆ ನಾನು ಚರ್ಚೆ ಮಾಡಿ, ಅಂತಿಮವಾದ ತೀರ್ಮಾನವನ್ನು ಕೈಗೊಳ್ಳುತ್ತೇನೆ. ನಮ್ಮ ರಾಜ್ಯದ ಸರ್ಕಾರಿ ನೌಕರರ ವೇತನದಲ್ಲಿ ಯಾವುದೇ ರೀತಿಯ ತೊಂದರೆ ಮತ್ತು ಅವರ ಜೀವನ ನಿರ್ವಹಣೆಗೆ ತೊಂದರೆಯಾಗದಂತೆ ರಾಜ್ಯ ಸರ್ಕಾರ ಕ್ರಮವನ್ನು ವಹಿಸುತ್ತದೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯ ಸರ್ಕಾರಿ ನೌಕರರ ಬೇಡಿಕೆಯನ್ನು ಪರಿಶೀಲಿಸಿ, ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಅದಕ್ಕಾಗಿ ಈ ಸಂದರ್ಭದಲ್ಲಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟವರ ಜೊತೆ ಚರ್ಚೆ ಮಾಡಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಹಾಗಾಗಿ, ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಈ ಹೇಳಿಕೆಯನ್ನು ಬಹಳ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಪ್ರಸ್ತುತ ರಾಜ್ಯದಲ್ಲಿ 2,69,000 ಹುದ್ದೆಗಳು

ಖಾಲಿಯಿವೆ. ಆ ಖಾಲಿಯಿರುವ ಹುದ್ದೆಗಳನ್ನು ತುಂಬಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಕಳೆದ ಹಲವಾರು ವರ್ಷಗಳಿಂದ ಆರ್ಥಿಕ ಸ್ಥಿತಿಗೆ ಅನುಗುಣವಾಗಿ, ಕೆಲವು ನಿರ್ಬಂಧಗಳನ್ನು ಹೇರಿದ್ದರು. ಈಗ ಕಾಲ ಕಾಲಕ್ಕೆ ಅನುಗುಣವಾಗಿ ಆ ನಿರ್ಬಂಧಗಳನ್ನು ತೆಗೆಯುತ್ತಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಆರ್ಥಿಕ ಹಿಂಜರಿತ ಆಗಿರುವುದು ತಮ್ಮೆಲ್ಲರಿಗೂ ಸಹ ಗೊತ್ತಿದೆ. ಕೋವಿಡ್-19ನಿಂದ ಜಾಗತಿಕವಾಗಿ ಆರ್ಥಿಕ ಹಿಂಜರಿತವಾಗಿದೆ. ಈ ಆರ್ಥಿಕ ಹಿಂಜರಿತ ನಮ್ಮ ರಾಜ್ಯಕ್ಕೂ ಕೂಡ ಆಗಿದೆ. ಈ ಅರ್ಥಿಕ ಹಿಂಜರಿತದಿಂದ ಕೆಲವು ಹುದ್ದೆಗಳನ್ನು ತುಂಬುವುದಕ್ಕೆ ಸಾಧ್ಯವಾಗದಿದ್ದರೂ ಕೂಡ, essential service ಆಗಿರುವಂತಹ ಹದಿನೈದು ಸಾವಿರ ಶಿಕ್ಷಕರ ಹುದ್ದೆಗಳ ನೇಮಕಾತಿಗೆ ನಾನು ಆದೇಶ ಮಾಡಿದ್ದೇನೆ. ಇದನ್ನು ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಗಮನಿಸಬೇಕು. ಕಳೆದ ವರ್ಷಗಳಿಂದ ಶಿಕ್ಷಕರ ನೇಮಕಾತಿ ಆಗಿರಲಿಲ್ಲ. ಈಗ ಸುಮಾರು ಹದಿನಾರು ಸಾವಿರ ಪೋಲೀಸ್ ಹುದ್ದೆಗಳ ನೇಮಕಾತಿ ನಡೆಯುತ್ತಿದೆ. ಸುಮಾರು ಹದಿನಾಲ್ಕು ಸಾವಿರ ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ವಿವಿಧ ಇಲಾಖೆಗಳಲ್ಲಿ ವಿವಿಧ ರೀತಿಯ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೂ ಕೂಡ ಸರ್ಕಾರ ಆಜ್ಞೆಯನ್ನು ಮಾಡಿದೆ. ಈ ರೀತಿ ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಅಲ್ಲೆಲ್ಲಾ ಕಂಡಿತವಾಗಿಯು ಸರ್ಕಾರ ಹೊಸ ಹುದ್ದೆಗಳನ್ನು ಸೃಷ್ಟಿ ಮಾಡುವುದು ಮತ್ತು ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವುದಕ್ಕೆ ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ಹಂತ-ಹಂತವಾಗಿ ಕ್ರಮವನ್ನು ಜರುಗಿಸುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದಯಮಾಡಿ ಆದಷ್ಟು ಬೇಗ 7ನೇ ವೇತನ ಆಯೋಗವನ್ನು ರಚನೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 214**

**(ಉತ್ತರ ಲಗತ್ತಿಸಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಈ ಐ.ಎಂ.ಎ ಹಗರಣದಲ್ಲಿ ಕೆಳಹಂತದ ಅಧಿಕಾರಿಗಳ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ, ಇದಕ್ಕೆ ನೇರವಾಗಿ ಸಂಬಂಧಿಸಿರುವಂತಹ ಐ.ಪಿ.ಎಸ್ ಅಧಿಕಾರಿಗಳು ಯಾರಿದ್ದಾರೆ, ಅವರ ಮೇಲೆ ಏಕೆ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಶ್ನೆಯನ್ನು ಕೇಳಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈ ಹಗರಣದಲ್ಲಿ ಯಾರ್ಯಾರು ಭಾಗಿಯಾಗಿದ್ದಾರೆ ಅವರೆಲ್ಲರ ಮೇಲೂ ಕೂಡ ನಿರ್ದಾಕ್ಷಿಣ್ಯವಾಗಿ ಕಾನೂನಾತ್ಮಕವಾದ ಕ್ರಮಗಳನ್ನು ಕೈಗೊಂಡಿದ್ದೇವೆ. ಇದರಲ್ಲಿ ಇಬ್ಬರು ಐಪಿಎಸ್ ಅಧಿಕಾರಿಗಳು ಇದ್ದಾರೆ. ಶ್ರೀ ಹೇಮಂತ್ ನಿಂಬಾಳ್ಕರ್ ರವರ ಮೇಲೆ ಈಗಾಗಲೇ ಚಾರ್ಜ್‌ಶೀಟ್ ಫೈಲ್ ಮಾಡಿದ್ದೇವೆ. ಈಗ prosecution ಗೆ ಅನುಮತಿಯನ್ನು ಸಹ ನೀಡಿದ್ದಾರೆ. ನಮ್ಮ ಸರ್ಕಾರ ಅವರನ್ನು prosecute ಮಾಡಬೇಕೆಂದು ಅನುಮತಿಯನ್ನು ಸಹ ನೀಡಿದೆ. ಆದರೆ, ಅವರು ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಅವರು prosecution permission ಅನ್ನು quash ಮಾಡಿಸಿದ್ದಾರೆ. ಈಗ ಅದು ಸಿಬಿಐ enquiry ಯಲ್ಲಿ ಇರುವುದರಿಂದ, ಸಿಬಿಐ ನವರು ಮಾನ್ಯ ಸುಪ್ರೀಂ ಕೋರ್ಟ್‌ಗೆ ಅಪೀಲ್ ಸಲ್ಲಿಸಿದ್ದಾರೆ. ಮಾನ್ಯ ಸುಪ್ರೀಂ ಕೋರ್ಟ್‌ನಿಂದ ನಿರ್ದೇಶನ ಬಂದ ತಕ್ಷಣವೇ ಮುಂದಿನ ಕ್ರಮವನ್ನು ಜರುಗಿಸಲಾಗುವುದು.

ಈಗ ಮತ್ತೊಬ್ಬ ಐ.ಪಿ.ಎಸ್ ಅಧಿಕಾರಿಯಾದ ಶ್ರೀ ಅಜಯ್ ಹಿಲೋರಿ ಇವರ ಮೇಲೂ ಸಹ prosecution ಗೆ ಅನುಮತಿ ನೀಡಿ ಅವರ ಮೇಲೆ ಚಾರ್ಜ್‌ಶೀಟ್ ಸಹ ಹಾಕಿದ್ದೇವೆ. ಇವರು ಐಪಿಎಸ್ ಅಧಿಕಾರಿಯಾಗಿರುವುದರಿಂದ, ಭಾರತ ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸಿದ್ದೇವೆ. ಅಲ್ಲಿಂದ ನಿರ್ದೇಶನ ಬಂದ ತಕ್ಷಣವೇ ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದಕ್ಕೆ ಯಾರ ಮುಲಾಜು ಇಲ್ಲ. ಈಗ IPS ಅಧಿಕಾರಿ ಇರಲಿ ಅಥವಾ IPS ಅಲ್ಲದ ಅಧಿಕಾರಿಯಾಗಲಿ,

ತಪ್ಪಿತಸ್ಥರೆಲ್ಲರಿಗೂ ಸಹ ಶಿಕ್ಷೆ ಆಗಲೇಬೇಕು. ಇದರ ಆಳಕ್ಕೆ ಹೋಗಿ ವಿಚಾರಣೆಯಾಗಿ, ಚಾರ್ಜ್‌ಶೀಟ್ ಕೂಡ ಹಾಕಲಾಗಿದೆ. ಈ ಚಾರ್ಜ್‌ಶೀಟ್ ಅನ್ವಯ ಶಿಕ್ಷೆಯನ್ನು ನೀಡುವುದಕ್ಕೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**(ಪ್ರಶ್ನೆ ಸಂಖ್ಯೆ.220)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡರವರು ಗೈರು ಹಾಜರಿದ್ದರು)**

**(ಪ್ರಶ್ನೆ ಸಂಖ್ಯೆ.247)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿರವರು ಗೈರು ಹಾಜರಿದ್ದರು)**

**ಪ್ರಶ್ನೆ ಸಂಖ್ಯೆ: 205**

**(ಉತ್ತರ ಲಗತ್ತಿಸಿದೆ)**

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಇದನ್ನು ಒಂದು ಬಾರಿ ಪರಿಶೀಲನೆ ಮಾಡಬೇಕು. ಏಕೆಂದರೆ, ಆ ಡ್ಯಾಂಗೆ ನಮ್ಮ ಹತ್ತು ಎಕರೆ ತೋಟ ಕೂಡ ಮುಳುಗಡೆಯಾಗಿತ್ತು. ಅಲ್ಲಿ ನೀರು ನಿಲ್ಲದೇ ಇರುವುದರಿಂದ, ಇಲ್ಲಿಯವರೆಗೂ ಅಲ್ಲಿ ನೀರಾವರಿ ಸೌಲಭ್ಯ ಬಳಸಿಕೊಂಡಿಲ್ಲ. ದಯಮಾಡಿ, ಒಂದು ಬಾರಿ ಪರಿಶೀಲನೆ ಮಾಡಿ, ಅದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ನಾನೇ ಪರಿಶೀಲನೆ ಮಾಡಿ, ಅದರ ಬಗ್ಗೆ ತೀರ್ಮಾನ ಮಾಡುತ್ತೇನೆ.

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 239**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಒಂದು ಬಹಳ ಪ್ರಮುಖವಾದಂತಹ ಪ್ರಶ್ನೆಯಾಗಿದೆ. ಇಲ್ಲಿಯವರೆಗೆ ಬಿಡಿಎ ಯವರು 64 ಬಡಾವಣೆಗಳಲ್ಲಿ ಲೆಕ್ಕ ಶೋಧನೆಯನ್ನು ಮಾಡಿದ್ದಾರೆ. ಇಲ್ಲಿಯವರೆಗೆ ಸುಮಾರು 32,380 ಎಕರೆಯನ್ನು ಪ್ರದೇಶವನ್ನು acquire ಮಾಡಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಜಗತ್ತಿನಲ್ಲಿ ಎಲ್ಲಿಯಾದರು ಈ ರೀತಿಯ ಸದನವನ್ನು ನಡೆಸುತ್ತಾರೆಯೇ? ಸರ್ಕಾರ ಏನಾದರೂ ಒಂದು ಇತ್ಯರ್ಥ ಮಾಡದೆ, ಈ ರೀತಿಯ ಗದ್ದಲದಲ್ಲಿ ಸದನ ನಡೆಸುವುದೇ?

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಏನು ಮಾಡುವುದಕ್ಕೆ ಆಗುತ್ತದೆ? ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಿಮ್ಮ ಕೈಯಲ್ಲಿ ಸದನ ನಡೆಸುವುದಕ್ಕೆ ಆಗದಿದ್ದರೆ ಸದನವನ್ನು ಮುಂದೂಡಿ. **(ಗೊಂದಲ)** ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ತಾಕತ್ತು ಇಲ್ಲವೆಂದರೆ ಸದನವನ್ನು ಮುಂದೂಡಿ.

**(ಮುಂದು)**

(061)17.2.2022/11.10/ಎಂ.ಎಂ-ಜಿ.ಆರ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

(ಗೊಂದಲ)

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ದಯಮಾಡಿ ಕುಳಿತುಕೊಳ್ಳಿ. ಏನು ಮಾಡುವುದಕ್ಕಾಗುತ್ತದೆ? (ಗೊಂದಲ) ನಾನು ಸದನವನ್ನು ನಡೆಸಬೇಕು.

**ಶ್ರೀ ಮರಿತಿಬ್ಬೇಗೌಡ:-** (ಗೊಂದಲ) ಸದನವನ್ನು ನಡೆಸುವುದಕ್ಕಾಗುವುದಿಲ್ಲ ಎಂದು ನೀವು ಪೀಠದಿಂದ ಸರ್ಕಾರಕ್ಕೆ ಹೇಳಬೇಕು.

**ಸಭಾಪತಿಯವರು:-** ಈಗ ಶ್ರೀ ತಳವಾರ್ ಸಾಬಣ್ಣನವರ ಪ್ರಶ್ನೆ. ಮಾನ್ಯ ಮರಿತಿಬ್ಬೇಗೌಡರೇ ಸುಮ್ಮನೇ ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡರು:-** ಸರ್ಕಾರಕ್ಕೆ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ, ಸದನವನ್ನು ನಡೆಸುವುದಕ್ಕೆ ಬರುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರ ಪ್ರಶ್ನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:- 234**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವುದಕ್ಕೆ ಉತ್ತರ ಸಿಕ್ಕಿಲ್ಲ. ಸಮಸ್ಯೆ ಏನೆಂದರೆ, ಇಲ್ಲಿ ನಕಲಿ ಕಾರ್ಮಿಕರು ಅಂದರೆ, ಕಟ್ಟಡ ಕಾರ್ಮಿಕರಿಗೆ ಬೇಕಾಗಿರುವಂತಹ ಕಾರ್ಮಿಕರ ಕಾರ್ಡುಗಳನ್ನು ನಕಲಿ ಕಾರ್ಮಿಕರಿಗೆ ನೀಡುತ್ತಿದ್ದಾರೆ. ನೈಜ ಕಾರ್ಡುದಾರರಿಗೆ ಅವಕಾಶ ಸಿಗುತ್ತಿಲ್ಲ. ಈ ಕಟ್ಟಡ ಕಾರ್ಮಿಕರು ತೀರಾ ಬಡವರಿದ್ದಾರೆ, ಹಿಂದುಳಿದ ಜಿಲ್ಲೆಗಳಿಂದ ಬಂದಿದ್ದಾರೆ. ಕಲಬುರ್ಗಿ, ಯಾದಗಿರಿ, ಬಾಗಲಕೋಟೆ, ರಾಯಚೂರು ಮತ್ತು ಬಿಜಾಪುರ ಇಲ್ಲಿಂದ ಬಂದವರೆಲ್ಲರೂ ವಲಸೆ ಕಾರ್ಮಿಕರಾಗಿದ್ದಾರೆ. ಇವರಿಗೆ ಬೇಕಾಗಿರುವಂತಹ ಸರ್ಕಾರಿ ಸವಲತ್ತುಗಳು ಸಿಗುತ್ತಿಲ್ಲ. ಅವರ ಸಲುವಾಗಿ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಹಣವನ್ನು ಪಡೆದು ನಕಲು ಕಾರ್ಮಿಕರಿಗೆ ಕಾರ್ಡುಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ಪರಿಹಾರ ಬೇಕಾಗಿದೆ.

**(ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಕಲಿ ಕಾರ್ಡುಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಮೇಲೆ ಕಾರ್ಡುಗಳನ್ನು ವಿತರಣೆ ಮಾಡುವಂತಹ ಕ್ರಮವನ್ನು ತಾತ್ಕಾಲಿಕವಾಗಿ ರದ್ದುಪಡಿಸಿದ್ದೇವೆ. ಅಷ್ಟೇ ಅಲ್ಲ, ಯಾವ ರೀತಿ ನಕಲಿ ಕಾರ್ಡುಗಳನ್ನು ಮಾರುತ್ತಿದ್ದಾರೆ ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಅಧಿಕಾರಿಗಳ ಸಮಿತಿಯನ್ನು ಕೂಡ ನಿಯೋಜನೆ ಮಾಡಿದ್ದೇವೆ. ಅದರಲ್ಲಿ ಅಕಸ್ಮಾತ್ ಯಾರೇ ನಕಲಿ ಕಾರ್ಡ್ ಪಡೆದಿರುವುದು ಗೊತ್ತಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅಧಿಕಾರಿಗಳ ಮೇಲೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ನಕಲಿ ಕಾರ್ಡು ಮಾಡುವುದಕ್ಕೆ ಅವಕಾಶ ಇಲ್ಲ. ಯಾರಿಗೆ ಅರ್ಹತೆ ಇದೆ, ಅವರೆಲ್ಲರಿಗೂ ಕಾರ್ಡುಗಳನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ.

**ಸಭಾಪತಿಯವರು:-** ಈಗ ಶ್ರೀ ಎಸ್. ರವಿಯವರ ಪ್ರಶ್ನೆ. [ಮಾನ್ಯ ಸದಸ್ಯರಾದ ಎಸ್. ರವಿಯವರು ಬಾವಿಯಲ್ಲಿ ಧರಣಿನಿರತರಾಗಿದ್ದರು] ಶ್ರೀ ಸಿ.ಎನ್. ಮಂಜೇಗೌಡರ ಪ್ರಶ್ನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 244**

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು) (ಜಲಸಂಪನ್ಮೂಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯು ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ. ಅದಕ್ಕೆ ಸ್ವಲ್ಪ ಟೈಂ ಕೊಡಬೇಕು.

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ನಿಮ್ಮ ಪ್ರಶ್ನೆ ವರ್ಗಾವಣೆಯಾಗಿದೆ. ಈಗ ಶ್ರೀ ಕೆ. ಹರೀಶ್‌ಕುಮಾರ್‌ರವರ ಪ್ರಶ್ನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 322**

(ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್‌ರವರು ಧರಣಿಯಲ್ಲಿ ಪಾಲ್ಗೊಂಡಿದ್ದರಿಂದ ಪ್ರಶ್ನೆಯನ್ನು ಕೇಳಲಿಲ್ಲ)

**ಸಭಾಪತಿಯವರು:-** ಶ್ರೀ ಎಂ.ಎಲ್. ಅನಿಲ್ ಕುಮಾರ್‌ರವರು ಪ್ರಶ್ನೆ ಕೇಳಲಿ.

**ಚುಕ್ಕೆ ಪ್ರಶ್ನೆ ಸಂಖ್ಯೆ: 317**

(ಮಾನ್ಯ ಸದಸ್ಯರಾದ ಶ್ರೀ ಎಂ.ಎಲ್. ಅನಿಲ್ ಕುಮಾರ್‌ರವರು ಧರಣಿಯಲ್ಲಿ ಪಾಲ್ಗೊಂಡಿದ್ದರಿಂದ ಪ್ರಶ್ನೆಯನ್ನು ಕೇಳಲಿಲ್ಲ)

**ಸಭಾಪತಿಯವರು:-** ಈಗ ಮಾನ್ಯ ಗೋವಿಂದರಾಜುರವರ ಪ್ರಶ್ನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 274**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಣ್ಣ ನೀರಾವರಿ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಏನು ಸಣ್ಣ ನೀರಾವರಿ ಇಲಾಖೆಯಡಿ ಬರುವ ಕೆರೆಗಳ ಹೂಳನ್ನು ಸಣ್ಣ ನೀರಾವರಿ ಇಲಾಖೆಯಿಂದ ತೆಗೆಯದೇ, ಕೆರೆಗಳಲ್ಲಿ ನೀರು ತುಂಬಿದ ಮೇಲೆ ಸರ್ಕಾರಿ ಹಣವನ್ನು ಬಿಲ್ ಮಾಡಿ ಸರ್ಕಾರಕ್ಕೆ ಮೋಸ ಮಾಡಿದ್ದಾರೆ. ಇದನ್ನು ಸಣ್ಣ ನೀರಾವರಿ ಇಲಾಖೆಯಿಂದ ತನಿಖೆ ಮಾಡಿಸಬೇಕು. ಏತಕ್ಕೆ ಹೂಳನ್ನು ತೆಗೆಯದೇ ಬಿಲ್ ಮಾಡಿಕೊಂಡು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಹಣವನ್ನು ಲಪಟಾಯಿಸಿದ್ದಾರೆ ಅದನ್ನು ಸರಿಯಾದ ರೀತಿಯಲ್ಲಿ ತನಿಖೆ ಮಾಡಿಸಿ, ಹೂಳನ್ನು ತೆಗೆಯದಿರುವಂತಹ ಕೆರೆಗಳನ್ನು ತನಿಖೆಗೊಳಪಡಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟವಾಗಿ ಯಾವುದಾದರೂ ಪ್ರಕರಣದ ಮಾಹಿತಿ ಕೊಟ್ಟರೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತನಿಖೆ ಮಾಡಿಸಿ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಒದಗಿಸಿಕೊಡುತ್ತೇನೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಚಿವರೇ, ಸರಿ.

**ಸಭಾಪತಿಯವರು:-** ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 17ನೇ ಫೆಬ್ರವರಿ 2022, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 105 ಪ್ರಶ್ನೆಗಳ ಪೈಕಿ 25 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೇ, ಸ್ವಲ್ಪ ಇಲ್ಲಿ ಕೇಳಿ. (ಗೊಂದಲ) ಇದು ಸದನ. ನೀವು (ಗೊಂದಲ) ಮಾಡಬೇಡಿ. ನೀವು ಹೇಳಬೇಕು.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ನೀತಿಗೆಟ್ಟ ಸರ್ಕಾರವಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿಲ್ಲ. ಮುಖ್ಯಮಂತ್ರಿಗಳು ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಟ್ಟರು. ಮಂತ್ರಿಗಳು ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಡುತ್ತಿದ್ದಾರೆ. ದಯವಿಟ್ಟು ಈ ರೀತಿ ಆಗಬಾರದು. ಸದನವನ್ನು ಸ್ಥಗಿತಗೊಳಿಸಿ. (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಯಾವ ಗೊಂದಲವೂ ಆಗಿಲ್ಲ. ಇವರು (ಗೊಂದಲ) ಕೇಳುವುದು ತಡವಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, (ಗೊಂದಲ) ಸದನಕ್ಕೆ ಸರಿಯಾಗಿ ಉತ್ತರ ಕೊಡುತ್ತಿಲ್ಲ. ಸದನವು ಸರಿಯಾಗಿ ನಡೆಯುತ್ತಿಲ್ಲ. ತಾವು ಸದನವನ್ನು ಸ್ಥಗಿತಗೊಳಿಸಿ.

**ಸಭಾಪತಿಯವರು:-** ಒಂದು ಪ್ರಶ್ನೆಗೆ ಗದ್ದಲವಿತ್ತು, ಪುನಃ ಅದನ್ನು ಸರಿಯಾಗಿ ರೆಕ್ಟಿಫೈ ಮಾಡಿದರು. ಅದು ಆಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಪ್ಪಾಗಿದೆಯಲ್ಲವೇ? ಅದಕ್ಕಾಗಿ ತಾವು ಸದನವನ್ನು ಸ್ಥಗಿತಗೊಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಏನು ತಪ್ಪಾಗಿದೆ?

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ ೦3 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 11 ಗಂಟೆ 16 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 03:00 ಗಂಟೆಗೆ ಸೇರಲು ನಿಶ್ಚಯಿಸಿತು)**

(62)17-02-2022(03-30)bsd-ak

**(ಭೋಜನ ವಿರಾಮದ ನಂತರ ಸದನವು ಅಪರಾಹ್ನ 3 ಗಂಟೆ 34 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

3. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:- "ರಾಷ್ಟ್ರಧ್ವಜಕ್ಕೆ ಸಚಿವರೊಬ್ಬರು ಅಗೌರವ ತೋರಿದ್ದಾರೆ ಎನ್ನುವ ಬಗ್ಗೆ**

**- - - -**

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಬೆಳಗ್ಗೆ ನಾವು ತಮ್ಮಲ್ಲಿ ವಿನಂತಿಸಿದಂತೆ, ಮಾನ್ಯ ಈಶ್ವರಪ್ಪನವರು ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದ್ದು, ಅವರ ವಿರುದ್ಧ ರಾಷ್ಟ್ರದ್ರೋಹ ಪ್ರಕರಣವನ್ನು ದಾಖಲಿಸಿ ಬಂಧಿಸಬೇಕು. ಇದಲ್ಲದೇ ಅವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ, ತಮಗೆ ಮನವಿ ಮಾಡಿದ್ದೆವು. ಇದರಿಂದ ಸಂವಿಧಾನಕ್ಕೆ ಅಪಚಾರವಾಗುವುದಲ್ಲದೇ ದೇಶದ್ರೋಹದ ಕೆಲಸವಾಗಿದೆ. ಇಂತಹ ಹಲವು ಪ್ರಕರಣಗಳು ದೇಶದಲ್ಲಿ ನಡೆದಾಗ ಇದರಲ್ಲಿ ಪಾಲ್ಗೊಂಡ ನಾಗರಿಕರನ್ನು ಬಂಧಿಸಿ, ದೇಶದ್ರೋಹದ ಪ್ರಕರಣ ದಾಖಲಿಸಿದ್ದಾರೆ. ಆದರೆ ಬಿಜೆಪಿ ಸರ್ಕಾರದ ಮಂತ್ರಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕ್ರಮ ತೆಗೆದುಕೊಳ್ಳುವ ಬದಲು ಅವರು ಮಾಡಿದ್ದು ಸರಿಯಿದೆ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ಈ ಬಗ್ಗೆ ಸರ್ಕಾರ ನಿರ್ಧಾರ

ತೆಗೆದುಕೊಂಡು ಸಂಬಂಧಪಟ್ಟ ಸಚಿವರಿಂದ ರಾಜೀನಾಮೆ ತೆಗೆದುಕೊಳ್ಳಬೇಕು ಮತ್ತು ಅವರ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಬೇಕು. ಇಂತಹ ವಿಷಯದಲ್ಲಿ ಬೇರೆ ನಾಗರಿಕರಿಗೆ ಆದಂತೆ ಮಾನ್ಯ ಈಶ್ವರಪ್ಪನವರಿಗೂ ಆಗಬೇಕು. ಈ ರೀತಿ ಪ್ರಕರಣಗಳು ದೇಶದಲ್ಲಿ ಬಹಳಷ್ಟು ನಡೆದಿವೆ. ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಇಂತಹ ವಿಷಯದಲ್ಲಿ ದೇಶದ್ರೋಹದ ಪ್ರಕರಣ ದಾಖಲಿಸುತ್ತವೆ. ನಮಗೆ ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ಸಂವಿಧಾನದ ಮೇಲೆ ಗೌರವ ಇದೆ. ಸಂವಿಧಾನಬದ್ಧವಾಗಿ ಅವುಗಳಿಗೆ ಏನು ಗೌರವ ಕೊಡಬೇಕೋ, ಅದನ್ನು ಕೊಡಬೇಕು. ಆದ್ದರಿಂದ ಕೂಡಲೇ ಮಾನ್ಯ ಈಶ್ವರಪ್ಪನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಅವರ ರಾಜೀನಾಮೆ ಪಡೆದು ಬಂಧಿಸಬೇಕು. ದೇಶದ್ರೋಹದ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸುತ್ತೇನೆ. ಈ ಕ್ರಮಕ್ಕೆ ಮುಂದಾಗದಿದ್ದರೆ ಅನಿವಾರ್ಯವಾಗಿ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಈ ಪ್ರಕರಣ ನಮ್ಮ ದೇಶದ ಗೌರವದ ಪ್ರಶ್ನೆಯಾಗಿದೆ. ಇದಲ್ಲದೇ ಸಂವಿಧಾನವನ್ನು ರಕ್ಷಣೆ ಮಾಡಬೇಕಾದ ಆದ್ಯ ಕರ್ತವ್ಯ ಎಲ್ಲಾ ಶಾಸಕರದ್ದಾಗಿದೆ. ಇಂತಹ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ ಇನ್ನು ಮುಂದೆ ಎಲ್ಲರೂ ಇದನ್ನೇ ಅನುಸರಿಸುತ್ತಾರೆ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿನ್ನೆಯಿಂದ ಇದೇ ಮಾತನ್ನು ಹೇಳುತ್ತಿದ್ದಾರೆ. ನಿನ್ನೆ ಮಾನ್ಯ ಮಾಧುಸ್ವಾಮಿ ರವರು ಮಾನ್ಯ ಈಶ್ವರಪ್ಪನವರು ಏನು ಮಾತನಾಡಿದರು ಎಂದು ಹೇಳಿದರು. ಇದು one-sided ಆಗಬಾರದು. ರಾಷ್ಟ್ರದ್ರೋಹ, ದೇಶದ್ರೋಹ ಇತ್ಯಾದಿ ಹೇಳಿಕೊಂಡು ಸುಳ್ಳನ್ನು 10 ಸಾರಿ ಹೇಳುತ್ತಿದ್ದಾರೆ. (ಗೊಂದಲ) ಅವರು ಏನು ಹೇಳಿದ್ದಾರೆ ಎಂದು ಸದನದಲ್ಲಿ ಮಾನ್ಯ ಸಚಿವರು ನಿನ್ನೆ ಹೇಳಿದ್ದಾರೆ. ಈಗ ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದಾರೆ. (ಗೊಂದಲ) Cabinet ಸಚಿವರ ಮೇಲೆ ಆಪಾದನೆ ಮಾಡುತ್ತಿದ್ದಾರೆ.

**ಸಭಾಪತಿಯವರು:-** ಶ್ರೀ ಪ್ರಕಾಶ್ ರಾಥೋಡ್ ತಾವು ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಪದೇ ಪದೇ ಹೇಳುವುದಕ್ಕೆ ಹೋಗುವುದಿಲ್ಲ, ಸರ್ಕಾರ ಈ ವಿಷಯವನ್ನು ಏಕೆ ಪ್ರತಿಷ್ಠೆಯನ್ನಾಗಿ ಸ್ವೀಕರಿಸಿದೆ? ಸಿದ್ಧಾಂತಗಳ ಹಿಂದೆ ಹೋಗುವ ಪಕ್ಷ ಅವರದ್ದಾಗಿದೆ, ದೇಶ ಮೊದಲು ಎಂದು ಹೇಳುವ ಪಕ್ಷ ಅವರದ್ದಾಗಿದೆ. ರಾಷ್ಟ್ರಧ್ವಜದ ಬಗ್ಗೆ ದೇಶದ್ರೋಹದ ಕೆಲಸ ಆಗಿದೆ. ಇದರಿಂದ ಅವರಿಗೆ

ಒಳ್ಳೆಯದಾಗಿ, ಇಡೀ ರಾಷ್ಟ್ರದಲ್ಲಿ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡಲಿ, ಆದರೆ ನಾವು ಹೇಳುವುದನ್ನೂ ತಿಳಿದುಕೊಳ್ಳಬೇಕು. ಏಕೆಂದರೆ ಇದು ವೈಯಕ್ತಿಕ ಹೋರಾಟ ಅಲ್ಲ. ನಾವು ನಿನ್ನೆಯಿಂದ ಹೇಳುತ್ತಿದ್ದೇವೆ. ಇದನ್ನು ಪ್ರತಿಷ್ಠೆಯನ್ನಾಗಿ ಮಾಡಬಾರದು. ಒಂದು ಸಂಪ್ರದಾಯವನ್ನು ಮಾಡಿ ಇಡೀ ರಾಷ್ಟ್ರಕ್ಕೆ ತೋರಿಸಬೇಕು. ಅವರ ಪಕ್ಷದ ಮಂತ್ರಿಯ ತಪ್ಪಾದರೂ action ತೆಗೆದುಕೊಳ್ಳುತ್ತೇವೆ ಎನ್ನುವ ಸಂದೇಶ ಕೊಟ್ಟರೆ ಬಹುಶಃ ಎಲ್ಲರೂ ಒಪ್ಪುತ್ತಾರೆ, ಇದಕ್ಕೆ ಅವರು ಮುಂದೆ ಬರಬೇಕೆಂದು ಹೇಳಬಯಸುತ್ತೇನೆ. ಆದ್ದರಿಂದ ಪ್ರತಿಷ್ಠೆಗೆ ಬೀಳದೇ ಪ್ರಶ್ನೆಗಳು. Calling Attention Notices ಸೇರಿದಂತೆ ಅನೇಕ ವಿಚಾರಗಳಿವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ, ಸಾಕು.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರುವ ಈ ಸಮಸ್ಯೆಗೆ ಸಮಜಾಯಿಷಿಯನ್ನು ಕೊಟ್ಟಿದ್ದಾರೆ. ಮಾನ್ಯ ಈಶ್ವರಪ್ಪನವರು ಏನು ಹೇಳಿದ್ದಾರೆ ಎಂದು record ಆಗಿದೆ. T.V/electronic media ದವರ ಮುಂದೆ ಹೇಳಿದ್ದಾರೆ, ಸಂಪೂರ್ಣವಾಗಿ record ಆಗಿದೆ. ಹಾಗಾಗಿ ಸಂಪೂರ್ಣವಾಗಿ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ ಮತ್ತು record ಗಳು ಇವೆ. ಅದನ್ನು ನೋಡಬಹುದು. ಮಾನ್ಯ ಈಶ್ವರಪ್ಪನವರಿಗೆ ದೇಶಭಕ್ತಿ ಮತ್ತು ರಾಷ್ಟ್ರಧ್ವಜದ ಬಗ್ಗೆ ಪಾಠ ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ ಚಿಕ್ಕ ಮಗುವಿನಿಂದ ಶಿವಮೊಗ್ಗದಲ್ಲಿ ಅವರು ಬೆಳೆದ ರೀತಿಯನ್ನು ನಾನು ನೋಡಿದ್ದೇನೆ. ರಾಷ್ಟ್ರಧ್ವಜಕ್ಕೆ ಅವಮಾನವಾದ ಕಡೆ ಜೀವದ ಹಂಗು ತೊರೆದು ಹೋರಾಟದಲ್ಲಿ ಪಾಲ್ಗೊಂಡವರಾಗಿದ್ದಾರೆ. ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬಾರದು ಎಂದು ಹೇಳಿದಾಗ ಅದರ ವಿರುದ್ಧ ಪ್ರತಿಭಟನೆಗೆ ಇಳಿದವರಾಗಿದ್ದಾರೆ. ರಾಷ್ಟ್ರಧ್ವಜದ ಪರವಾಗಿ ಹೋದಾಗ ಆವತ್ತಿನ ಸರ್ಕಾರ ಗುಂಡು ಹಾರಿಸಿ 6 ಜನರನ್ನು ಕೊಂದಿತು. ಇದು ತಮ್ಮ ಜಿಲ್ಲೆಯಾಗಿದ್ದು, ಈ ವಿಷಯ ತಮಗೂ ಗೊತ್ತಿದೆ. ನಾವು ಹೇಳುವ ಅವಶ್ಯಕತೆ ಇಲ್ಲ. ಜಮ್ಮು ಕಾಶ್ಮೀರದ ಲಾಲ್‌ಚೌಕ್‌ಗೆ ಇದೇ ಮಾನ್ಯ ಈಶ್ವರಪ್ಪನವರು ನಮ್ಮೆಲ್ಲರನ್ನೂ ಕರೆದುಕೊಂಡು ಹೋಗಿದ್ದರು.

(ಮುಂದು)

(063)/17.02.2022/3.40/ಹೆಚ್‌ವಿ:ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರಗ ಜ್ಞಾನೇಂದ್ರ(ಮುಂದು):-**

ನಾನು, ಮಾನ್ಯ ಆಯನೂರು ಮಂಜುನಾಥ್‌ರವರು ಮತ್ತು ಇನ್ನು ಇತರರು ಜಮ್ಮು-ಕಾಶ್ಮೀರದ ಲಾಲ್‌ಚೌಕದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವುದಕ್ಕೆ ಹೋಗಿದ್ದೆವು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಹೇಳಿರುವುದನ್ನೇ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುತ್ತಿದ್ದಾಗ ನಾನು ಸುಮ್ಮನೆ ಕುಳಿತುಕೊಂಡು ಕೇಳಿಸಿಕೊಳ್ಳುತ್ತಿದ್ದೆ. ಈಗ ನಾನು ಮಾತನಾಡುತ್ತಿದ್ದೇನೆ, ಅವರು ಕೇಳಿಸಿಕೊಳ್ಳಬೇಕು.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಕೆಲವೊಂದು ಕಡೆಗಳಲ್ಲಿ ರಾಷ್ಟ್ರ ಧ್ವಜ ಹಾರಿಸುವಾಗ ಆಗಿರುವಂತಹ ತಮ್ಮ ಅನುಭವಗಳನ್ನು ಹೇಳುತ್ತಿದ್ದಾರೆ. ವಿರೋಧ ಪಕ್ಷದವರು ಅವರು ಉತ್ತರ ಕೊಡುವುದಕ್ಕೆ ಅವಕಾಶ ನೀಡಬೇಕಾಗಿದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಅವರ ಬಗ್ಗೆ ನನಗೆ ಗೌರವವಿದೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನನ್ನ ಕೆಲಸವನ್ನು ತಾವು ಯಾಕೆ ಮಾಡುತ್ತಿದ್ದೀರಿ? ನನ್ನ ಕೆಲಸವನ್ನು ನಾನು ಮಾಡುತ್ತೇನೆ. ಇಲ್ಲಿ ಎಲ್ಲ ಸದಸ್ಯರು ಹೇಳಿದ ಮಾತನ್ನೇ ಪುನಃಪುನಃ ಹೇಳುತ್ತಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಜಮ್ಮು-ಕಾಶ್ಮೀರದಲ್ಲಿರುವ ಲಾಲ್‌ಚೌಕದಲ್ಲಿ ತ್ರಿವರ್ಣ ಧ್ವಜ ಹಾರುತ್ತಿರಲಿಲ್ಲ. "ಈ ದೇಶದಲ್ಲಿ ತಾಯಿ ಎದೆ ಹಾಲು ಕುಡಿದಿರುವ ಮಕ್ಕಳು ಯಾರಾದರು ಇದ್ದರೆ ಇಲ್ಲಿ ಬಂದು ತ್ರಿವರ್ಣ ಧ್ವಜವನ್ನು ಹಾರಿಸಿ" ಎನ್ನುವ ಸವಾಲು ಹಾಕಿದ್ದರು. ಆಗ ಅಲ್ಲಿ ಧ್ವಜ ಹಾರಿಸುವುದಕ್ಕೆ ಮಾನ್ಯ ಕೆ.ಎಸ್.ಈಶ್ವರಪ್ಪನವರ ನೇತೃತ್ವದಲ್ಲಿ ನಾವೆಲ್ಲರು ಹೋಗಿದ್ದೆವು.

**ಶ್ರೀ ನಸೀರ್ ಅಹ್ಮದ್:-** ಸನ್ಮಾನ್ಯ ಸಭಾಪತಿಯವರೇ, ಭೂತದ ಬಾಯಿಯಲ್ಲಿ ಭಗವದ್ಗೀತೆ ಬರುತ್ತಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ಈಶ್ವರಪ್ಪನವರ ರಾಷ್ಟ್ರ ಪ್ರೇಮ ಮತ್ತು ರಾಷ್ಟ್ರ ಭಕ್ತಿಯ ಬಗ್ಗೆ ಯಾರೂ ಪ್ರಶ್ನೆ ಮಾಡುವಂತಿಲ್ಲ. ಯಾರೂ ಪಾಠ ಹೇಳಿಕೊಡುವ ಅವಶ್ಯಕತೆ ಇಲ್ಲ. "ಎಲ್ಲ ಕಡೆಗಳಲ್ಲಿ ತಾವು ಕೇಸರಿ ಭಾವುಟವನ್ನು ಹಾರಿಸಿದ್ದೀರಿ, ಕೆಂಪು ಕೋಟೆಯ ಮೇಲೆ ಹಾರಿಸುತ್ತೀರಾ?" ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಅವರು "ಬಹಳ ವರ್ಷಗಳ ನಂತರ ಅಂತಹ ದಿನ ಬರಬಹುದು" ಎಂದು ಹೇಳಿದ್ದಾರೆ. ಮುಂದುವರೆದು "ರಾಷ್ಟ್ರ ಧ್ವಜಕ್ಕೆ ಅಪಮಾನ ಮಾಡುವವರು ಈ ದೇಶದ ನಾಗರೀಕರಲ್ಲ, ಅವರು ರಾಷ್ಟ್ರ ದ್ರೋಹಿಗಳು" ಎಂದು ಅದೇ ಸಂದರ್ಭದಲ್ಲಿ ಹೇಳಿದ್ದಾರೆ. ವಿರೋಧ ಪಕ್ಷದವರು ಅದನ್ನು ಬಿಟ್ಟು ಅರ್ಧ ಮಾತ್ರ ಹೇಳುತ್ತಿದ್ದಾರೆ. ಅವರ ಪರಿಸ್ಥಿತಿಯೂ ನಮಗೆ ಅರ್ಥವಾಗುತ್ತಿದೆ. ಹಿಜಾಬ್‌ನ ಪರಿಸ್ಥಿತಿಯಿಂದಾಗಿ ಅವರು ಹೈರಾಣ ಆಗಿದ್ದಾರೆ. ಅವರು ಜೋರಾಗಿ ಮಾತನಾಡುವಂತೆಯೂ ಇಲ್ಲ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಹಿಜಾಬ್‌ನ ಉಲ್ಲೇಖ ಸರಿಯಾದುದಲ್ಲ. ಅವರ ಉದ್ದೇಶವೇನು?

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಜನರ ಗಮನವನ್ನು ಬೇರೆ ಕಡೆಗೆ ಸೆಳೆಯುವುದಕ್ಕೆ ಅವರುಗಳು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಅವರುಗಳು ಸುಮಾರು ಒಂದೂಕಾಲು ಶತಮಾನಗಳ ಇತಿಹಾಸ ಇರುವಂತಹ ಪಕ್ಷದ ಶಾಸಕರು. ಅಂತಹ ಒಂದು ಪಕ್ಷದ ಸದಸ್ಯರುಗಳಾಗಿರುವ ಇವರುಗಳು ಯಾವ ರೀತಿಯಲ್ಲಿ ಕೆಲಸ ಮಾಡಬೇಕು?

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಹುದ್ದೆ ಸಂವಿಧಾನದತ್ತವಾಗಿ ಬಂದಿರುವಂತಹ ಸ್ಥಾನವಾಗಿದೆ. ಅವರು ಜಂಟಿ ಸದನವನ್ನುದ್ದೇಶಿಸಿ ಮಾಡಿರುವ ಭಾಷಣಕ್ಕೆ ನಾವೆಲ್ಲರೂ ವಂದನಾ ನಿರ್ಣಯವನ್ನು ಸಲ್ಲಿಸಬೇಕಾಗಿತ್ತು ಮತ್ತು ಅನೇಕ ಗಂಭೀರವಾಗಿರುವ ವಿಚಾರಗಳ ಮೇಲೆ ಇಲ್ಲಿ ಚರ್ಚೆ ನಡೆಯಬೇಕಾಗಿತ್ತು. ಅವರೆಲ್ಲರೂ ಹಿರಿಯ ಶಾಸಕರಾಗಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

**ಶ್ರೀ ನಸೀರ್ ಅಹ್ಮದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ವಿಷಯದ ಬಗ್ಗೆ ವಿವರಣೆ ನೀಡುತ್ತಿದ್ದಾರೆ ಮತ್ತು ವಿಷಯಾಂತರ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಹಿರಿಯ ಸದಸ್ಯರು ಅಥವಾ ಕಿರಿಯ ಸದಸ್ಯರು ಎನ್ನುವ ಭೇದಭಾವವಿಲ್ಲ. ಮಾನ್ಯ ಗೃಹ ಸಚಿವರು ಬೇರೆ ವಿಚಾರದ ಬಗ್ಗೆ ಉಲ್ಲೇಖ ಮಾಡುತ್ತಿದ್ದಾರೆ. ಅದರ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ಯಾರು ಅನುಮತಿಯನ್ನು ನೀಡಿದ್ದಾರೆ?

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಅನೇಕ ಗಂಭೀರ ವಿಚಾರಗಳ ಮೇಲೆ ಚರ್ಚೆ ಮಾಡುವುದು ಬಾಕಿ ಇರುವಂತಹ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದವರು ವ್ಯರ್ಥ ಕಾಲಹರಣ ಮಾಡುತ್ತಿದ್ದಾರೆ. ಇದರಿಂದಾಗುವ ಪ್ರಯೋಜನವೇನು? ಈ ಕಲಾಪ ಸುಗಮವಾಗಿ

ನಡೆಯುವುದಕ್ಕೆ ಅವರುಗಳು ಸಹಕಾರ ನೀಡಬೇಕಾಗಿದೆ. ಈ ರೀತಿ house stall ಮಾಡುವುದು ಸರಿಯಲ್ಲ. ಜನ ಇದನ್ನು ಒಪ್ಪುವುದಿಲ್ಲ. ಇದೊಂದು ಸಮಸ್ಯೆಯೇ ಅಲ್ಲ. ಅನಾವಶ್ಯಕವಾಗಿ ಅವರು ಕಾಲಹರಣ ಮಾಡುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಈ ನಾಡಿನ ಗೃಹ ಸಚಿವರಾಗಿರುವವರು ರಾಷ್ಟ್ರ ದ್ರೋಹದ ಪ್ರಕರಣವನ್ನು ಸಮರ್ಥಿಸಿಕೊಳ್ಳುತ್ತಿರುವುದು ಈ ರಾಜ್ಯದ ದುರಂತವಾಗಿದೆ. ನಾವು ಇಲ್ಲಿಯವರೆಗೆ ಮಾನ್ಯ ಕೆ.ಎಸ್.ಈಶ್ವರಪ್ಪನವರ ರಾಜೀನಾಮೆಯನ್ನು ಕೇಳುತ್ತಿದ್ದೆವು. ಇವತ್ತಿನಿಂದ ಅವರ ರಾಜೀನಾಮೆಗೂ ಒತ್ತಾಯಿಸುತ್ತೇವೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಅವರುಗಳ ರಾಜೀನಾಮೆ ಕೇಳುವಂತಹ ಅವಶ್ಯಕತೆ ಇಲ್ಲ. ಭೂತದ ಬಾಯಿಯಲ್ಲಿ ಭಗವದ್ಗೀತೆಯನ್ನು ಕೇಳುವಂತಹ ಅವಶ್ಯಕತೆ ನಮಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಮಾತನಾಡಲು ಅವಕಾಶವನ್ನು ನೀಡಿದ್ದೇನೆ. ಇದೇ ರೀತಿ ಮಾತನಾಡಿ ಎಂದು ನಾನು ತಮಗೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾತನಾಡುವುದಕ್ಕೆ ತಮಗೆ ಎಲ್ಲ ರೀತಿಯ ಸ್ವಾತಂತ್ರ್ಯವಿದೆ. ಆದರೆ, ತಾವು ಮಾತನಾಡುವ ಭರದಲ್ಲಿ ತಾಳ್ಮೆ ಕಳೆದುಕೊಂಡು ಮಾತನಾಡಬೇಡಿ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಮಾತನಾಡುವಾಗ ವಿಷಯಾಂತರ ಮಾಡಿದ್ದಾರೆ. ಮಾನ್ಯ ಕೆ.ಎಸ್.ಈಶ್ವರಪ್ಪನವರ ರಾಜೀನಾಮೆಯ ವಿಷಯವನ್ನು ಬಿಟ್ಟು "ಹಿಜಾಬ್" ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. "ಹಿಜಾಬ್" ಹಿಂದೆ ಎಷ್ಟು ಕಾಣದ ಕೈಗಳು ಕೆಲಸ ಮಾಡುತ್ತಿವೆ ಎನ್ನುವುದು ಸಹ ಅವರಿಗೆ ಗೊತ್ತಿದೆ. ಈ ರಾಜ್ಯದ ಗೃಹ ಸಚಿವರಾಗಿ ಅವರು ಆ ರೀತಿ ಮಾತನಾಡಬಾರದು.

**ಸಭಾಪತಿಯವರು:-** ಆ ವಿಚಾರ ಕೋರ್ಟ್‌ನಲ್ಲಿದೆ ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಬೇಡ.

**ಡಾ: ವೈ.ಎ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಚರ್ಚೆ ಆಗಲಿ.

**ಸಭಾಪತಿಯವರು:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಮಿತ್ರರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸದನ ಸುಗಮವಾಗಿ ನಡೆಯಬೇಕು ಈ ನಾಡಿನ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕಾಗಿದೆ. ರೈತರು ಕಂಗಾಲಾಗಿದ್ದಾರೆ. ಈಗ ತಾನೇ ಕರೋನಾದ ಭಯಭೀತಿಯ ವಾತಾವರಣ ಸರಿದು ಒಂದು ಒಳ್ಳೆಯ ವಾತಾವರಣ ನಿರ್ಮಾಣವಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಆಯವ್ಯಯ ಮಂಡನೆಯಾಗುತ್ತಿದೆ. ಉತ್ತಮವಾದ ರೀತಿಯಲ್ಲಿ ಚರ್ಚೆಗಳು ನಡೆಯಬೇಕೆನ್ನುವುದು ಜನರ ಅಪೇಕ್ಷೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲಿಯೂ ಕೂಡ ರಾಷ್ಟ್ರ ಧ್ವಜಕ್ಕೆ ಅವಮಾನ ಆಗುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಸುಮಾರು 650 ಜನ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬಹಿಷ್ಕರಿಸಿದ್ದಾರೆ ಇದರ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಇವರುಗಳಿಗೆ "ಕಿತಾಬ್" ಗಿಂತ "ಹಿಜಾಬ್" ಮುಖ್ಯವಾಗಿದೆ. ಶೇಕಡಾವಾರು ಲೆಕ್ಕ ತೆಗೆದುಕೊಂಡರೇ ಅಲ್ಪಸಂಖ್ಯಾತ ಹೆಣ್ಣುಮಕ್ಕಳ ಶಿಕ್ಷಣದ ಅನುಪಾತ ಬಹಳ ಕೆಳಮಟ್ಟದಲ್ಲಿದೆ. ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇದೆ. ಅದರ ಬದಲಿಗೆ ಇವರುಗಳು ಅವರಿಗೆ ಶಿಕ್ಷಣ ಮುಖ್ಯವಲ್ಲ ಹಿಜಾಬ್ ಮುಖ್ಯ ಎಂದು ಹೇಳಿಕೊಡುತ್ತಿದ್ದಾರೆ. ಇವರ ವರ್ತನೆಯನ್ನು ನೋಡಿದರೆ ತುಂಬಾ ನಾಚಿಗೇಡು ಅನಿಸುತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶಶನ ಹೊಂದಿದವರು):–** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಮಾತನಾಡುತ್ತಿದ್ದ ಸಂದರ್ಭದಲ್ಲಿ 'we should confine to the Adjournment Motion subject only' ಎಂದು ತೀರ್ಮಾನ

ಮಾಡಿದ್ದೆವು. ನಾವೇ ಮಾತನಾಡಲಿ ಅಥವಾ ಅವರೇ ಮಾತನಾಡಲಿ ಯಾರೇ ಮಾತನಾಡಿದರೂ ನಿಲುವಳಿ ಸೂಚನೆಯ ವಿಷಯದ ಬಗ್ಗೆ ಮಾತ್ರ ಮಾತನಾಡಬೇಕಾಗಿದೆ. ಅದನ್ನು ಬಿಟ್ಟು ಬೇರೆ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ ಭಾವನಾತ್ಮಕವಾಗಿ ಜನರನ್ನು ಕೆರಳಿಸುವುದು ಒಳ್ಳೆಯದಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಗೃಹ ಸಚಿವರು ಹಿರಿಯರಿದ್ದಾರೆ ಅವರ ಬಾಯಿಯಿಂದ ಈ ರೀತಿಯ ಮಾತು ಬರಬಾರದೆನ್ನುವುದು ನನ್ನ ಕೋರಿಕೆಯಾಗಿದೆ. ಏಕೆಂದರೆ, ಸದನದಲ್ಲಿ ಏನು ನಡೆಯುತ್ತದೆ ಅದೆಲ್ಲವೂ ರೆಕಾರ್ಡ್ ಆಗುತ್ತದೆ. ಯಾವ ವಿಚಾರವನ್ನು ನಾವು ಪ್ರಸ್ತಾಪಿಸಬಾರೆಂದು ಇದ್ದೆವೆಯೋ ಅದರ ಬಗ್ಗೆಯೇ ಮಾನ್ಯ ಗೃಹ ಸಚಿವರೇ ಮಾತನಾಡಲು ಪ್ರೇರೇಪಣೆ ಕೊಟ್ಟರೆ ಹೇಗೆ? ಅವರು ಹಿರಿಯರಿದ್ದಾರೆ. ನಾವು ವಿರೋಧ ಪಕ್ಷದಲ್ಲಿರುವವರು ಒಂದು ವೇಳೆ ತಪ್ಪು ಮಾಡಬಹುದು. ಆದರೆ, ಹಿರಿಯರಾದ ಅವರು ಆ ರೀತಿ ಮಾತನಾಡಬಾರದು. ನಮ್ಮ ತಪ್ಪನ್ನು ತಿದ್ದಿ ಹೇಳಿದರೆ, ನಾವು ಅದಕ್ಕೆ ತಲೆ ಬಾಗುತ್ತೇವೆ. ಅವರೇ ನಮಗೆ ಉತ್ತೇಜನವನ್ನು ನೀಡಿದರೆ ಹೇಗೆ? ಅವರ ಉದ್ದೇಶವೇನು? ನಾವು ಪ್ರಚೋದಿಸಲ್ಪಟ್ಟು ಸದನದ ಬಾವಿಯೊಳಗೆ ಧರಣಿ ಕುಳಿತುಕೊಂಡರೇ, ಆಗ ಸದನ ನಡೆಯುವುದೇ ಇಲ್ಲ. ಇಂತಹ ಸನ್ನಿವೇಶ ಉದ್ಭವವಾದರೆ ಒಳ್ಳೆಯದೇ? ಅವರು ಬೇರೆ ವಿಚಾರವನ್ನು ಪ್ರಸ್ತಾಪ ಮಾಡಬಾರದಾಗಿತ್ತು. ಮಾನ್ಯ ಈಶ್ವರಪ್ಪನವರ ರಾಜೀನಾಮೆಯ ಬಗ್ಗೆ ನಮ್ಮ confinement ಇತ್ತು. ಅಷ್ಟಕ್ಕೆ ಸೀಮಿತವಾಗಿ ಮಾತನಾಡಿದ್ದರೆ ನಾವು ಅಡ್ಡಿಪಡಿಸುತ್ತಿರಲಿಲ್ಲ. ಆದರೆ, ಅವರು ಬೇರೆ ವಿಚಾರವನ್ನು ಪ್ರಸ್ತಾಪ ಮಾಡಿದರೆ ಹೇಗೆ?

ಸನ್ಮಾನ್ಯ ಸಭಾಪತಿಯವರೇ, ತಾವು ವಿಡಿಯೋ ತೋರಿಸುವಂತೆ ಹೇಳಿದ್ದೀರಿ, ಅವರು ಒಂದು ಓಪನ್ ಹಾಲ್‌ನಲ್ಲಿ ವಿಡಿಯೋ ಪ್ಲೇ ಮಾಡಿ ತೋರಿಸಲಿ ತಾವು ಅದನ್ನು ನೋಡಿ ಒಪ್ಪಿಕೊಂಡರೆ, ನಾವು ಸರಿ ಎಂದು ಒಪ್ಪಿಕೊಳ್ಳುತ್ತೇವೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಇಂತಹ ಸನ್ನಿವೇಶಗಳನ್ನು ತಾವು ತಮ್ಮ ಅನುಭವದಲ್ಲಿ ಸಾಕಷ್ಟು ನೋಡಿದ್ದೀರಿ. ಇದೇ ಮೊದಲನೆಯ ಬಾರಿ ಈ ರೀತಿಯ ಸಮಸ್ಯೆ ಉದ್ಭವಿಸಿಲ್ಲ. ನಮ್ಮ ರಾಷ್ಟ್ರದಲ್ಲಿ ಪತ್ರಿಕಾ ಮಾಧ್ಯಮವಿರಬಹುದು ಅಥವಾ ವಿದ್ಯುನ್ಮಾನ ಮಾಧ್ಯಮವಿರಬಹುದು ಬಹಳ ಜವಾಬ್ದಾರಿಯಿಂದ

ಕಾರ್ಯ ನಿರ್ವಹಿಸುತ್ತಿವೆ.

(ಮುಂದುವರಿದಿದೆ)

(64) 17.2.2022 3.50 ಪಿಕೆ:ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ನಸೀರ್ ಅಹ್ಮದ್(ಮುಂದು)**

ಮಾನ್ಯ ಈಶ್ವರಪ್ಪನವರು ಹೇಳಿರುವಂಥದ್ದೆಲ್ಲಾ ವಿಷಯ ಕವರ್ ಆಗಿದೆ. ಈಗ ನಾವು ಯಾವುದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಸದನವನ್ನು ಅರ್ಧಗಂಟೆ ಮುಂದೂಡಿ. ಗೃಹ ಮಂತ್ರಿಗಳ ಜೊತೆ ಬೇರೆ ಎರಡು-ಮೂರು ಜನರನ್ನು ಕರೆಸಿ. ನಮ್ಮ ಕಡೆಯಿಂದ ಎರಡು-ಮೂರು ಜನ ಬರುತ್ತೇವೆ. ನಮ್ಮ ಎದುರಿಗೆ ಆ ದೃಶ್ಯವನ್ನು ಪ್ರದರ್ಶನ ಮಾಡಿ. ಅವರು ಮಾತನಾಡಿರುವುದು ತಪ್ಪಾಗಿ ಕಾಣದೇ ಇದ್ದರೇ ಕೂಡಲೇ, ಈಗಲೇ ನಾವು ನಮ್ಮ agitation withdraw ಮಾಡುವುದಕ್ಕೆ ನಮ್ಮ ಪಕ್ಷದವರ ಜೊತೆ ಮಾತನಾಡುತ್ತೇವೆ. ಅವರು ಮಾತನಾಡಿರುವುದು ತಪ್ಪು ಎನಿಸಿದರೆ ಕೂಡಲೇ ನೀವು ಅವರನ್ನು ವಜಾ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಹೇಳಿ.

**ಶ್ರೀ ಕೆ.ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ನಜ್ಹೀರ್ ಅಹ್ಮದ್‌ರವರು ಮಾತನಾಡುತ್ತಾ, ಮೀಡಿಯಾದಲ್ಲಿ ಬಂದಿರುವುದು ತಪ್ಪಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಅದೇರೀತಿ ಕನ್ನಡಪ್ರಭ ದಿನಪತ್ರಿಕೆಯಲ್ಲಿ "ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇವೆ-ಸಚಿವ ಈಶ್ವರಪ್ಪ" ಎಂದು ಬಂದಿದೆ. ಇದನ್ನು ಗಮನಿಸಿ we will take a call. ನಮಗೆ ಇದನ್ನು agitation ಮಾಡಬೇಕು ಎಂದಿಲ್ಲ. ದಯವಿಟ್ಟು ಇದನ್ನು ಗಮನಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ಎರಡು ದಿನಗಳಿಂದ ನಮ್ಮ ರಾಷ್ಟ್ರ ಧ್ವಜದ ಬಗ್ಗೆ ಒಂದು ಗಂಭೀರವಾದ ಚರ್ಚೆ ನಡೆಯುತ್ತಿದೆ. ನಾನು ತಮ್ಮ ಮೂಲಕ ನಮ್ಮೆಲ್ಲ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾವು ಇನ್ನೂ ರಾಜ್ಯಪಾಲರ ಭಾಷಣದ ಬಗೆಗೆ, ನಾಡಿನ ಜ್ವಲಂತ ವಿಷಯಗಳನ್ನು ಕೈಗೆತ್ತಿಕೊಂಡು ಚರ್ಚೆ ಮಾಡಬೇಕಿದೆ. ನೂರಾರು

ಪ್ರಶ್ನೆಗಳಿವೆ. ಗಮನ ಸೆಳೆಯುವ ಸೂಚನೆಗಳಿವೆ. ಅರ್ಧ ಗಂಟೆ ಕಾಲಾವಧಿ ಚರ್ಚೆಗಳಿವೆ. ಹೇಳಿ-ಕೇಳಿ, ಸಚಿವರಾದ ಮಾನ್ಯ ಈಶ್ವರಪ್ಪನವರು ಎರಡೂ ಸದನಕ್ಕೆ ಬರಲು ಅವಕಾಶ ಇದೆ. ಆರಂಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಮಾನ್ಯ ಸಚಿವರು ಇಲ್ಲಿಗೆ ಬಂದು ಒಂದು ಹೇಳಿಕೆ ಮಾಡಲಿ. ಆ ಹೇಳಿಕೆಯಿಂದ ಸಮಾಧಾನ ಆಗದೇ ಹೋದರೆ, ನಮ್ಮ ಪ್ರತಿ ಪಕ್ಷದ ನಾಯಕರು ಮುಂದಿನ ಕ್ರಮಕ್ಕೆ ಮುಂದಾಗಲಿ. ಅದನ್ನು ಮೀರಿದರೆ ತಾವು along with the Hon'ble Chief Minister ಎರಡು ಸದನಗಳ Joint Business Advisory Committee ಕರೆಯಿರಿ. ಸಭಾಪತಿಯವರು, ಸಭಾಧ್ಯಕ್ಷರು ಇಬ್ಬರು ಕುಳಿತುಕೊಳ್ಳಿ. ಎರಡೂ ಕಡೆಯ ವಿಪಕ್ಷ ನಾಯಕರನ್ನು ಕರೆಯಿರಿ, ಮುಖ್ಯಮಂತ್ರಿಗಳನ್ನು ಕರೆಯಿರಿ, ಗೃಹ ಸಚಿವರನ್ನು ಕರೆಯಿರಿ, ಎರಡೂ ಸದನಗಳ ಸಭಾನಾಯಕರುಗಳನ್ನು ಕರೆಯಿರಿ, ಸಂಸದೀಯ ವ್ಯವಹಾರಗಳ ಸಚಿವರೆಲ್ಲರೊಟ್ಟಿಗೆ ಚರ್ಚೆ ಮಾಡಿ. ಈ ತರಹದ ಸಂದರ್ಭಗಳು ಹತ್ತು-ಹಲವು ಬಾರಿ ಬಂದಿವೆ. ಮೀಟಿಂಗ್ ಹಾಲ್‌ನ ಸಂಖ್ಯೆ 106 ಏನಿದೆ, ಅದು ಇಂತಹ ಮೀಟಿಂಗ್‌ಗಳನ್ನು ನಡೆಸುವುದಕ್ಕೆಯೇ ಇದೆ. ಇದಕ್ಕೆ ನಾವು ಒಂದು ಪರಿಹಾರ ಕಂಡು ಹಿಡಿಯಲೇಬೇಕು ಅಲ್ಲವೇ? ಅಧಿವೇಶನ ನಡೆಯಬೇಕಲ್ಲವೇ? ಈ ನಾಡಿನ ಜ್ವಲಂತ ಸಮಸ್ಯೆ ಇಲ್ಲಿ ಚರ್ಚೆ ಆಗಬೇಕು ಅಲ್ಲವೇ? ಕೋಟ್ಯಾಂತರ ರೂಪಾಯಿ ಹಣ ಸುಮ್ಮನೆ ಖರ್ಚಾಗಬಾರದು ಅಲ್ಲವೇ? ಆಡಳಿತ ಪಕ್ಷದ ಸದಸ್ಯರೇ, ನಮ್ಮದು ಕೂಡ ಗಂಭೀರವಾದ ಪ್ರಶ್ನೆಗಳಿವೆ, ಅದರ ಬಗ್ಗೆ ನಾವು ಚರ್ಚೆ ಮಾಡಬೇಕು ಎನ್ನುವ ಮಾತುಗಳನ್ನು ಹೇಳುತ್ತಿದ್ದರು. ಹಾಗಾಗಿ ಈಗ ಅನಿವಾರ್ಯವಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ತಾವು ಮಾನ್ಯ ಈಶ್ವರಪ್ಪನವರನ್ನು ಕರೆಸಿ ಒಂದು ಹೇಳಿಕೆ ಮಾಡಿಸಿ. ಆ ಹೇಳಿಕೆಯಿಂದ ಸಮಾಧಾನವಾಗಲಿಲ್ಲ, ತೃಪ್ತರಾಗಲಿಲ್ಲ ಎಂದರೆ ಮುಂದೆ Joint Business Advisory Committee ಮೂಲಕ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಆಗ್ರಹ ಮಾಡುತ್ತೇನೆ.

**ಸಭಾಪತಿಯವರು:-** ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮತ್ತು ನಾವೆಲ್ಲ ಸದಸ್ಯರು, ರಾಷ್ಟ್ರ ಧ್ವಜದ ಬಗ್ಗೆ

ಸನ್ಮಾನ್ಯ ಈಶ್ವರಪ್ಪನವರು ನೀಡಿರುವ ಹೇಳಿಕೆಗೆ ಸಂಬಂಧಪಟ್ಟಂತೆ ಚರ್ಚೆ ಮಾಡಿದ್ದೇವೆ. ಮಾನ್ಯ ಗೃಹ ಸಚಿವರು ನಮಗೆ ತೃಪ್ತಿಕರವಲ್ಲದ ಉತ್ತರ ಕೊಡುತ್ತಿದ್ದರು. ಆ ಸಂದರ್ಭದಲ್ಲಿ ಹಿಜ಼ಾಬ್ ವಿಷಯವನ್ನು ತೆಗೆದುಕೊಂಡಿದ್ದು ನಮಗೆಲ್ಲ ದುಃಖ ತಂದಿದೆ. ದಯವಿಟ್ಟು ಆ ಅಂಶವನ್ನು ಕಡತದಿಂದ ತೆಗೆಸಬೇಕು ಎನ್ನುವುದು ನನ್ನ ಮನವಿಯಾಗಿದೆ. ಅಂತಹ ವಿಷಯವನ್ನು ಪ್ರಸ್ತಾಪ ಮಾಡಿದರೆ ಮತ್ತೆ ನಾವು ಬಾವಿಗೆ ಹೋಗಿ ಧರಣಿ ಮಾಡಬೇಕಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ. ಕಳೆದ ಎರಡು ದಿನಗಳಿಂದ ಸದನದ ಸಮಯ ಸಂಪೂರ್ಣ ಹಾಳಾಗಿದೆ. ಈ ರೀತಿ ಸಮಯ ಹಾಳಾಗಿರುವುದು ಸದನದ ಒಳಗಿರುವ ನಮಗೆ ಏನು ಅನಿಸದೇ ಇದ್ದರೂ, ರಾಜ್ಯದಲ್ಲಿರುವ ಆರು ಕೋಟಿ ಜನರು ಇದನ್ನು ವೀಕ್ಷಣೆ ಮಾಡುತ್ತಿರುತ್ತಾರೆ. ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು, ನಾಡಿನ ಜನರಿಗೆ ಅನುಕೂಲ ಮಾಡುವ ಸಂಬಂಧ ಅಧಿವೇಶನಗಳನ್ನು ನಡೆಸಲಾಗುತ್ತದೆ. ಇದು ನಮ್ಮ ಕರ್ತವ್ಯ ಕೂಡ. ಕರ್ತವ್ಯಗಳನ್ನು ಪೂರ್ಣ ಪೂರೈಸುವುದಕ್ಕೆ ಆಗದೇ ಹೋದರೂ, ಸ್ವಲ್ಪಮಟ್ಟಿಗಾದರೂ ಜನ ಮೆಚ್ಚುವ ಹಾಗೆ ಕೆಲಸ ಮಾಡಬೇಕು ಎಂದು ಈ ಸೌಧಗಳು ಇರುತ್ತವೆ. ಅನೇಕ ಜನ ಹೊಸ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ನಾವು ಈ ಪುರಷಾರ್ಥಕ್ಕಾಗಿ ಆಯ್ಕೆಯಾಗಿ ಬರಬೇಕಾಗಿತ್ತೇ ಎಂದು ಅವರು ಭಾವಿಸುತ್ತಾರೆ. ಮತ್ತೆ, ಇಷ್ಟೊಂದು well experienced, veteran Legislators' ಗಳಿದ್ದು, ಅಗಾಧವಾದ ಅನುಭವ ಪಡೆದುಕೊಂಡಿರುತ್ತಾರೆ ಎಂದು ತಿಳಿದುಕೊಂಡಿರುತ್ತಾರೆ. ಮೇಲ್ಮನೆಗೆ ತನ್ನದೇ ಆದ ದೊಡ್ಡ ಸ್ಥಾನ ಇದೆ, ಪುರಾತನ ಇತಿಹಾಸ ಇದೆ. ಇಂತಹ ಇತಿಹಾಸವನ್ನು ಹೊಂದಿರುವ ಈ ಮನೆಯಲ್ಲಿ ಈ ರೀತಿ ಸಮಯವನ್ನು ವ್ಯರ್ಥ ಮಾಡಬೇಕೇ ಎಂದು ಕಿರಿಯ ಸದಸ್ಯರು ಮಾತನಾಡಬಾರದು ಮತ್ತು ಹೊರಗಡೆಯವರೂ ಸಹ ಮಾತನಾಡಬಾರದು. ಮಾನ್ಯ ಈಶ್ವರಪ್ಪನವರು ಈ ಸದನಕ್ಕೆ ಹೊಸಬರಲ್ಲ ಮತ್ತು ರಾಜಕೀಯಕ್ಕೂ ಹೊಸಬರಲ್ಲ. ಅವರು ಸಂಘದ ಹಿನ್ನೆಲೆಯಿಂದ ಬಂದಿದವರಾಗಿದ್ದು, ಎಲ್ಲರೂ ಹೇಳುವ ಹಾಗೆ ಸಂಘ ಶಿಸ್ತಿಗೆ ಹೆಸರಾಗಿರುವಂಥದ್ದು. ಅಲ್ಲಿಂದ ಬೆಳೆದು ಬಂದವರು ಶಿಸ್ತುಬದ್ಧವಾದ ಮಾತುಗಳನ್ನಾಡುತ್ತಾರೆ ಎನ್ನುವ ನಂಬಿಕೆ ನನಗೂ ಕೂಡ ಇದೆ. ಮಾನ್ಯ ಸಚಿವರನ್ನು ಈ ಸದನದಲ್ಲಿ

ಕರೆಸಬೇಕು. As a Minister he can come, he is very much available. ಅವರು ಕೇವಲ ಎಂಎಲ್ಎ ಆಗಿದ್ದರೆ ನಾವು ಇಲ್ಲಿಗೆ ಕರೆಸುವುದಕ್ಕೆ ಆಗುತ್ತಿರಲಿಲ್ಲ. ಆದರೆ ಅವರು ಸಚಿವರಾಗಿರುವುದರಿಂದ ಈ ಸದನಕ್ಕೆ ಬಂದು ಹೇಳಿಕೆ ನೀಡಲಿ. ಜೊತೆಗೆ, ನಿಜವಾಗಲೂ ಏನು ನಡೆದಿದೆ ಎಂಬ ದಾಖಲೆಗಳನ್ನು ಕೂಡ ತೆಗೆಸಿ ನೋಡಿ. Already you have given a verdict. ನನ್ನ ಪ್ರಕಾರ, ಒಂದು ಸಲ ಸಭಾಪತಿಯವರು verdict ಕೊಟ್ಟ ಮೇಲೆ we have no business to talk about these things. ಒಂದು ಸಲ ತೀರ್ಮಾನ ಕೊಟ್ಟ ಮೇಲೆ ಮತ್ತೆ ಮತ್ತೆ ಅದರ ಬಗ್ಗೆಯೇ ಚರ್ಚೆ ಮಾಡುವಂಥದ್ದು ಏನಿದೆ? ಒಂದಂತು ಸತ್ಯ. ಯಾವುದೇ ಕಾರಣಕ್ಕೂ ಯಾರು ಈ ರೀತಿ ಸಭೆ ನಡವಳಿಕೆಗಳಿಗೆ ತೊಂದರೆ ಮಾಡುತ್ತಾರೋ ಅಂಥವರ ಕುರಿತು ಏನು ಕ್ರಮ ಕೈಗೊಳ್ಳಬಹುದು ಎನ್ನುವುದು ನಮ್ಮ ನಿಯಮಗಳಲ್ಲಿ ಇದೆ. ಆದರೆ, ಅಂತಹ ಅತಿರೇಕಕ್ಕೆ ಹೋಗಬಾರದು ಎನ್ನುವ ದೃಷ್ಟಿಯಿಂದ ಮಾನ್ಯ ಸಭಾಪತಿಯವರು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವುದನ್ನು ನಾವು ಗಮನಿಸುತ್ತಿದ್ದೇವೆ. ನಮ್ಮ ಸದಸ್ಯರುಗಳು ಏನೇ ತಪ್ಪು ಮಾಡಿದ್ದರೂ ಈ ಸದನದಿಂದ ಅವರನ್ನು ಹೊರಗೆ ಹಾಕುವಂಥದ್ದು ಅಕ್ಷಮ್ಯವಾಗುತ್ತದೆ. ಎಂತಹ ತಪ್ಪು ಮಾಡಿದ್ದರೂ ಅವರು ನಮ್ಮ ಜೊತೆಯಲ್ಲಿ ಇರಬೇಕು ಎಂದು ತಾವು ಪ್ರಯತ್ನ ಮಾಡುತ್ತಿದ್ದೀರಿ. ಸದನದಲ್ಲಿ ತಪ್ಪು ಮಾಡಿದರೂ ಅದನ್ನು ಸರಿ ಮಾಡುವುದಕ್ಕೆ ಅವಕಾಶ ಇದೆ. ಬೇಕಾದಷ್ಟು ಸಲ ಇಂತಹ ಸಮಸ್ಯೆಗಳು ಸರಿ ಹೋಗಿವೆ. ಕ್ಲಿಷ್ಟಕರವಾದ ಸಮಸ್ಯೆಗಳು ಸರಿ ಹೋಗಿಲ್ಲವೇ? ಈ ವಿಚಾರ ಬಿಡಿಸಲಾರದ ಕಗ್ಗಂಟಾಗಿದೆಯೇ? ಮುಖ್ಯವಾಗಿ ಸದನದ ಸಮಯವನ್ನು ಉಳಿಸಬೇಕು. ಜನ ಮೆಚ್ಚಬೇಕು. ಆದ್ದರಿಂದ ಇವರು ಏನೇ ಮಾಡಿದ್ದರೂ, ಅದನ್ನು ಮಾತುಕತೆಯಿಂದ ಬಗೆಹರಿಸುವುದಕ್ಕೆ ಅವಕಾಶ ಇದೆ. ಮಾತುಕತೆಯ ಮುಖಾಂತರ ಬಗೆಹರಿಸಿ. ಮಾನ್ಯ ವಿರೋಧ ಪಕ್ಷದ ನಾಯಕರು ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡಿ ಅಗಾಧವಾದ ಅನುಭವ ಪಡೆದುಕೊಂಡು ಬಂದಿದ್ದಾರೆ. ಮಾನ್ಯ ಈಶ್ವರಪ್ಪನವರು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆ, ವಿಧಾನ ಪರಿಷತ್ತು ಮತ್ತು ವಿಧಾನಸಭೆಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಹಾಗಾಗಿ ಅವರೂ ಕೂಡ, ನನಗೆ ಗೊತ್ತಿರುವ ಹಾಗೆ ಈ ಸದನದ ಒಳಗೆ ಬಂದಮೇಲೆ ಸುಳ್ಳು ಹೇಳುವುದಿಲ್ಲ; ಏನು ನಡೆದಿದೆ ಎನ್ನುವ ವಿಚಾರವನ್ನು ಖಂಡಿತವಾಗಿ ಹೇಳುತ್ತಾರೆ ಎಂದು ನಾನು ಭಾವಿಸುತ್ತೇನೆ. ದಯವಿಟ್ಟು ಮಾನ್ಯ

ಸಚಿವರನ್ನು ಈ ಸದನಕ್ಕೆ ಕರೆಸಬೇಕೆಂದು ಕೇಳಿಕೊಳ್ಳುತ್ತೇನೆ. ಅಗಲೂ ಸಮಾಧಾನವಾಗಲಿಲ್ಲ ಎಂದರೆ ಮುಂದೆ ನೋಡೋಣ. ದಯವಿಟ್ಟು ಈ ಸದನದ ಸಮಯವನ್ನು ಉಳಿಸಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

**ಡಾ:ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಿನ್ನೆ ನಿಲುವಳಿ ಸೂಚನೆ ಪ್ರಸ್ತಾಪ ಆಗಿ, ತಮ್ಮ ಪೀಠದಿಂದ ಆದೇಶ ಆದಮೇಲೂ ತಾವು ಸದನವನ್ನು ತಹಬದಿಗೆ ತರಬೇಕು ಎಂದು ಈ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ ಎಂದು ಭಾವಿಸಿದ್ದೇನೆ. ವಿರೋಧ ಪಕ್ಷದ ಎಲ್ಲಾ ಸದಸ್ಯರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಯಾವುದೇ ಒಂದು ಘಟನೆ ನಡೆದಾಗ ಅದಕ್ಕೆ ಸಾಕ್ಷ್ಯಧಾರಗಳು ಬಹಳ ಮುಖ್ಯವಾಗುತ್ತದೆ. ರಾಷ್ಟ್ರ ಧ್ವಜದ ಬಗ್ಗೆ ಈ ಸದನದಲ್ಲಿರುವ ಎಲ್ಲರಿಗೂ ವಿಶೇಷವಾದ ಗೌರವ ಇದೆ; ಆತ್ಮಾಭಿಮಾನ ಇದೆ. ಈ ಧ್ವಜ ನಮ್ಮ ಹಕ್ಕು. ಈ ದೇಶವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಯಾವುದೇ ಪಕ್ಷ ದೊಡ್ಡ ಮಟ್ಟಕ್ಕೆ ಹೋದರೂ ದೇಶ ಎನ್ನುವುದು ಬಹಳ ಮುಖ್ಯ. ದೇಶ ಇದ್ದರೆ ನಾವು ಇರುತ್ತೇವೆ. ದೇಶವಿದ್ದರೆ ಪಕ್ಷಗಳು ಮತ್ತು ರಾಜಕೀಯ ವ್ಯವಸ್ಥೆ ಇರುತ್ತದೆ.

(ಮುಂದು)

(065) 17-02-2022 4.00 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಡಾ:ವೈ.ಎ.ನಾರಾಯಣಸ್ವಾಮಿ(ಮುಂದು):-**

ದೇಶ ಕಾಪಾಡುವ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಸೇರಿ ಕೆಲಸ ಮಾಡಬೇಕಾದ ಜವಾಬ್ದಾರಿ ಇದೆ ಎಂದು ನಾನು ಭಾವಿಸುತ್ತಿದ್ದೇನೆ. ಆದರೆ ನಮ್ಮ ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಎಲ್ಲಾ ಸದಸ್ಯರು ಸೇರಿ ಮಾನ್ಯ ಈಶ್ವರಪ್ಪನವರು ಈ ರಾಜ್ಯದ ಮಂತ್ರಿಯಾಗಿ 'ಈ ದೇಶದಲ್ಲಿ ಮುಂದೆ ಒಂದು ದಿನ ಕೇಸರಿ ಬಾವುಟವನ್ನು ಹಾರಿಸಬಹುದು' ಎನ್ನುವ ಮಾತನ್ನು ಹೇಳಿದ್ದಾರೆ ಎಂದು ಹೇಳುತ್ತಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದಕ್ಕೆ ನಾವು ಹೇಳುತ್ತಿರುವುದು. ಅವರು ಏನು ಹೇಳಿದ್ದಾರೆ ಅದನ್ನೇ ನಾವು ಹೇಳುತ್ತಿರುವುದು. ನಾವು ಅದನ್ನು

ಹೇಳಿಲ್ಲ. ಈಗ confinement ವಿಷಯಕ್ಕೆ ಸೀಮಿತವಾಗಿ ಕೊಡಬೇಕು, ಚರಿತ್ರೆ ಮಾತನಾಡುವುದಾದರೆ ನಾನು ಮಾತನಾಡುತ್ತೇನೆ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಪಾಯಿಂಟ್‌ಗೆ ಹೋಗಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಬಿಟ್ಟು ಬಾಕಿ ಎಲ್ಲಾ ಮಾತನಾಡುತ್ತಿದ್ದಾರೆ ಏಕೆ? ಅವರು ಪಾಯಿಂಟ್ ಬಗ್ಗೆ ಮಾತನಾಡಲಿ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಎಲ್ಲರ ಭಾವನೆಗಳನ್ನು ತಿಳಿದುಕೊಳ್ಳೋಣವೆಂದು ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆದರೆ, ನೀವು ಕಡ್ಡಿ ಕೊರೆಯುವ ಕೆಲಸ ಮಾಡಬೇಡಿ.

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕಡ್ಡಿ ಕೊರೆಯುವ ಕೆಲಸ ಶುರು ಮಾಡಿಲ್ಲ. ಅದೆಲ್ಲ patent ಅನ್ನು ನಾನು ವಿರೋಧ ಪಕ್ಷದ ನಾಯಕರಿಗೆ ಕೊಟ್ಟುಬಿಟ್ಟಿದ್ದೇನೆ. ಆದರೆ ನಾನು ಅವರೆಲ್ಲರಿಗೂ ಮನವಿ ಮಾಡುತ್ತಿದ್ದೇನೆ. ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅವರೇ ಅದರ ಬಗ್ಗೆ ಚರ್ಚೆ ಪ್ರಾರಂಭ ಮಾಡಿದ್ದಾರೆ. ಸುಮಾರು ವಿಚಾರಗಳು ರಾಜ್ಯದ ಹಿತಕ್ಕಾಗಿ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಅವರೆಲ್ಲರೂ ಪುನರ್ ಪರಿಶೀಲನೆ ಮಾಡಬೇಕು. ಸದನದ ಸಮಯವನ್ನು ವ್ಯರ್ಥ ಮಾಡುವುದು ಬೇಡ. ರಾಜ್ಯದ ಜನರ ಬಗ್ಗೆ ಚಿಂತನೆ ಮಾಡೋಣ. ಅವರ ಜೊತೆ ನಾವು ಕೈಜೋಡಿಸಿ ರಾಷ್ಟ್ರಧ್ವಜಕ್ಕೆ ಗೌರವ ಕೊಟ್ಟುಕೊಂಡು ಬಂದಿದ್ದೇವೆ. ಮುಂದೆಯೂ ಗೌರವ ಕೊಡುತ್ತೇವೆ. ಯಾರಿಗೂ ಇದರ ಬಗ್ಗೆ ಅನುಮಾನ ಬೇಡ. ದಯವಿಟ್ಟು ಅವರೆಲ್ಲರೂ ಮುಷ್ಕರದಿಂದ ಹಿಂದೆ ಸರಿಯಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ಹತ್ತು ದಿನಗಳ ಹಿಂದೆ ಹೊಸ ಸದಸ್ಯರುಗಳಿಗೆ ಎರಡು ದಿನಗಳ ತರಬೇತಿಯನ್ನು ನೀಡಲಾಗಿತ್ತು. ನಾವು ಆ

ತರಬೇತಿಯಲ್ಲಿ ಬಹಳಷ್ಟು ಅಪೇಕ್ಷೆಗಳನ್ನು ಇಟ್ಟುಕೊಳ್ಳಲಾಗಿತ್ತು. ನಾನು ಮೊನ್ನೆಯೂ ಮಾತನಾಡುತ್ತಾ ಹೇಳಿದೆ, ನಾನು 30-35 ವರ್ಷಗಳ ಹಿಂದೆಯೇ ಈ ಸದನಕ್ಕೆ ಬರಬೇಕು, ನನಗೆ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದರೆ ಮಾತನಾಡಬೇಕು ಎಂದು ಅಂದುಕೊಂಡಿದ್ದೆ. ಎರಡು ದಿನಗಳ ತರಬೇತಿಯಲ್ಲಿ ಬಹಳಷ್ಟು ವಿಷಯಗಳ ಬಗ್ಗೆ ಮಹನೀಯರುಗಳು ನಮಗೆ ತರಬೇತಿಯನ್ನು ಕೊಟ್ಟಾಗ ಈ ಸದನದಲ್ಲಿ ಹಲವಾರು ವಿಷಯಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ, ಕೆಳಮನೆಯಲ್ಲಿ ಆಗದಿರುವಂತಹ ಚರ್ಚೆಗಳು ಇಲ್ಲಿ ನಡೆಯುತ್ತದೆ, ಅಲ್ಲಿಗೆ ಸಹಕಾರವಾಗಿ ನಾವೆಲ್ಲರೂ ಚರ್ಚೆಗಳ ಮುಖಾಂತರ ಒಂದಷ್ಟು... we are all policy makers. ಶಾಸಕಾಂಗಕ್ಕೆ ಅದರದ್ದೇ ಆದಂತಹ ಮಹತ್ವವಿದೆ, ಅದರೊಳಗೆ ಬದಲಾವಣೆ ಏನಾದರೂ ತರುವುದಿದ್ದರೆ ಅದು ಇಲ್ಲಿಂದ ಹೋಗುತ್ತದೆ ಎಂದು ನಾವು ಬಹಳ ನಿರೀಕ್ಷೆಯಲ್ಲಿದ್ದೆವು. ಆ ತರಬೇತಿಯಲ್ಲಿ ಬಹುಶಃ ಮಾನ್ಯ ಶ್ರೀಕಂಠೇಗೌಡರು ಹೇಳಿರಬಹುದು ಎಂದು ಕಾಣುತ್ತದೆ. ಅವರು ಬಾವಿ ಇರುವುದಿಲ್ಲ ಎಂದು ಹೇಳಿದರು, ಬಂದು ಎರಡೇ ದಿನಕ್ಕೆ ನಾವು ಬಾವಿಯೂ ನೋಡಿದ ಹಾಗೆ ಆಯಿತು. ನಾವು ಬಾವಿಗೆ ಇಳಿಯುವುದಿಲ್ಲ, ಬಾವಿಗೆ ಮಹತ್ವವಿಲ್ಲ, ಬಾವಿ ಅವಶ್ಯಕತೆ ಇಲ್ಲ ಎನ್ನುವಂಥದ್ದನ್ನು ಅವರು ಹೇಳಿದರು. ಆದರೆ ಇಲ್ಲಿ ನಾವು ಬಾವಿಯನ್ನು ನೋಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಮುಂದೆ ಈ ರೀತಿ ಎಲ್ಲಾ ನೋಡಬಾರದು ಎನ್ನುವುದಕ್ಕೆ ನೀವು ಮಾತನಾಡುತ್ತಿದ್ದೀರಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾವು 25 ಜನ ಸದಸ್ಯರು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಆಯ್ಕೆಯಾಗಿ ಬಂದಿದ್ದೇವೆ. ಮುಂದೆ ಬಜೆಟ್ ಅಧಿವೇಶನ ಬರುತ್ತದೆ, ಆ ಅಧಿವೇಶನದಲ್ಲಿ ಗ್ರಾಮ ಪಂಚಾಯಿತಿಗಳ ಸಮಸ್ಯೆ, ಗ್ರಾಮ ಪಂಚಾಯಿತಿಯ ಸದಸ್ಯರುಗಳ ಸಮಸ್ಯೆಗಳನ್ನು ನಾವು ಇಲ್ಲಿ ಚರ್ಚೆ ಮಾಡುತ್ತೇವೆ ಎಂದು ಬಹಳಷ್ಟು ಜನರು ನಮ್ಮಲ್ಲಿ ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಸದಸ್ಯರುಗಳು ಪ್ರಶ್ನೋತ್ತರ, ಶೂನ್ಯ ವೇಳೆ, ಇನ್ನಿತರ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಾನು ಅಭಿನಂದಿಸುತ್ತೇನೆ. ಎರಡು ದಿನಗಳಂದ ಉಭಯ ಸದನಗಳಲ್ಲಿ ನಡೆಯುತ್ತಿರುವಂತಹ ಮುಷ್ಕರ, ಧರಣಿ, ಇವೆಲ್ಲವೂ ನಿಜಕ್ಕೂ ದುರಾದೃಷ್ಟಕರ ಸಂಗತಿಯಾಗಿದೆ. ಈಗಾಗಲೇ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗಳಾಗಬೇಕಾಗಿತ್ತು. ಈ ಹತ್ತು ದಿನಗಳ ಅಧಿವೇಶನದಲ್ಲಿ ಜ್ವಲಂತ ಸಮಸ್ಯೆಗಳು, ಹತ್ತಾರು ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ, ಆ ಚರ್ಚೆಗೆ ಪರಿಹಾರ ಕೂಡ ಒದಗಿಸುವಂತಹ ಕೆಲಸ ಈ ಸದನದಲ್ಲಿ ಆಗಬೇಕಾಗಿತ್ತು. ಇದರ ಜೊತೆಗೆ ಶೂನ್ಯ ವೇಳೆ, ನಿಯಮ 330, ಪ್ರಶ್ನೋತ್ತರ, ಇವುಗಳಲ್ಲಿ ನಾವು ಮಹತ್ವವಾದ ಹತ್ತು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಜನಸಾಮಾನ್ಯರ ಬದುಕಿನ ಬಗ್ಗೆ ಚರ್ಚೆ ಮಾಡುವುದಕ್ಕೆ ದೊಡ್ಡ ಪಟ್ಟಿಯೇ ಇತ್ತು. ಅವೆಲ್ಲವನ್ನು ಮೀರಿ ಇವತ್ತು ಈ ರಾಷ್ಟ್ರಧ್ವಜಕ್ಕೆ ಸಂಬಂಧಪಟ್ಟ ವಿಚಾರ ಬಂದಂತಹ ಸಂದರ್ಭದಲ್ಲಿ ಅವೆಲ್ಲದಕ್ಕೂ ಮಿಗಿಲಾಗಿರುವಂಥದ್ದು ರಾಷ್ಟ್ರದ ಏಕಾಗ್ರತೆ ರಾಷ್ಟ್ರಧ್ವಜ. ರಾಷ್ಟ್ರಧ್ವಜ ಎಂದರೆ ಹುಟ್ಟಿನಿಂದಲೇ ಅದನ್ನು ಜೊತೆ ಜೊತೆಯಾಗಿ ಒಂದು ಭಾವನಾತ್ಮಕವಾದಂತಹ ಸಂಬಂಧವನ್ನು ನಾವೆಲ್ಲರೂ ಬೆಳಸಿಕೊಂಡು ಬಂದಿದ್ದೇವೆ. 130 ಕೋಟಿ ಜನ ಒಲಂಪಿಕ್ಸ್‌ನಲ್ಲೋ ಅಥವಾ ಏಷಿಯನ್ ಗೇಮ್ಸ್‌ನಲ್ಲೋ ನಾವೆಲ್ಲರೂ ಭಾಗವಹಿಸುವುದಕ್ಕಾಗುವುದಿಲ್ಲ. ನಮ್ಮ ಪ್ರತಿನಿಧಿಯಾಗಿ ಯಾರೋ ಒಬ್ಬ ಕ್ರೀಡಾಪಟು ಭಾಗವಹಿಸಿರುತ್ತಾರೆ, ಅವರು ವಿಜೇತರಾಗಿ ಪದಕವನ್ನು ಪಡೆದಂತಹ ಸಂದರ್ಭದಲ್ಲಿ ಆ ಕ್ರೀಡಾಂಗಣದಲ್ಲಿ ನಮ್ಮ ರಾಷ್ಟ್ರದ ಧ್ವಜ ಮೇಲಕ್ಕೆ ಹಾರಿದಂತಹ ಸಂದರ್ಭದಲ್ಲಿ ರಾಷ್ಟ್ರಗೀತೆ ನುಡಿದಂತಹ ಸಂದರ್ಭದಲ್ಲಿ ನಾವು ಟಿ.ವಿ.ಯಲ್ಲಿ ನೋಡುತ್ತಿದ್ದರೆ ರೋಮಾಂಚಿತರಾಗುತ್ತೇವೆ. ನಮ್ಮೆಲ್ಲರ ಪ್ರತಿನಿಧಿಯಾಗಿ, ನಮ್ಮ ಭಾವೈಕ್ಯತೆ ಮತ್ತು ಏಕಾಗ್ರತೆಯ ಪ್ರತಿಬಿಂಬವಾಗಿ ರಾಷ್ಟ್ರಧ್ವಜ ವಿದೇಶದಲ್ಲೂ ಹಾರಿ ಹೆಮ್ಮೆ ತರುವಂಥದ್ದು ಎಂದರೆ ಅದು ನಮ್ಮೆಲ್ಲರನ್ನು ಒಟ್ಟಾಗಿ ಇಡುವಂಥದ್ದು. ಜಮ್ಮು-ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೂ ಹತ್ತು ಹಲವಾರು ಸಂಸ್ಕೃತಿ, ಭಾಷೆ, ಧರ್ಮ, ವಿಚಾರ, ಸಂಸ್ಕಾರಗಳನ್ನು ಹೊಂದಿರುವಂತಹ ಎಲ್ಲರನ್ನು ಒಟ್ಟುಗೂಡಿಸುವಂಥದ್ದು ರಾಷ್ಟ್ರಧ್ವಜ. ತ್ರಿವರ್ಣಧ್ವಜದಲ್ಲಿ ನಮ್ಮನ್ನು ನಾವು ಸಾಕ್ಷೀಕರಿಸಿ ನೋಡುವಂಥ ಒಂದು ಸಾರ್ಥಕ ಮನೋಭಾವ, ನಮ್ಮದು ಎನ್ನುವಂತಹ ಪ್ರೀತಿ. ಜಾತಿ, ಮತ, ಭಾಷೆಗಳನ್ನೆಲ್ಲಾ ಮೀರಿ ರಾಷ್ಟ್ರಧ್ವಜವನ್ನು ಪ್ರೀತಿಸುವಂತಹ

ಅನುಭಾವದಲ್ಲಿರುವಂಥವರು ನಾವು. ಅಂತಹ ರಾಷ್ಟ್ರಧ್ವಜದ ಬಗ್ಗೆ ಅದರಲ್ಲೂ ಕರ್ನಾಟಕ ರಾಜ್ಯ ಇಡೀ ದೇಶಕ್ಕೆ ಮಾದರಿಯಾಗಿರುವಂಥದ್ದು. ಇನ್ನಿತರ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ ರಾಷ್ಟ್ರ ಪ್ರೇಮದಲ್ಲಿ ನಾವು ಯಾವತ್ತೂ ಕಡೆಯಾಗಿಲ್ಲ. ಮೊದಲನೆಯ ಫೀಲ್ಡ್ ಮಾರ್ಷಲ್ ಜನರಲ್ ಕರಿಯಪ್ಪ, ಜನರಲ್ ತಿಮ್ಮಯ್ಯನವರಿಂದ ಹಿಡಿದು ಈ ರಾಜ್ಯದ ಮಣ್ಣಿನ ಗುಣಕ್ಕೆ ಅದ್ದರದ್ದೇ ಆದಂತಹ ಸೊಗಡಿದೆ. ರಾಷ್ಟ್ರೀಯ ಏಕತೆಯ ಬಗ್ಗೆ ಇಲ್ಲಿನ ನಾಯಕರುಗಳು ಸಮರ್ಥವಾಗಿ ಸಾರುತ್ತಾ ಬಂದಿದ್ದಾರೆ. ರಾಷ್ಟ್ರದಲ್ಲಿ ರಾಷ್ಟ್ರೀಯತೆಗೆ ಅತ್ಯಂತ ಮುಂದಾಳತ್ವ ಇರುವಂತಹ ಅಗ್ರಗಣ್ಯ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಒಂದಾಗಿದೆ. ಮಾನ್ಯ ಈಶ್ವರಪ್ಪನವರಿಗೆ ರಾಜಕೀಯ ಪ್ರೇರಿತವಾದ ಉದ್ದೇಶ ಏನು ಇಲ್ಲ. ಆದರೆ ಇದು ಅವರ ದುರಾದೃಷ್ಟವೆನ್ನಬಹುದು. ಇವತ್ತು ರಾಜಕೀಯವಾಗಿ ಬಿಜೆಪಿ, ಜೆಡಿ(ಎಸ್), ಕಾಂಗ್ರೆಸ್, ಇವು ಪ್ರಮುಖವಾಗಿ ಇರುವಂತಹ ಪಕ್ಷಗಳು. ನಮ್ಮ ಸಿದ್ಧಾಂತಗಳಲ್ಲಿ, ವಿಚಾರಗಳಲ್ಲಿ, ವಿಭಿನ್ನತೆ ಇರಬಹುದು. ಸರ್ಕಾರಗಳು ಬದಲಾದಾಗ ಇವತ್ತು ವಿರೋಧ ಪಕ್ಷದಲ್ಲಿರುವವರು ಮುಂದೆ ಆಡಳಿತ ಪಕ್ಷಕ್ಕೆ ಹೋಗಿ ಮಂತ್ರಿಗಳಾಗುತ್ತಾರೆ ಅಥವಾ ಆಡಳಿತ ಪಕ್ಷದವರು ವಿರೋಧ ಪಕ್ಷಕ್ಕೆ ಬರುತ್ತಾರೆ. ಇದರಲ್ಲಿ ವ್ಯತ್ಯಾಸಗಳೇನೂ ಇಲ್ಲ. ರಾಜಕೀಯ ಪಕ್ಷಗಳಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಎಂದೇನೂ ಇಲ್ಲ. ಎಲ್ಲವೂ ರಾಷ್ಟ್ರಕ್ಕಾಗಿ, ರಾಜ್ಯಕ್ಕಾಗಿ ಇರುವಂತಹ ಪಕ್ಷಗಳಾಗಿವೆ. ಆದರೆ ಒಬ್ಬ ಜನಸಾಮಾನ್ಯ ರಾಷ್ಟ್ರಧ್ವಜದ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಯಾರಿಗೂ ಗೊತ್ತಾಗದೆ, ಮಾಧ್ಯಮಗಳ ಮುಖಾಂತರ ವಿಚಾರಕ್ಕೆ ಬರದೆ ಎಲ್ಲೋ ಮರೆಯಾಗಿ ಹೇಳಿದ್ದರೆ ಅದು ಒಂದು ರೀತಿ. ಇವತ್ತು ಸಿನಿಮಾ ಮಂದಿರದಲ್ಲಿ ರಾಷ್ಟ್ರಗೀತೆಯನ್ನು ನುಡಿಸಿದರೆ ನಾವೆಲ್ಲರೂ ಎದ್ದುನಿಂತುಕೊಂಡು ರಾಷ್ಟ್ರಗೀತೆಗೆ ಗೌರವವನ್ನು ತೋರಿಸುವಂತಹ ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪನವರಂತಹ ಜವಾಬ್ದಾರಿಯುತವಾದಂತಹ ವ್ಯಕ್ತಿ ಎಷ್ಟು ಬಾರಿ ಶಾಸಕರಾಗಿದ್ದಾರೆ, ಅವರು ಬಂದಿರುವಂತಹ ಹಿನ್ನೆಲೆ ಏನು, ಅವರು ಆರ್‌ಎಸ್‌ಎಸ್ ನಿಂದ ಬಂದಿರುವಂತಹ ಹಿನ್ನೆಲೆಯಾಗಿದ್ದರೆ ನಮ್ಮ ಮಿತ್ರರು ಹೇಳಿರುವ ರೀತಿಯಲ್ಲಿ ಆರ್‌ಎಸ್‌ಎಸ್ ರಾಷ್ಟ್ರಭಕ್ತಿಯನ್ನು ಹುಟ್ಟಿ ಹಾಕತಕ್ಕಂತಹ ಸಂಸ್ಥೆಯಿಂದ ಬಂದಿರುವಂಥವರು. ಅದರಲ್ಲೂ ಒಬ್ಬ ಹಿರಿಯ ಸಚಿವರಾಗಿರುವಂಥವರು, ಪಕ್ಷದ ಮಾಜಿ ಅಧ್ಯಕ್ಷರಾಗಿರುವಂಥವರು ರಾಷ್ಟ್ರಧ್ವಜದ ಬಗ್ಗೆ ಮಾತನಾಡಿರುವಂತಹ ಮಾತು ಅವಶ್ಯಕತೆ ಇತ್ತೇ; ರಾಷ್ಟ್ರಧ್ವಜದ ಬಗ್ಗೆ ಅವರು ಏಕೆ ಮಾತನಾಡಬೇಕಾಗಿತ್ತು; ಅವರು ಯಾವ ಸಂದರ್ಭದಲ್ಲಿ ಮಾತನಾಡಿದ್ದಾರೆ; ಮಾತನಾಡಿರುವಂತಹ

ಹಿನ್ನೆಲೆ ಏನು? ನಾವು 'ಕೇಸರಿ' ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಅವರ ಖಾಸಗಿಯಾಗಿರುವಂತಹ ಜಾಗಗಳಲ್ಲಿ, ವೈಯಕ್ತಿಕವಾಗಿರುವಂತಹ ಜಾಗಗಳಲ್ಲಿ ಹಾರಿಸಿಕೊಳ್ಳಲಿ. ಅದು ಅವರಿಗಿರುವಂತಹ ಅಭಿಮಾನ. ಕೇಸರಿ ಬಗ್ಗೆ ನಮ್ಮದ್ದೇ ಆದಂತಹ ಗೌರವವಿದೆ. ಈ ದೇಶದ ಪ್ರಧಾನ ಮಂತ್ರಿಯಾಗಿದ್ದಂಥವರು ನಮ್ಮ ರಾಜ್ಯದಲ್ಲೂ ಕೂಡ ಇದ್ದರು. ಜನವರಿ-26, ಆಗಸ್ಟ್-15, ಇದು ದೇಶದಲ್ಲೇ ವಿಶೇಷವಾದಂತಹ ದಿನ. ಕೆಂಪು ಕೋಟೆಯಲ್ಲಿ ಯಾರು ಕೂಡ ಹೋಗಿ ಬಾವುಟವನ್ನು ಹಾರಿಸುವುದಕ್ಕೆ ಸಾಧ್ಯವಿಲ್ಲ. ಇನ್ನಿತರ ಬಾವುಟಗಳನ್ನು ಅಲ್ಲಿ ಹಾರಿಸುವುದಕ್ಕೆ ಕಲ್ಪನೆ ಕೂಡ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೆಂಪು ಕೋಟೆಗೆ ಅದರದ್ದೇ ಆದಂತಹ ಒಂದು ಇತಿಹಾಸ ಇರುವಂಥದ್ದು. ನಾನು ಈಗಾಗಲೇ ಹೇಳಿದ ಹಾಗೆ ಅದು ದೇಶದ ಸಮಗ್ರತೆಯನ್ನು ಸಾರುವಂತಹ ಒಂದು ಐತಿಹಾಸಿಕವಾದಂತಹ ಸ್ಥಳ. ಆ ಸ್ಥಳದ ಮೇಲೆ ಈ ದೇಶದ ಅತ್ಯುನ್ನತ ಹುದ್ದೆಯಾಗಿರುವಂತಹ ಪ್ರಧಾನ ಮಂತ್ರಿಗಳು ರಾಷ್ಟ್ರಧ್ವಜವನ್ನು ಹಾರಿಸುವಂಥದ್ದು. ಬೇರೆ ಧ್ವಜ; ಕನ್ನಡ ಬಾವುಟ, ಹಸಿರು ಬಾವುಟ, ಕೇಸರಿ ಬಾವುಟ, ಹಳದಿ ಬಾವುಟ, ಜಾತಿ, ಧರ್ಮ, ಸೂಚಿಸತಕ್ಕಂಥ ನೂರಾರು ಬಾವುಟಗಳ ಬಗ್ಗೆ ನಮ್ಮದೇ ಆಗಿರುವಂತಹ ಅಭಿಮಾನ ಇರಲಿ. ಆದರೆ ರಾಷ್ಟ್ರಧ್ವಜಕ್ಕೆ ಸರಿಸಮಾನವಾದಂತಹ ಧ್ವಜ ಮತ್ತೊಂದು ಇಲ್ಲ, ಅದಕ್ಕೆ ಸರಿಸಾಟಿಯಾದಂತಹ ಧ್ವಜ ಮತ್ತೊಂದು ಇಲ್ಲ. ಅಂತಹ ಧ್ವಜದ ಬಗ್ಗೆ ಪ್ರಶ್ನೆ ಮಾಡುವಂಥದ್ದೇ ಇಲ್ಲ. ಅಂತಹ ರಾಷ್ಟ್ರಧ್ವಜದ ಬದಲಿಗೆ ಮತ್ತೊಂದು ಧ್ವಜವನ್ನು ಹಾರಿಸುತ್ತೇವೆ, ಹಾರುತ್ತದೆ; ನೂರು ವರ್ಷ ಅಲ್ಲ, ಐನೂರು ವರ್ಷ ಆಗಲಿ ಎಂದು ಹೇಳುವ ಕಲ್ಪನೆ ಅವರಿಗೆ ಏಕೆ ಬಂತು?

(ಮುಂದು)

**(66) 17.02.2022/4-10/ಬಿಕೆಪಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್. ರವಿ( ಮುಂದು):-**

ಮಾನಸಿಕವಾಗಿ, ಅವರ ಮನಸ್ಸಿನಲ್ಲಿ ಆ ಉದ್ದೇಶ ಏತಕ್ಕೆ ಬಂತು? ಅವರ ಮನಸ್ಸಿನಲ್ಲಿ ಆ ಒಂದು ದುರುದ್ದೇಶ ಇದ್ದುದರಿಂದ, 100 ವರ್ಷ ಆಗಬಹುದು, 200 ವರ್ಷಗಳಾಗಬಹುದು ನಾವು ಹಾರಿಸಿಯೇ ತೀರುತ್ತೇವೆ, ಹಾರುತ್ತದೆ. ಅವರು ಹಾರಿಸಿಯೇ ತೀರುತ್ತೇವೆಂದು ಹೇಳಿದರೆ ಚಿಂತೆ

ಇಲ್ಲ. ಹಾರುತ್ತದೆ ಎನ್ನುವ ಭಾವನೆ. ಎಲ್ಲೋ ಒಂದು ಕಡೆ ರಾಷ್ಟ್ರಧ್ವಜದ ಬಗ್ಗೆ ಒಬ್ಬ ಸಚಿವರಾಗಿ ಅಗೌರವವನ್ನು ತೋರಿಸಿರುವಂತಹದ್ದು ಅವರನ್ನು ಕ್ಷಮಿಸಲಿಕ್ಕೆ ಸಾಧ್ಯವಿಲ್ಲ. ಹೌದು, ಸದನದಲ್ಲಿನ ದೈನಂದಿನ ಕಾರ್ಯಕಲಾಪಗಳಿಗೆ ಇದರಿಂದ ಅಡ್ಡಿಯಾಗುತ್ತಿದೆ. ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವಂತಹ ನೋವು ನಮಗೂ ಇದೆ. ಆದರೆ, ಇದೆಲ್ಲವನ್ನು ಮೀರಿರುವಂತಹದ್ದು ಈ ರಾಷ್ಟ್ರಧ್ವಜ, ರಾಷ್ಟ್ರದ ಏಕಾಗ್ರತೆಗೆ ಮತ್ತು ಸಂವಿಧಾನಕ್ಕೆ ಅಪಚಾರವಾಗಬಾರದು. ಆದ್ದರಿಂದ, ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಎಂದರೆ, ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಬದಲಾವಣೆಗಳ ಬಗ್ಗೆ ಅಲ್ಲಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಮೊದಲು ಇಂತಹ ಚರ್ಚೆಗಳು ಇರಲಿಲ್ಲ. 7-8 ವರ್ಷಗಳಿಂದ ಈ ಚರ್ಚೆಗಳು ಆಗುತ್ತಿವೆ. ಒಂದು ಸಮಯದಲ್ಲಿ ಒಬ್ಬ ಕೇಂದ್ರ ಸಚಿವರೇ ಹೇಳಿದರು, ಇನ್ನೊಂದು ಕಡೆ ಲೋಕಸಭಾ ಸದಸ್ಯರು ಹೇಳಿದರು. ಮತ್ತೊಂದು ಕಡೆ ಪಕ್ಷದ ವಕ್ತಾರರು ಹೇಳಿದರು. ಸಂವಿಧಾನವನ್ನೇ ಬದಲಾವಣೆ ಮಾಡಬೇಕು, ಸಂವಿಧಾನವನ್ನು ತಿದ್ದುಪಡಿ ಮಾಡಬೇಕು, ಈ ಮೀಸಲಾತಿಗೆ ತಿದ್ದುಪಡಿ ತರಬೇಕು. ಇಂತಹ ವಿಚಾರಗಳು ಬರತಕ್ಕಂತಹ ಸಂದರ್ಭದಲ್ಲಿ ಈಗ ರಾಷ್ಟ್ರಧ್ವಜದ ಮಟ್ಟಕ್ಕೆ ಬಂದಿರುವಂತಹದ್ದು. ರಾಷ್ಟ್ರಧ್ವಜವನ್ನೇ ಬದಲಾವಣೆ ಮಾಡಿ ಕೆಂಪುಕೋಟೆಯ ಮೇಲೆ ಮತ್ತೊಂದು ಬಾವುಟವನ್ನು ಹಾರಿಸಬೇಕೆಂದರೆ. ಇದರ ಉದ್ದೇಶ ಏನು, ಇದನ್ನು ಬಿಡಲಿಕ್ಕೆ ಸಾಧ್ಯವೇ? ಜವಾಬ್ದಾರಿಯುತ ಒಂದು ವಿರೋಧ ಪಕ್ಷವಾಗಿ ಕರ್ನಾಟಕ ರಾಜ್ಯದಿಂದ ಒಬ್ಬ ಮಂತ್ರಿ ಈ ರೀತಿಯ ಸಂದೇಶವನ್ನು ಕೊಟ್ಟಿದ್ದಾರೆಂದು ರಾಷ್ಟ್ರಕ್ಕೆ ತಪ್ಪು ಸಂದೇಶ ಹೋಗಬಾರದಲ್ಲವೇ? ಕನ್ನಡಿಗರಾದ ನಾವು ಯಾವತ್ತು ಸಹ ರಾಷ್ಟ್ರಾಭಿಮಾನವನ್ನು ಇಟ್ಟುಕೊಂಡಿರುವವರಲ್ಲಿ ಮೊದಲಿಗರಾಗಿದ್ದೇವೆ. ಅಂತಹ ಒಂದು ಸ್ಪಷ್ಟ ಸಂದೇಶವನ್ನು ಕೊಡಲೇ ಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ನಮ್ಮ ಸ್ನೇಹಿತ ಸದಸ್ಯರೊಬ್ಬರು ಹೇಳುವಂತಹದ್ದು ಏನೆಂದರೆ, ಸಚಿವರ ಮೇಲೆ ಕೇಸ್ ಹಾಕಿ, ಅವರನ್ನು ಜೈಲಿಗೆ ಕಳುಹಿಸಿ, ಅವರನ್ನು ಮಂತ್ರಿಗಿರಿಯಿಂದ ಕೆಳಗಡೆ ಇಳಿಸಿದರೆ ಇವರ ಪಕ್ಷಕ್ಕೆ ಏನು ಆಗುವುದಿಲ್ಲ. ಆ ಪಕ್ಷದ ಬಗ್ಗೆ ಮತ್ತೊಷ್ಟು ಹೆಮ್ಮೆ ಬರುತ್ತದೆ, ಗೌರವ ಬರುತ್ತದೆ. ಜನ ಸಾಮಾನ್ಯರು ಅವರ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾರೆ. ಅಂತಹ ಕಾರ್ಯವನ್ನು

ಮಾಡುವುದರ ಬದಲಿಗೆ ನೀವು ಶ್ರೀ ಈಶ್ವರಪ್ಪನವರನ್ನು ಕರೆದು ಇಲ್ಲಿ ಮಾತನಾಡಬೇಕು ಎಂದು ಹೇಳುತ್ತೀರಲ್ಲಾ, ರಾಷ್ಟ್ರಧ್ವಜವನ್ನು ಹಾರಿಸುತ್ತೇವೆ ಎಂದು ಹೇಳುವಂತಹ ಶ್ರೀ ಈಶ್ವರಪ್ಪನವರ ಭಾಷಣವನ್ನು ನಾವು ಏತಕ್ಕೆ ಕೇಳಬೇಕು. ಕೋಳಿ ಕೇಳಿ ಮಸಾಲೆಯನ್ನು ಅರೆಯಲಿಕ್ಕೆ ಆಗುತ್ತದೆಯೇ?

**ಸಭಾಪತಿಯವರು:-** ಶ್ರೀಯುತ ರವಿ ಅವರೆ, ಸಾಕು, ಕುಳಿತುಕೊಳ್ಳಿ.

**ಶ್ರೀ ಎಸ್. ರವಿ:-** ತಾನು ಹೇಳಿರುವುದನ್ನು ಅವರು ಸಮರ್ಥಿಸಿಕೊಳ್ಳಬೇಕಲ್ಲವೇ? ಅವರು ಸದನದಲ್ಲಿ ಮಾತನಾಡುವುದನ್ನು ನಾವು ನೋಡಿದ್ದೇವೆ. ಅಂತಹವರ ಮಾತನ್ನು ಕೇಳಲಿಕ್ಕೆ ಈ ಸದನದ ಸಮಯವನ್ನು ವ್ಯರ್ಥ ಮಾಡುವುದರ ಬದಲಿಗೆ ಈ ವಿಚಾರದಲ್ಲಿ ಮಾನ್ಯಮುಖ್ಯಮಂತ್ರಿಗಳ ಬಳಿ ಸಭಾ ನಾಯಕರು ಹೋಗಿ ಮಾತನಾಡಬೇಕು. ಗೃಹ ಸಚಿವರು ಇದ್ದಾರೆ, ಮಾತನಾಡಲಿ, ತುರ್ತಾಗಿ ಈ ಕೆಲಸವನ್ನು ಮಾಡಬೇಕು. ಸದನದ ಸಮಯವನ್ನು ಹಾಳು ಮಾಡಬೇಡಿ. ತಮ್ಮ ಪಕ್ಷಕ್ಕೆ ಗೌರವ ಬರುತ್ತದೆ. ಅವರ ಮೇಲೆ ಕೇಸ್ ಬುಕ್ ಮಾಡಿ, ಅವರ ಕಡೆಯಿಂದಲೇ ಗೌರವಯುತವಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಪಡೆಯಿರಿ. ಅವರು ರಾಜೀನಾಮೆಯನ್ನು ಕೊಡದಿದ್ದರೆ ವಜಾ ಮಾಡಿ. ವಿಷಯ ಇಷ್ಟೆ.

**ಸಭಾಪತಿಯವರು:-** ಶ್ರೀಯುತ ರವಿ ಅವರೆ, ಸಾಕು, ಕುಳಿತುಕೊಳ್ಳಿ.

**ಶ್ರೀ ಎಸ್ . ರವಿ:-** ರಾಷ್ಟ್ರಧ್ವಜದ ವಿಚಾರ ಬಂದಂತಹ ಸಂದರ್ಭದಲ್ಲಿ ನಾವು ಯಾವುದೇ ರಾಜಿಗೂ ಸಿದ್ಧರಿಲ್ಲ. ತಾವು ಹಿರಿಯ ಸದಸ್ಯರಿದ್ದೀರಿ. ಈ ಸದನದಲ್ಲಿ ತಮಗೆ ತಮ್ಮದೇ ಆದಂತಹ ಗೌರವ ಇದೆ. ನಿಮ್ಮನ್ನು ನಾವು ಎಲ್ಲರೂ ಸಹ ಪ್ರೀತಿಸುತ್ತೇವೆ ಮತ್ತು ಗೌರವಿಸುತ್ತೇವೆ. ಏಕೆಂದರೆ, ನಿಮ್ಮ ಅನುಭವದ ಹಿನ್ನೆಲೆಯಲ್ಲಿ ನಿಮ್ಮ ವರ್ತನೆ ಕೂಡ ಎಲ್ಲರನ್ನು ಸಹ ಸಮತೋಲನವಾಗಿ ತೆಗೆದುಕೊಂಡು ಹೋಗತಕ್ಕಂತಹ ಸಮಚಿತ್ತ ನಾಯಕತ್ವ ತಮ್ಮಲ್ಲಿ ಆ ಸ್ಥಾನಕ್ಕೆ ಸೂಕ್ತವಾಗಿ ಕುಳಿತಿರತಕ್ಕಂತಹವರು. ಇವರಾದರೂ ಈ ಪಕ್ಷದವರು

ರಾಜಕೀಯ ಕಾರಣಗಳಿಗೋಸ್ಕರ ಶ್ರೀಯುತ ಈಶ್ವರಪ್ಪನವರ ರಾಜೀನಾಮೆಯನ್ನು ಪಡೆದು ಕೇಸ್ ಹಾಕಲಿಲ್ಲ ಎಂದರೆ ತಾವಾದರೂ ಸಹ ಆ ಪೀಠದಲ್ಲಿ ಕುಳಿತುಕೊಂಡವರು, ತಮ್ಮ ಅಧಿಕಾರವನ್ನು ಚಲಾವಣೆ ಮಾಡಿ, ದಯಮಾಡಿ, ಈ ಒಂದು ಸಮಸ್ಯೆಗೆ ಪರಿಹಾರವನ್ನು ಕೊಡುತ್ತೀರಿ ಎನ್ನುವ ಭರವಸೆಯಲ್ಲಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರು ಸದನಕ್ಕೆ ಬಂದು ಭಾಷಣ ಮಾಡಿ ಹೋಗಿದ್ದಾರೆ, Hit and run ರೀತಿ ಆಗಬಾರದು. ದಯವಿಟ್ಟು ಅವರನ್ನು ಕರೆಸಿ, ನಾನು ಮಾತನಾಡಬೇಕು.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಧಿವೇಶನದಲ್ಲಿ ಹಲವಾರು ವಿಚಾರಗಳ ಬಗ್ಗೆ ಚರ್ಚೆಯಾಗಬೇಕು, ಕೋವಿಡ್ ರೋಗದಿಂದ ಜನರು ಬಳಲಿದ್ದು, ಈ ದಿಸೆಯಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವಂತಹ ವಿಚಾರಗಳಾಗಬೇಕು. ಪ್ರವಾಹದಿಂದ ಆದಂದತಹ ಹಾನಿಗಳ ಬಗ್ಗೆ ಚರ್ಚೆಯಾಗಬೇಕು. ಆದರೆ, ಅಪಾದನೆಗಳು ಬಂದಾಗ ಹಲವಾರು ಮಂತ್ರಿಗಳು ಶಾಸಕರು, ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟಂತಹ ಹಲವಾರು ಉದಾಹರಣೆಗಳಿವೆ. ರೈಲ್ವೆ ಸಚಿವರು ಇದ್ದಾಗ ಯಾವುದೋ ಒಂದು ರೈಲ್ವೇ ಅಪಘಾತವಾದಾಗ ರಾಜೀನಾಮೆಯನ್ನು ಕೊಟ್ಟಂತಹ ಉದಾಹರಣೆಗಳಿವೆ. ಇಲ್ಲಿಯೇ ಮೊಬೈಲ್‌ನಲ್ಲಿ ಅಶ್ಲೀಲ ಚಿತ್ರಗಳನ್ನು ನೋಡಿದ್ದಾರೆಂದು ಅಪಾದನೆ ಬಂದಾಗ ರಾಜೀನಾಮೆಯನ್ನು ಕೊಟ್ಟಂತಹ ಉದಾಹರಣೆಗಳಿವೆ. ಲಂಚ ಪಡೆದಂತಹ ಸಮಯದಲ್ಲಿ ರಾಜಿನಾಮೆ ಕೊಟ್ಟಂತಹ ಉದಾಹರಣೆಗಳಿವೆ. ಇಲ್ಲಿ ಬರತಕ್ಕಂತಹ ಪ್ರಶ್ನೆಗಳು ಏನಾಗಿವೆ, ನಮ್ಮ ದೇಶದ ರಾಷ್ಟ್ರಧ್ವಜಕ್ಕೆ ಅಗೌರವವಾಗಿದೆ ಎನ್ನುವಂತಹ ಪ್ರಶ್ನೆ ಉದ್ಭವವಾಗಿದೆ. ಇದನ್ನು ರಾಷ್ಟ್ರದ, ರಾಜ್ಯದಲ್ಲಿನ ಎಲ್ಲರೂ ನೋಡುತ್ತಿದ್ದಾರೆ. ಮಂತ್ರಿಗಳ ಮೇಲೆ ಅಪಾದನೆ ಬಂದಿದೆ. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯ ಮೇಲೆ ಬಹಳ ಅಭಿಮಾನ ಇದೆ ಎಂದು ಆಡಳಿತ ಪಕ್ಷದವರು ಹೇಳಿಕೊಳ್ಳುತ್ತಿದ್ದಾರೆ. ರಾಷ್ಟ್ರಧ್ವಜದ ಬಗ್ಗೆ ಅಪಾದನೆ ಬಂದಾಗ ಹೌದು, ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಅವರಾದರೂ ಹೇಳಬೇಕು.

ಇಲ್ಲವೆಂದರೆ, ನಾವು ರಾಷ್ಟ್ರ ಭಕ್ತರು, ರಾಷ್ಟ್ರಧ್ವಜದ ಬಗ್ಗೆ ಗೌರವ ಇಟ್ಟುಕೊಂಡಿರುವವರು ಎಂದು ಹೇಳಿ ಮುಖ್ಯಮಂತ್ರಿಗಳು ಅವರನ್ನು ಕರೆದು ನೀವು ರಾಜೀನಾಮೆ ಕೊಡಬೇಕೆಂದು ಹೇಳಬೇಕು. ಅಪಾದನೆಯಿಂದ ಹೊರಗಡೆ ಬಂದ ಮೇಲೆ ಮತ್ತೆ ಅವರನ್ನು ಮಂತ್ರಿಯನ್ನಾಗಿ ಮಾಡಿ, ಯಾರು ಬೇಡವೆಂದು ಹೇಳುತ್ತಾರೆ. ರಾಷ್ಟ್ರಧ್ವಜದ ವಿಷಯವಾಗಿ ಇವರು ಮಾತನಾಡತಕ್ಕಂತಹದ್ದು ತಪ್ಪು ಎಂಬ ಅಪಾದನೆ ಬಂದ ಮೇಲೆ. ಇದರಲ್ಲಿ ಏನು ತಪ್ಪು? ಯಾರೋ ಪ್ರಶ್ನೆ ಕೇಳಿದರು, ಅದಕ್ಕೆ ನಾನು ಹೇಳಿಬಿಟ್ಟೆ. ಅವರು ಹೇಳಿದ್ದಾರೆ, ಅವರು ಏನು ಹೇಳಿಲ್ಲ. ಹೌದು, ಅವರು ಭಗವಾಧ್ವಜ ಹಾರಿಸುತ್ತಾರೆಯೆ ಎಂಬ ಬಗ್ಗೆ ಕೇಳಿದರು. ನಿಮ್ಮ ಉದ್ದೇಶ ಒಳಗಡೆ ಏನಿತ್ತು? ಇಂದಿಲ್ಲ, ನಾಳೆ ಹಾರಿಸುತ್ತೇವೆ ಎನ್ನುವುದು. ಅಂದರೆ, ಅವರ ಒಳಗಡೆ ಇರತಕ್ಕಂತಹ hidden agenda. ಇದನ್ನು ಅವರು ಬಾಯಿ ಬಿಟ್ಟಿದ್ದಾರೆ.

ಮಾನ್ಯ ಸಭಾಪತಿಯವರೆ, ಇದು ಸರಿಯಲ್ಲ, ಈ ದೇಶ ಗೌರವ ಕೊಡತಕ್ಕಂತಹ ರಾಷ್ಟ್ರಧ್ವಜದ ಬಗ್ಗೆ ಇವತ್ತು ಅವರು ಚರ್ಚೆಗೆ ಅವಕಾಶ ಕೊಡಲಾರದೇ, ಹಲವಾರು ವಿಷಯಗಳ ಕುರಿತು ಚರ್ಚೆಗೆ ಅವಕಾಶ ಕೊಡಲಿಕ್ಕೆ ಆಗುತ್ತಿಲ್ಲ. ಆದ್ದರಿಂದ, ಈ ವಿಚಾರವಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು, ಹೌದು, ಅಪಾದನೆ ಬಂದಾಗ ನಾವು ರಾಜೀನಾಮೆ ಕೊಡಿಸುತ್ತೇವೆ, ದೇಶ ಭಕ್ತಿ, ರಾಷ್ಟ್ರಗೀತೆ , ರಾಷ್ಟ್ರಧ್ವಜದ ಬಗ್ಗೆ ನಮಗೆ ಗೌರವ ಇದೆ, ಅಪಾದನೆಯಿಂದ ಹೊರಗಡೆ ಬಂದರೆ ಮತ್ತೆ ಮಂತ್ರಿ ಮಾಡುತ್ತೇವೆಂದು ಹೇಳಬೇಕೆಂದು ವಿನಂತಿ ಮಾಡುತ್ತೇನೆ. ಈ ವಿಚಾರ ಇದೇ ರೀತಿ ಮುಂದುವರಿಯಬಾರದು. ದಯಮಾಡಿ, ಮುಖ್ಯಮಂತ್ರಿಗಳನ್ನು, ವಿರೋಧ ಪಕ್ಷದ ನಾಯಕರನ್ನು ಕರೆದು ಮಾತನಾಡುವುದರ ಮೂಲಕ ಸದನ ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ರಾಷ್ಟ್ರಧ್ವಜದಂತಹ ಒಂದು ಪ್ರಮುಖ ವಿಚಾರದ ಬಗ್ಗೆ ಒಂದು ಜವಾಬ್ದಾರಿಯುತ ಪ್ರತಿಪಕ್ಷವಾಗಿ, ಸರ್ಕಾರದ ಹಿರಿಯ ಸಚಿವರು ನೀಡಿದ ಹೇಳಿಕೆಯಲ್ಲಿ

ರಾಷ್ಟ್ರಧ್ವಜದ ಮಹತ್ವಕ್ಕೆ ಅಪಮಾನವಾಗಿದೆ, ಅದು ದೇಶದ್ರೋಹ ಎನಿಸಿದೆ, ಎನ್ನುವ ವಿಚಾರದ ಮೇಲೆ ಈ ಸದನದಲ್ಲಿ ಈ ವಿಚಾರವನ್ನು ಏನು ಚರ್ಚೆ ಮಾಡುತ್ತಿದ್ದಾರೆ, ನಾನು ಇದನ್ನು ಸ್ವಾಗತಿಸುತ್ತೇನೆ. ಧರಣಿಗಿಂತ ಚರ್ಚೆ ಮಾಡುವುದರಿಂದ ಒಂದಿಷ್ಟು ವಿಚಾರ ವಿನಿಮಯವಾಗುತ್ತದೆ. ಇದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ.

ಎರಡನೆಯದಾಗಿ, ಬ್ರಿಟಿಷ್‌ನವರು ನಮ್ಮ ದೇಶವನ್ನು ಆಡಳಿತ ಮಾಡುತ್ತಿದ್ದಾಗ ನಮ್ಮ ಧ್ವಜ ಬರಬೇಕೆಂದು ಹೇಳಿ ಬ್ರಿಟಿಷ್ ಧ್ವಜವನ್ನು ಕೆಳಗೆ ಇಳಿಸಿ, ಬ್ರಿಟಿಷರ ಗುಂಡುಗಳಿಗೆ ಎದೆಯೊಡ್ಡಿ, ಲಕ್ಷಾಂತರ ಜನರು ಹುತಾತ್ಮರಾದ ಪ್ರತಿಫಲವಾಗಿ ಮತ್ತು ಅದರ ಮುಂಚೂಣಿಯಲ್ಲಿ ಮಹಾತ್ಮಗಾಂಧೀಜಿಯವರು ಚಿತ್ರಪಟವಾಗಿ ನಿಂತರು. ಅದರ ಪ್ರತಿಫಲವಾಗಿ ನಾವೆಲ್ಲರೂ ಅಧಿಕಾರವನ್ನು ಅನುಭವಿಸುತ್ತಿದ್ದೇವೆ.

ಮಾನ್ಯ ಸಭಾಪತಿಯವರೆ, ನಮ್ಮ ದೇಶದ ಅವಿಭಾಜ್ಯ ಅಂಗವಾಗಿರತಕ್ಕಂತಹ ಜಮ್ಮು-ಕಾಶ್ಮೀರ ಈ ದೇಶದ ಅವಿಭಾಜ್ಯ ಅಂಗ ಅಲ್ಲವೆಂದು ಹೇಳಿ ಅಲ್ಲಿ ಒಂದು ಧ್ವಜವನ್ನು ಹಾರಿಸಿಕೊಂಡು, "ಏಕ್ ದೇಶ್ ಮೆ ದೋ ನಿಶಾನ್, ದೋ ಪ್ರಧಾನ್, ದೋ ವಿಧಾನ್", ಎರಡು ಪ್ರಧಾನಿ, ಎರಡು ಧ್ವಜ, ಎರಡು ಆಡಳಿತ ಎನ್ನುವ ಪ್ರಶ್ನೆ ಬಂದಾಗ ಈ ದೇಶದಲ್ಲಿ, ಏಕ್ ಪ್ರಧಾನ್, ಏಕ್ ವಿಧಾನ್, ಏಕ್ ಸಂವಿಧಾನ್ ಎನ್ನುವಂತಹ ವಿಚಾರಧಾರೆ ಮೇಲೆ ಹೋರಾಟ ಮಾಡಿ ಜಮ್ಮು-ಕಾಶ್ಮೀರದಲ್ಲಿ ಹೋರಾಟದ ಸಮಯದಲ್ಲಿ ಸೆರೆವಾಸವನ್ನು ಅನುಭವಿಸಿ, ತಮ್ಮ ಜೀವಾರ್ಪಣೆ ಮಾಡಿದವರು ಪಂಡಿತ್ ಶಾಮಾ ಪ್ರಸಾದ್ ಮುಖರ್ಜಿಯವರು. ಹಿರಿಯರಾದ ತಮಗೆ ಗೊತ್ತಿದೆ, ಅಂತಹ ವಿಚಾರಧಾರೆಯಿಂದ ಈ ಪಕ್ಷ ಎರಡು ಸದಸ್ಯರಿಂದ, ಆಡಳಿತ ಪಕ್ಷಕ್ಕೆ ಬರಬೇಕಾದರೆ ಕಷ್ಟಪಟ್ಟು ಹೋರಾಟದ ಮೂಲಕ ಬಂದಿದೆ. ಧ್ವಜದ ಬಗ್ಗೆ ಪ್ರಶ್ನೆ ಬಂದಾಗ ಬ್ರಿಟಿಷ್‌ರವರ ಕಾಲದಲ್ಲಿ ನಮ್ಮ ಧ್ವಜ ಮುಂದೆ ಒಂದು ಕಾಲದಲ್ಲಿ ಹಾರುತ್ತದೆ ಎನ್ನುವ ಅಭಿಪ್ರಾಯದ ಮೇಲೆಯೇ ಹೋರಾಟ ಮಾಡಿಕೊಂಡು ಬಂದಿದೆ. ಅದು ಬ್ರಿಟಿಷ್‌ನವರಿಗೆ ದೇಶ ದ್ರೋಹ. ಅದು ಭಾರತೀಯರಿಗೆ ದೇಶದ್ರೋಹ ಅಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ಈಗ ಏನು ತಾವು ಕೇಸರಿ ಬಾವುಟವನ್ನು ಹಾರಿಸಲಿಕ್ಕೆ ಹೊರಟಿದ್ದೀರಾ?

**ಡಾ ತೇಜಸ್ವಿನಿಗೌಡ:-** ಭಾರತದ ತ್ರಿವರ್ಣ ಧ್ವಜದಲ್ಲಿ... ಧ್ವಜದ ಹೋರಾಟ ಹೇಗೆ ಆಯಿತು, ಯಾವ ಧ್ವಜ ಬರಬೇಕೆಂದು…

(**ಗೊಂದಲ**)

**ಸಭಾಪತಿಯವರು:-** ಶ್ರೀಯುತ ಯು.ಬಿ. ವೆಂಕಟೇಶ್‌ರವರೆ, ತಾವು ಕುಳಿತು ಮಾತನಾಡಬಾರದು.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ನಾನು ಅವರಿಗೆ ವಿಷಯ ಮಾತನಾಡಿ ಎಂದು ಹೇಳಿದೆ.

(**ಗೊಂದಲ**)

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಒಟ್ಟು ಮಹಿಳಾ ಸದಸ್ಯರು ೩ ಜನರು ಮಾತ್ರ ಇದ್ದೇವೆ, ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

**ಡಾ: ವೈ.ಎ.ನಾರಾಯಣಸ್ವಾಮಿ:-** ತಮ್ಮ ನಾಯಕರು ನಾಗಪುರದ ಬಗ್ಗೆ ಮಾತನಾಡಿದರು. (**ಗೊಂದಲ**)

**ಶ್ರೀ ಸುನಿಲ್‌ಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ನಿನ್ನೆ subject ಗೆ confine ಆಗಿ ಮಾತನಾಡಿ ಎಂದು ಹೇಳುತ್ತಿದ್ದರು.

(**ಮುಂದು**)

(67) 17-02-2022 (4.20) **ಕೆಜಿ-ಬಿಎನ್‌ಎಸ್** **(ಸಭಾಪತಿಯವರ ಉಪಸ್ಥಿತಿ)**

**ಡಾ||ತೇಜಸ್ವಿನಿ ಗೌಡ :-** ಮಾನ್ಯ ಸಭಾಪತಿಯವರೇ, ತಾವು ಇತ್ತೀಚೆಗೆ ಶಾಸಕರಿಗೆ ತರಬೇತಿ ಕೊಟ್ಟಿದ್ದೀರಿ. ನಾವು ಆ ಸಂದರ್ಭದಲ್ಲಿ Parliament ಗೆ ಹೋಗಿ ಬಂದಿದ್ದೇನೆಂದು ದೂರ ಕುಳಿತುಕೊಳ್ಳಲಿಲ್ಲ. ಮುಂದಿನ bench ನಲ್ಲಿ student ಆಗಿ ಕುಳಿತುಕೊಂಡಿದ್ದೆವು. ನಾವು ಪ್ರತಿ ದಿವಸ ಕಲಿಯುವುದು ಇರುತ್ತದೆ. ನಾವು ಹಿರಿಯ ಸದಸ್ಯರಿಂದ, ಹೊಸ ಸದಸ್ಯರಿಂದ ಕಲಿಯುವುದಕ್ಕಾಗಿ ಇಲ್ಲಿ ಕುಳಿತುಕೊಂಡಿದ್ದೇವೆ. ತಾವು ಚರ್ಚೆಗಳು ನಡೆಯಬೇಕು ಎನ್ನುವ ಸದಾಭಿಪ್ರಾಯದಿಂದ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ. ಹಾಗಾಗಿ, ನಾನು ಮಾತನಾಡುತ್ತಿದ್ದೇನೆ. ನಮ್ಮ ಭಾರತದ ಸೈನಿಕರು ಕತ್ತನ್ನು ಸೀಳಿಸಿಕೊಂಡು ಅಲ್ಲಿ ಅವರ ರುಂಡ ಚೆಂಡಾಡುತ್ತಿದ್ದಾಗ ಪಾಕಿಸ್ತಾನಕ್ಕೆ ಭೇಟಿ ಕೊಟ್ಟ ಒಂದು ಪ್ರಮುಖ ಪ್ರತಿಪಕ್ಷದ ನಾಯಕರು ಅಲ್ಲಿನ ಮಿಲಿಟರಿ ಮುಖ್ಯಸ್ಥರನ್ನು ತಬ್ಬಿದಾಗಲೂ ನಮ್ಮ ರಕ್ತ ಕುದಿಯುತ್ತಿತ್ತು. ನಾನು ಅವರ ಹೆಸರನ್ನು ಉಲ್ಲೇಖ ಮಾಡುವುದಿಲ್ಲ. ಅವರು ಅವತ್ತು ಮಾತನಾಡಬೇಕಿತ್ತು. Article 370 ತೆಗೆದಾಗ, uniform civil code ತರತಕ್ಕಂಥದ್ದು.,

**(ಗೊಂದಲ)**

**(ಈ ಹಂತದಲ್ಲಿ ಎರಡೂ ಕಡೆಯ ಹಲವಾರು ಸದಸ್ಯರುಗಳು ಒಮ್ಮೆಲೆ ಎದ್ದುನಿಂತು ಮಾತನಾಡತೊಡಗಿದರು)**

**(ಗೊಂದಲ)**

**ಸಭಾಪತಿಯವರು:- ಯಾವುದನ್ನೂ ಕಡತದಲ್ಲಿ ದಾಖಲಿಸಬಾರದು.**

(ಮಾನ್ಯ ಸಭಾಪತಿಯವರ ನಿರ್ದೇಶನದ ಮೇರೆಗೆ ಈ ಹಂತದಲ್ಲಿನ ನಡವಳಿಗಳನ್ನು ದಾಖಲಿಸಿರುವುದಿಲ್ಲ)

**(ಗೊಂದಲ)**

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ತ್ರಿವರ್ಣಧ್ವಜದಲ್ಲಿ ಮೂರು ಬಣ್ಣಗಳಿವೆ.

**(ಗೊಂದಲ)**

**ಸಭಾಪತಿಯವರು:-** ಸದಸ್ಯರೇ, ಆಯಿತು. ಅದೆಲ್ಲಾ ಗೊತ್ತಿದೆ. ತಾವೀಗ ವಿಷಯದ ಬಗ್ಗೆ ಮಾತನಾಡಿ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರು ಮೂರು ಬಣ್ಣಗಳ ಬಗ್ಗೆಯೂ ಸಮಾನವಾದ ಗೌರವವನ್ನು ಇಟ್ಟುಕೊಳ್ಳಬೇಕು. ಬಿಳಿ ಬಣ್ಣಕ್ಕೆ ಇಷ್ಟು ಗೌರವ ತೋರಿಸುತ್ತಾರೆ. ಆದರೆ, ಅವರಿಗೆ ಕೇಸರಿ ಎಂದರೆ ಏಕೆ ಮೈಮೇಲೆ ಭೂತ ಬರುತ್ತದೆ? ಕೇಸರಿ ತ್ಯಾಗದ ಸಂಕೇತ.

**(ಗೊಂದಲ)**

**ಸಭಾಪತಿಯವರು:-** ಪೀಠದ ಅನುಮತಿಯಿಲ್ಲದೇ, ಯಾವ ಸದಸ್ಯರು ಮಾತನಾಡಿದರೂ ಸಹ, ಅದು ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಸದಸ್ಯರೇ, ತಾವು ಮಾತನಾಡಿ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಭಾರತದ ಧ್ವಜದಲ್ಲಿ ಧರ್ಮ ಚಕ್ರ ಇದೆ. ಅಶೋಕ ಚಕ್ರ ಇದೆ. ಅದರಲ್ಲಿ ಸಂಕೇತಗಳಿವೆ. ಕೇಸರಿ ಎಂದರೆ, ನಾನು ಎಲ್ಲರಿಗೂ ಹೇಳಲ್ಲ. ಆ ಧ್ವಜದಲ್ಲಿ. ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಬಾರದು ತಾನೆ, ಹಾಗಾದರೆ, ಅವರಿಗೆ ನಿನ್ನೆ ದಿವಸ ಹೋರಾಟ ಮಾಡುವಂತಹ ಸಂದರ್ಭದಲ್ಲಿ ಎಲ್ಲಿಂದ ರಾಷ್ಟ್ರಧ್ವಜ ಬಂತು? ರಾಷ್ಟಧ್ವಜವನ್ನು ಕಿಸೆಯಲ್ಲಿ ತುರಿಕಿಕೊಂಡು ಅದನ್ನು ಸುತ್ತಿಕೊಂಡು ರಾಷ್ಟ್ರಧ್ವಜವನ್ನು ತೆರೆಯುವುದಕ್ಕೆ ಅವಕಾಶ ಇದೆಯೇ? ರಾಷ್ಟ್ರಧ್ವಜವನ್ನು ಯಾವ ರೀತಿ ಬಳಸಿಕೊಳ್ಳಬೇಕೆಂದು ಒಂದು ಸೂತ್ರ ಇಲ್ಲವೇ? ನಾನು ಅದಕ್ಕೆ ಹೇಳುತ್ತಿಲ್ಲ. ನಾನು ಅವರ ಭಾವನೆಗಳನ್ನು issue ಮಾಡುತ್ತಿಲ್ಲ. ಅವರ ಭಾವನೆ ರಾಷ್ಟ್ರಧ್ವಜದ ಬಗ್ಗೆ ಚರ್ಚೆ ಮಾಡುವುದಕ್ಕೆ ತೆಗೆದಿದ್ದಾರೆ. ಅಂತಹದ್ದನ್ನೆಲ್ಲಾ ಅಲ್ಲ. ಕೇಸರಿ ಈ ದೇಶದ ಒಂದು ಬಣ್ಣವಾಗಿದೆ. ನಮಗೆ ಜನರು ಅವಕಾಶ ಕೊಟ್ಟಂತಹ ಸಂದರ್ಭದಲ್ಲಿ ಈ ಕಡೆಗೆ ಕುಳಿತುಕೊಳ್ಳಬಹುದು. ಅವಕಾಶ ಇಲ್ಲದಿರುವ ಸಂದರ್ಭದಲ್ಲಿ ಆ ಕಡೆ ಕುಳಿತುಕೊಳ್ಳಬಹುದು. ಮಾನ್ಯ ಸಚಿವರು ಒಂದು ಹೇಳಿಕೆಯನ್ನು

ಕೊಟ್ಟಿದ್ದಾರೆ. ಇವರು ಅವರು ಹೇಳಿದ್ದನ್ನು ಅಪಾರ್ಥ ಮಾಡಿಕೊಂಡಿದ್ದಾರೆ. ನಾನು ಆ ವಿಷಯಕ್ಕೆ ಹೋಗಲಿಲ್ಲ. ಪ್ರತಿಪಕ್ಷದವರು ಕೇಳುವಂಥದ್ದನ್ನು ಕೊಡುವಂತಹದಾಗಿದ್ದರೆ, ನಮ್ಮ ಅಂಗಡಿಯಿಂದ ಕೊಟ್ಟುಬಿಡುತ್ತಿದ್ದೆವು. ತಾವು ರಾಜಿ ಮಾಡಿಸಿ ಕೊಡಿಸಿಬಿಡುತ್ತಿದ್ದಿರಿ. ಕ್ಷಮಾಪಣೆ ಕೊಡಿ ಎಂದು ಅಥವಾ ವಿಷಾದ ವ್ಯಕ್ತಪಡಿಸಿ ಎಂದರೆ ಕೊಡಿಸಿ ಬಿಡುತ್ತಿದ್ದಿರಿ. ರಾಜಿನಾಮೆ ಕೊಡಿ, ರಾಜಿನಾಮೆ ಕೊಡಿ ಎಂದು ಎಲ್ಲದಕ್ಕೂ ರಾಜಿನಾಮೆ ಕೊಡಿ ಎಂದು ಕೇಳಿದರೆ, ಸಾಕ್ಷಿ ಏನಿದೆ? ಮಾನ್ಯ ಸಚಿವರು ಧ್ವಜವನ್ನು ಹಿಡಿದುಕೊಂಡು ಧ್ವಜವನ್ನು ಹಾರಿಸುತ್ತೇನೆಂದು ಹೇಳಿದ್ದಾರೆಯೇ? ಧ್ವಜವನ್ನು ಉಲ್ಟಾ ಮಾಡಿ ಹಾರಿಸಿದ್ದಾರೆಯೇ? ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ನೆಡುತ್ತೇನೆಂದು ಹೇಳಿದ್ದಾರೆಯೇ? ಇದು ಶಬ್ದಾರ್ಥ. ಇಲ್ಲಿ ಸಾಕ್ಷಿ ಬರುತ್ತದೆ. ಪ್ರತಿಪಕ್ಷದವರು ಇದನ್ನು ಸಾಬೀತು ಮಾಡಬೇಕಾದರೆ ತಮ್ಮ ಎದುರುಗಡೆ ಸಾಕ್ಷಿ ಬರಬೇಕಾಗುತ್ತದೆ. ಆ ಸಾಕ್ಷಿಗಳು ಇಲ್ಲಿ ಲಭ್ಯವಿಲ್ಲ. ನಮ್ಮ ಇತಿಮಿತಿಯೊಳಗಡೆ ಈ ಸದನದಲ್ಲಿ ನಮಗೆ ಲಭ್ಯವಿರುವಂತಹ ಹೇಳಿಕೆ. ಅದು ಪತ್ರಿಕಾಬಾಂಧವರು ಮತ್ತು ಮಾಧ್ಯಮ ಬಾಂಧವರು ಕೇಳಿದಾಗ ಮಾನ್ಯ ಸಚಿವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಮುಂದೊಂದು ದಿವಸ ಬರುತ್ತದೆ ಅಂದರೆ, ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಆದ್ದರಿಂದ, ಇನ್ನೂ ಚರ್ಚೆ ಮಾಡುವಂತಹ ಮಹತ್ವದ ವಿಚಾರಗಳು ಇವೆ. ಅದಕ್ಕೆ ದಯಮಾಡಿ ಅವರ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ. ಸದನ ನಡೆಯುವ ರೀತಿಯಲ್ಲಿ ಈ ವಿಷಯಕ್ಕೆ ಇತಿಶ್ರೀ ಹಾಡಿ. ಪ್ರಮುಖವಾದಂತಹ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಿದ ನಂತರ ಮರಿತಿಬ್ಬೇಗೌಡರವರು ಮಾತನಾಡಲಿ. ಅವರು last. ಸಾಕು.

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು.

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಶ್ವನಾಥ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:–** ಆಯಿತು ಕೊಡುತ್ತೇನೆ. ಈಗ ಸದನ ಚೆನ್ನಾಗಿ ನಡೆಯುತ್ತಿದೆ. ಅದಕ್ಕೆ ತಾವೆಲ್ಲರೂ ದಯಮಾಡಿ ಸಹಕಾರ ಮಾಡಿ. ಯಾರು ಮಾತನಾಡುವುದಕ್ಕೆ ಕೈ ಎತ್ತಿದ್ದಾರೆಂದು ಅವರ ಹೆಸರನ್ನು ಬರೆದುಕೊಂಡಿರುತ್ತೇನೆ. ಹಾಗಾಗಿ, ಅವರಿಗೆ ಅವಕಾಶ ಕೊಡುತ್ತೇನೆ. ರವಿಯವರೇ, ತಾವು ದಯವಿಟ್ಟು ಸುಮ್ಮನಿರಿ. ಭಾರತಿ ಶೆಟ್ಟಿಯವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಒಂದು ಗಂಟೆಯ ಕಾಲ ಮಾತನಾಡಲಿ ಎಂದು ಪ್ರತಿಪಕ್ಷದ ನಾಯಕರು ನನ್ನ ಪರವಾಗಿ ಹೇಳಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ತಾವು ಮೊದಲೆ ನಮಗೆ ತರಬೇತಿಯನ್ನು ಕೊಟ್ಟಿದ್ದೀರಿ. ಈಗ ಶ್ರೀಕಂಠೇಗೌಡರವರು ಸದನದಿಂದ ಹೊರಗೆ ಹೋಗಿದ್ದಾರೆ. ನಾನು ಅವರನ್ನು ಏನಿದು training ಎಂದು ಕೇಳಿದೆ. ಅದಕ್ಕೆ ಅವರು that is theory. ಇದು practical ಎಂದು ಹೇಳಿದ್ದಾರೆ. ಅಲ್ಲಿ theory ಹೇಳಿಕೊಟ್ಟಿದ್ದೇವೆ. ಇಲ್ಲಿ practical ಎಂದು ಹೇಳಿದರು. ನಾನು provoke ಮಾಡುವಂತಹ ವಿಷಯಕ್ಕೆ ಹೋಗುವುದಿಲ್ಲ. ಏಕೆಂದರೆ, ಪ್ರತಿಪಕ್ಷದ ನಾಯಕರು ರಾಷ್ಟ್ರಧ್ವಜದ ಬಗ್ಗೆ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ರಾಷ್ಟ್ರಧ್ವಜದ ಬಗ್ಗೆ, ಅದರ ಮಹತ್ವದ ಬಗ್ಗೆ, ಅದು ಹೇಗೆ ಇರಬೇಕು ಎನ್ನುವುದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ನನಗೆ ಬಹಳ ಸಂತೋಷವಾಗಿದೆ. ಇದು ನಮಗೆಲ್ಲರಿಗೂ ಗೊತ್ತಿದೆ. ಆದರೆ, ಇದರ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ಗೊತ್ತಿಲ್ಲ. ಇವತ್ತಿಗೂ ಇದರ ಬಗ್ಗೆ ಶಾಲಾ ಮಕ್ಕಳಿಗೆ ಇನ್ನೂ ಸರಿಯಾಗಿ ಗೊತ್ತಿಲ್ಲ. ರಾಷ್ಟ್ರಧ್ವಜ ಅದಕ್ಕೆ salute ಮಾಡಬೇಕು ಎಂಬುದನ್ನು ಬಿಟ್ಟರೆ, ಅದರ ಮಹತ್ವದ ಬಗ್ಗೆ, ಆ ಚಕ್ರದಲ್ಲಿರುವಂತಹ ಒಂದೊಂದು ಗೆರೆಗೆ ಎಷ್ಟು ಮಹತ್ವ ಇದೆ ಎಂಬುದು ಗೊತ್ತಿಲ್ಲ. ನಾನು ತಮ್ಮ ಮುಖಾಂತರ ಸರ್ಕಾರದ ಗಮನ

ಸೆಳೆಯುವುದೇನೆಂದರೆ, ಮುಂದಿನ ದಿವಸಗಳಲ್ಲಿ ಮಕ್ಕಳಿಗೆ ರಾಷ್ಟ್ರ ಮೊದಲು ಎನ್ನುವಂತಹ ಕಲ್ಪನೆ ಇಡೀ ನಮ್ಮ ದೇಶದ ಜನರಿಗೆ ಬರಬೇಕು. ಅದರಲ್ಲೂ ನಮ್ಮ ರಾಜ್ಯದ ಮಕ್ಕಳಿಗೆ ಬರಬೇಕು ಎನ್ನುವಂತಹ ವಿನಂತಿಯನ್ನು ಮಾಡುತ್ತೇನೆ. ರಾಷ್ಟ್ರಧ್ವಜ Section 144 ಅಲ್ಲ, Section 144 ಅನ್ನು ಮೀರಿ ಈ ದೇಶದ ಧ್ವಜವನ್ನು ಹಾರಿಸಿ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆಂದು ಅವರು ಹೇಳಿದ್ದಾರೆ. ನಾವೆಲ್ಲರೂ ಈ ಕಲ್ಪನೆಯಲ್ಲಿದ್ದೇವೆ. ನನಗೆ ಎಷ್ಟು ಸರಿ ಅಥವಾ ಎಷ್ಟು ತಪ್ಪು ಎಂದು ಗೊತ್ತಿಲ್ಲ. ಮಾನ್ಯ ಸದಸ್ಯರಾದ ಡಾ॥ತೇಜಸ್ವಿನಿಗೌಡರವರು ಹೇಳಿದಂತೆ, ನಾನು ಒಬ್ಬ ವಿದ್ಯಾರ್ಥಿಯಾಗಿ ಪ್ರತಿ ಹಂತದಲ್ಲಿಯೂ ಕಲಿಯುವಂತಹದ್ದು ಇರುತ್ತದೆ. ನನಗೆ ಗೊತ್ತಿರುವಂತ, ನನಗೆ ಕೊಟ್ಟ ಶಿಕ್ಷಣ, ನಾನು ಕಲಿಯುವಾಗ ರಾಷ್ಟ್ರಧ್ವಜವನ್ನು ಯಾವತ್ತೂ ಸಹ ದುರುಪಯೋಗ ಮಾಡಿಕೊಳ್ಳಬಾರದು ಮತ್ತು ಯಾವುದೇ ಹೋರಾಟಕ್ಕೂ ಸಹ ರಾಷ್ಟ್ರಧ್ವಜವನ್ನು ಬಳಸಬಾರದು ಎಂದು ಹೇಳಿದ್ದಾರೆ. ನಾನು provoke ಮಾಡುತ್ತಿಲ್ಲ. ನಿನ್ನೆ ದಿವಸ ರಾಷ್ಟ್ರಧ್ವಜವನ್ನು ಎತ್ತಿದ್ದಾರೆ. ನನಗೆ ಇದು ಸರಿಯೇ ಅಥವಾ ತಪ್ಪೇ ಎಂದು ಗೊತ್ತಿಲ್ಲ. ನಾನು ಅವರು ಮಾಡಿದ್ದು ತಪ್ಪು, ಅವರು ಹಾಗೆ ಮಾಡಿದರು, ಅವರು ಹೀಗೆ ಮಾಡಿದರೆಂದು ಟೀಕೆ ಮಾಡುತ್ತಿಲ್ಲ. ಆ ರೀತಿ ರಾಷ್ಟ್ರಧ್ವಜವನ್ನು ಒಂದು ಹೋರಾಟಕ್ಕೆ ಬಳಸಬಹುದೇ ಎಂದು ನನಗೆ ಈ ವೇದಿಕೆಯಲ್ಲಿ ಗೊತ್ತಾಗಬೇಕು.

ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಮುಖವಾದ ವಿಷಯವೇನೆಂದರೆ, ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರ ಹೇಳಿಕೆಯ ಬಗ್ಗೆ ಇವತ್ತು ಚರ್ಚೆ ನಡೆಯುತ್ತಿದೆ. ನಾನು ಅವರ ಹೇಳಿಕೆಯನ್ನು ಓದಿದ್ದೇನೆ. ನಾನು ಅವರು ಮಾತನಾಡಿದ್ದನ್ನು ಟಿ.ವಿ.ಯಲ್ಲಿ ಕೇಳಿದ್ದೇನೆ. ನನಗೆ ಅವರು ಮಾತನಾಡಿರುವುದರಲ್ಲಿ ಏನೂ ತಪ್ಪು ಅನಿಸಲಿಲ್ಲ. ಆದರೆ, ನನಗೆ ಸ್ವಲ್ಪ ಗೊಂದಲ ಇತ್ತು. ನನ್ನ concentration ಆಗ ಇದ್ದಿದ್ದು, ನಮ್ಮ ಹೆಣ್ಣು ಮಕ್ಕಳು ಶಾಲೆಗೆ ಹೋಗಬೇಕು ಎನ್ನುವುದು ಇತ್ತು. ಏಕೆಂದರೆ, ಇಡೀ ಸಮಾಜದಲ್ಲಿ ಹಿಜಾಬ್‌ನ ಗಲಾಟೆ ನಡೆಯುತ್ತಿದೆ. ಅದನ್ನು ಬಗೆಹರಿಸಿ ಮಕ್ಕಳು ಶಾಲೆಗೆ ಹೋದರೆ ಸಾಕು, ಅಯ್ಯೋ ಈ ಸಮಸ್ಯೆಯನ್ನು ಬಿಟ್ಟು ಇದನ್ನು ಹಿಡಿದುಕೊಳ್ಳುತ್ತಾರೆಯೇ ಎನ್ನುವ ಹೆದರಿಕೆಯಲ್ಲಿ ಏಕಾದರೂ ಮಾನ್ಯ ಸಚಿವರು ಈ ರೀತಿ ಹೇಳುವುದಕ್ಕೆ ಹೋದರು ಎನ್ನುವಂತಹ ಕಲ್ಪನೆ ಬಂತು. ನಾನು ಅದನ್ನು ತಪ್ಪು ಎಂದು ಎಣಿಸುವುದಿಲ್ಲ. ಏಕೆಂದರೆ, ನಾನು

ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರನ್ನು ಕಳೆದ 37 ವರ್ಷಗಳಿಂದ ನೋಡಿದ್ದೇನೆ. ನಾನು ಅವರ ಕೈ ಕೆಳಗೆ ಕೆಲಸ ಮಾಡಿದ್ದೇನೆ. ಗುರುಗಳ ಸ್ಥಾನದಲ್ಲಿದ್ದು ಮಾನ್ಯ ಬಿ.ಎಸ್.ಯಡಿಯೂರಪ್ಪ, ಮಾನ್ಯ ಕೆ.ಎಸ್.ಈಶ್ವರಪ್ಪನವರು ಮತ್ತು ಆ ಜಿಲ್ಲೆಯಲ್ಲಿ ಶ್ರೀ ಶಂಕರಮೂರ್ತಿಯವರು ನಮಗೆ ರಾಷ್ಟ್ರದ ಮತ್ತು ರಾಷ್ಟ್ರಧ್ವಜದ ಬಗ್ಗೆ ಕಲ್ಪನೆ ಕೊಟ್ಟಿದ್ದಾರೆ. ನನಗೆ ಇವತ್ತಿಗೂ ನೆನಪಿದೆ. ಅವರು ತಾಯಿಯ ಎದೆ ಹಾಲು ಕುಡಿದಿದ್ದರೆ, ಇದು ಭೂತದ ಬಾಯಿಯಲ್ಲಿ ಭಗವದ್ಗೀತೆ ಎಂದು ಹೇಳಬೇಡಿ ಸ್ವಾಮಿ. ನಮಗೆ ಆ ಸಮಯದಲ್ಲಿ ಧ್ವಜವನ್ನು ಹಾರಿಸುವುದಕ್ಕೆ ಎಷ್ಟು ಕಷ್ಟಪಟ್ಟಿದ್ದೇವೆಂದು ಗೊತ್ತು. ಯಾರಾದರೂ ತಾಯಿಯ ಎದೆಹಾಲು ಕುಡಿದವರು ಇದ್ದರೆ, ಕಾಶ್ಮೀರಕ್ಕೆ ಬಂದು ಧ್ವಜವನ್ನು ಹಾರಿಸಬೇಕೆಂದು ಹೇಳಿದಾಗ ನಮ್ಮ ಶಿವಮೊಗ್ಗ ಜಿಲ್ಲೆಯಿಂದ ನಮ್ಮನ್ನು ಒಗ್ಗೂಡಿಸಿ ಕರೆದುಕೊಂಡು ಹೋಗಿದ್ದರು. ನಮಗೆ ಜಮ್ಮುವಿನಿಂದ ಮುಂದಕ್ಕೆ ಹೋಗುವುದಕ್ಕೆ ಬಿಟ್ಟಿಲ್ಲ. ಡಾ॥ ಮುರಳಿ ಮನೋಹರ್ ಜೋಷಿರವರ ನೇತೃತ್ವದಲ್ಲಿ ರಾಷ್ಟ್ರಧ್ವಜವನ್ನು ಭಯೋತ್ಪಾದಕರ ಗುಂಡಿಗೆ ಎದೆಯನ್ನು ಕೊಟ್ಟು ರಾಷ್ಟ್ರಧ್ವಜವನ್ನು ಹಾರಿಸಿದ್ದಂತಹ ಸಂಘಟನೆ ಇದೆ. ಅದಕ್ಕೆ ಒತ್ತು ಕೊಟ್ಟಾಗ ಮಾನ್ಯ ಕೆ.ಎಸ್.ಈಶ್ವರಪ್ಪನವರು ಹೋದರು. ಇದು ಒಂದು. ಎರಡನೆಯದು ಅವರು ರಾಜ್ಯಾಧ್ಯಕ್ಷರಾಗಿದ್ದರು. 1992 ನೇ ಸಾಲಿನಲ್ಲಿ ಹುಬ್ಬಳಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ಹೇಳಿದರು. ಆ ಸಂದರ್ಭದಲ್ಲಿ ನನಗೆ ಏಳೂವರೆ ವರ್ಷದ ಮಗಳು ಇದ್ದಳು. ನಾವು ಸಾಗರ ತಾಲ್ಲೂಕಿನಿಂದ ಐದು ಜನ ಹೆಣ್ಣು ಮಕ್ಕಳು ಹೋಗಿದ್ದೆವು. ರಾಜ್ಯಾಧ್ಯಕ್ಷರಾಗಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಮತ್ತು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹೆಣ್ಣು ಮಕ್ಕಳು ಧ್ವಜಹಾರಿಸಬೇಕೆಂದು ಪ್ರೇರಣೆ ಕೊಟ್ಟರು. ನಾವು ಅಲ್ಲಿಗೆ ಮೂರು ದಿವಸಗಳ ಮುಂಚೆ ಹೋಗಿದ್ದೆವು. ನಾವು ಅಲ್ಲಿಗೆ ಹೇಗೆ ಹೋಗಿದ್ದೇವೆಂದು ನಮಗೆ ಗೊತ್ತು. ನಮಗೆ ಅಲ್ಲಿ 5 ಮನೆಗಳನ್ನು ಮಾಡಿದ್ದರು. ಏಕೆಂದರೆ, ಆಗ ಸರ್ಕಾರ ನಮ್ಮನ್ನು arrest ಮಾಡಿ ಧ್ವಜ ಹಾರಿಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿತ್ತು. ಆಗ ನಮ್ಮನ್ನು ಕರೆದುಕೊಂಡು ಒಂದೊಂದು ಭಾಗದಲ್ಲಿ ಇಟ್ಟಿದ್ದರು.

ಮಾನ್ಯ ಸಭಾಪತಿಯವರೇ, ನಾನು “ಜಲಿಯನ್‌ವಾಲಾಬಾಗ್ ಹತ್ಯಾಕಾಂಡ”ದ ಬಗ್ಗೆ ಪಾಠದಲ್ಲಿ ಓದಿದ್ದೇನೆ. ನಾನು ಅದನ್ನು ಓದಿ ತಿಳಿದುಕೊಂಡವಳು. ಆದರೆ, ಆ ಸಂದರ್ಭದಲ್ಲಿ ಸ್ವತಃ ಅನುಭವಿಸಿದ್ದೇನೆ.. Tear gas ಬಿಡುವುದು, ಗುಂಡು ಹಾರಿಸುವುದನ್ನು ನನ್ನ ಕಣ್ಣು ಮುಂದೆ

ನೋಡಿದ್ದೇನೆ. ಆಗ ಶ್ರೀಮತಿ ಪ್ರಮೀಳಾ ನೇಸರ್ಗಿರವರು ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷರಾಗಿದ್ದರು. ನಾನು ಧ್ವಜವನ್ನು ಹಾರಿಸಲಿಕ್ಕೆ ಹೋದವಳು. ನನ್ನನ್ನು ಎಳೆದುಕೊಂಡು ಕಾರಿನಲ್ಲಿ ಹಾಕಿಕೊಂಡು ಹೋದರು.  ನಾವು ಎಲ್ಲಿದ್ದೇವೆಂದು ಗೊತ್ತಿರಲಿಲ್ಲ. ನಮಗೆ ಬಟ್ಟೆಗಳು ಇರಲಿಲ್ಲ. ನಮ್ಮ ಬ್ಯಾಗ್‌ಗಳು ಇರಲಿಲ್ಲ. ನಮ್ಮನ್ನು ಎಲ್ಲೋ ಒಂದು ಕಡೆ ಛತ್ರದಲ್ಲಿ ಹಾಕಿದ್ದರು. ನಮಗೆ ಅಲ್ಲಿ ಬೇರೆ ಯಾರು ಇದ್ದರೆಂದು ಗೊತ್ತಿರಲಿಲ್ಲ.  ನಮ್ಮ ಮನೆಯಲ್ಲಿ ನನ್ನ ಮಗಳು, ಗಂಡ ಅಳುತ್ತಿದ್ದರು. ನಮಗೆ ಯಾರು ಎಲ್ಲಿದ್ದರು ಎಂದು ಗೊತ್ತಿರಲಿಲ್ಲ. ಇದು ಸ್ವತಂತ್ರ ಭಾರತದ ಸಮಯದಲ್ಲಿ ನಡೆದಿದ್ದು. ಅಂತಹ ಸಮಯದಲ್ಲಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಎದೆಯೊಡ್ಡಿ ರಾಷ್ಟ್ರಧ್ವಜವನ್ನು ಹಾರಿಸಿ ಎಂದು ಹೇಳಿದವರು. ಅವರು ಇಂತಹ ರಾಷ್ಟ್ರದ್ರೋಹದ ಕೆಲಸವನ್ನು ಮಾಡುತ್ತಾರೆಯೇ?

(ಮುಂದು)

**(68) 17-02-2022 (4.30) ಎಂ.ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಈಗ ತಾವು ಒಂದು ಒಳ್ಳೆಯ ಸ್ಥಾನದಲ್ಲಿ ಕುಳಿತಿದ್ದೀರಿ. ಈಗಾಗಲೇ ಸಮಾಜದಲ್ಲಿ ಬೆಂಕಿ ಹಚ್ಚಿದೆ. ಆ ಬೆಂಕಿಯನ್ನು ಆರಿಸಬೇಕು. ಅದಕ್ಕೆ ಇಲ್ಲಿ ಒಳ್ಳೆಯ ಕೆಲಸ ಆಗಬೇಕು ಮತ್ತು ಇಲ್ಲಿ ಒಳ್ಳೆಯ ವಿಷಯಗಳು ಚರ್ಚೆಯಾಗಬೇಕು. ಅವರಿಗೆ ತಪ್ಪುಗ್ರಹಿಕೆಯಾದರೆ, ಅವರನ್ನು ಒಳಗೆ ಕರೆದುಕೊಂಡು ಹೋಗಿ ಈ ರೀತಿ ಎಂದು ಹೇಳಲಿ. ಅವರು ಖಂಡಿತವಾಗಿ ಅದನ್ನು ಬಗೆಹರಿಸುತ್ತಾರೆಂದು ನಮ್ಮ ಪ್ರತಿಪಕ್ಷದ ನಾಯಕರಲ್ಲಿ ಮತ್ತು ನಮ್ಮ ಪಕ್ಷದ ನಾಯಕರಲ್ಲಿ ವಿಶ್ವಾಸವಿದೆ. ಆದುದರಿಂದ ಅವರುಗಳು ಇದಕ್ಕೆ ಒಂದು ಇತಿಶ್ರೀ ಹಾಡಲಿ. ನಾವು ಅಭಿನಂದನ ಭಾಷಣ ಮಾಡಬೇಕೆಂದು ಎರಡು ದಿನಗಳಿಂದ ಕಾಯುತ್ತಿದ್ದೇವೆ. ಈಗ ಪ್ರಶ್ನೋತ್ತರದ ವೇಳೆಯಲ್ಲಿ ತಾವು ಕೂಗುವುದು ನಮಗೆ ಕೇಳುವುದಿಲ್ಲ. ಅವರು ನಮಗೆ ಟೀಕೆ ಮಾಡುವುದು ಮತ್ತೆ ನಾವು ಎದ್ದು ಅವರಿಗೆ ಟೀಕೆ ಮಾಡುವುದು ಮತ್ತು ಬೈಯುವುದು, ಇದೇ ರೀತಿಯಾದರೆ ಹೇಗೆ? ಇಡೀ ಜನರು ನಮ್ಮನ್ನು ನೋಡಿಕೊಂಡು ನಗುತ್ತಿದ್ದಾರೆ. ತಾವು ಇದಕ್ಕೆ ಒಂದು ಇತಿಶ್ರೀ ಹಾಕಿ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ರಾಜೀನಾಮೆಯನ್ನು ಕೊಟ್ಟುಬಿಟ್ಟರೆ ಎಲ್ಲಾ ಕೆಲಸ ಮುಗಿಯುತ್ತದೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಾಗ ಯಾರಾದರೂ ತೊಂದರೆ ಕೊಟ್ಟಿದ್ದಾರೆಯೇ?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಅಧಿವೇಶನ ಪ್ರಾರಂಭವಾದಾಗ, ವಿರೋಧಪಕ್ಷದ ನಾಯಕರು ಮತ್ತು ನಮ್ಮ ಪಕ್ಷದ ವಿರೋಧ ಪಕ್ಷದ ಸದಸ್ಯರು ಕೂಡ, ಒಂದು ಗಂಭೀರವಾದಂತಹ ವಿಚಾರ ರಾಷ್ಟ್ರಧ್ವಜದ ಬಗ್ಗೆ ಒಬ್ಬ ಸಚಿವರು ಅವಹೇಳನಕಾರಿಯಾಗಿ ಅಗೌರವ ಸೂಚಿಸಿ ಮತ್ತು ರಾಷ್ಟ್ರಧ್ವಜದ ಸ್ಥಾನಪಲ್ಲಟದ ಬಗ್ಗೆ ಮಾತನಾಡಿದ್ದಾರೆಂದು ಹೇಳಿ, ಒಂದು ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹತ್ತು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ, ಎರಡು ತಾಸುಗಳಾದರೂ ಸಹ ಕೆಲವು ಸದಸ್ಯರು ಮಾನ್ಯ ವಿರೋಧ ಪಕ್ಷದ ನಾಯಕರು ಹತ್ತು ನಿಮಿಷ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ ಮತ್ತು ಅವಕಾಶ ಮಾಡಿ ಕೊಡಲಿಲ್ಲ. ಅದನ್ನು ನಾನು ಕೂಡ ಗಮನಿಸಿದ್ದೇನೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರು ಮಾತನಾಡುವುದಕ್ಕೆ ಅವಕಾಶ ನೀಡಿದ್ದೀರಿ. ಆದರೆ, ಅವರು ಮಾತನಾಡುವುದಕ್ಕೆ ಆಗಲಿಲ್ಲ. ಮತ್ತೆ ಕಾನೂನು ಸಚಿವರು ಕೂಡ ಅದರ ಬಗ್ಗೆ ಉತ್ತರವನ್ನು ನೀಡಿದರು. ಪೀಠಕ್ಕೆ ಇರುವಂತಹ ಅಧಿಕಾರ ಮತ್ತು ಕೆಲವು ನಿಯಮಗಳನ್ನು ತಿಳಿಸಿ, ತಾವು ಅದನ್ನು ತಿರಸ್ಕಾರ ಮಾಡಿದ್ದೀರಿ. ತದನಂತರ ಒಬ್ಬ ಸಚಿವರೇ ಈ ರೀತಿ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದಂತಹ ಸಂದರ್ಭದಲ್ಲಿ ಅದರ ಬಗ್ಗೆ ಸರ್ಕಾರ ಸರಿಯಾದ ಒಂದು ತೀರ್ಮಾನವನ್ನು ಮಾಡಲಿಲ್ಲ ಮತ್ತು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಡಲಿಲ್ಲವೆಂದು, ಅದನ್ನು ಪ್ರತಿಭಟಿಸಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಇಳಿದಿದ್ದಾರೆ. ಕಳೆದ ಎರಡು ದಿನಗಳಿಂದ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಹ ಇಂತಹ ಒಂದು ಪ್ರತಿಭಟನೆಯನ್ನು ಮಾಡುತ್ತಿರುವಾಗ, ಆಡಳಿತ ಪಕ್ಷದ ಜವಾಬ್ದಾರಿ ಏನು ಎನ್ನುವಂಥದ್ದನ್ನು ನಾನು ಕೇಳುತ್ತಿದ್ದೇನೆ. ಇಲ್ಲಿ ಬಂದಿರುವಂತಹ ಶಾಸಕರೆಲ್ಲರೂ

ಕೂಡ ಈ ನಾಡಿನ ಜನರ ಹಿತವನ್ನು ಕಾಯಬೇಕು ಮತ್ತು ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ವಿಧಾನ ಮಂಡಲದಲ್ಲಿ ಚರ್ಚೆಯಾಗಬೇಕೆಂದು ನಾವೆಲ್ಲರೂ ಬಂದಿದ್ದೇವೆ. ಆದರೆ, ಇಂತಹ ಒಂದು ದೊಡ್ಡ ಸಮಸ್ಯೆ ಬಂದಾಗ, ಒಬ್ಬ ಸಚಿವರ ಮೇಲೆಯೇ ವಿರೋಧ ಪಕ್ಷಗಳು ದೊಡ್ಡ ಆರೋಪವನ್ನು ಮಾಡಿದಂತಹ ಸಂದರ್ಭದಲ್ಲಿ, ಸರ್ಕಾರ ಈ ಹಿಂದೆಯೂ ಕೂಡ ಇಂತಹ ಘಟನೆಗಳು ನಡೆದಿವೆ. ನಾನೇ ನನ್ನ 22 ವರ್ಷಗಳ ಸದಸ್ಯತ್ವದ ಅವಧಿಯಲ್ಲಿ, ಈ ಸದನದಲ್ಲಿ ಒಂದೊಂದು ವಾರಗಳ ಕಾಲ ಹಗಲು-ರಾತ್ರಿ ಧರಣಿ ಮಾಡಿ, ಇಲ್ಲಿಯೇ ಮಲಗಿಕೊಂಡಿರುವಂತಹ ಮೂರು ನಿದರ್ಶನಗಳು ಇವೆ. ತಾವು ಸಹ ಈ ಸದನಕ್ಕೆ ಬಂದು ಈಗ 42 ವರ್ಷ ಪೂರೈಸುತ್ತಿದ್ದೀರಿ. ಈ ಭಾರತ ದೇಶದಲ್ಲೇ ವಿಧಾನ ಪರಿಷತ್ತಿನಲ್ಲಿ ಅತ್ಯಂತ ಹಿರಿಯ ಸದಸ್ಯರಾಗಿ ಇವತ್ತು ತಾವು ಆ ಪೀಠದಲ್ಲಿ ಕುಳಿತ್ತಿದ್ದೀರಿ. ಇದು ನಮಗೆ ಹೆಮ್ಮೆ ಮತ್ತು ಬಹಳ ಸಂತೋಷ. ಭಾರತ ದೇಶದಲ್ಲೇ ವಿಧಾನ ಪರಿಷತ್ತು ತನ್ನದೇ ಆದಂತಹ ಇತಿಹಾಸದ ಮೈಲಿಗಲ್ಲನ್ನು ಹೊಂದಿದೆ. ಇದರ ಘನತೆಯನ್ನು ಇನ್ನು ಉನ್ನತ ಮಟ್ಟಕ್ಕೆ ಹೆಚ್ಚಿಸುವಂತಹ ಕಾರ್ಯ ನಮ್ಮೆಲ್ಲರ ಕರ್ತವ್ಯವಾಗಿದೆ. ಅದರ ಬಗ್ಗೆ ನಮಗೆ ಬಹಳ ಕಳಕಳಿ ಇದೆ. ಆದರೆ, ಇಂತಹ ಒಂದು ಘಟನೆಗಳು ಸಂಭವಿಸಿದಾಗ, ನಿನ್ನೆಯಿಂದ ಮಾನ್ಯ ಮುಖ್ಯಮಂತ್ರಿಗಳು ಎರಡೂ ಸದನಗಳಲ್ಲಿ ಇದ್ದಾರೆ. ಈಗ ಆಳುವ ಪಕ್ಷಕ್ಕೆ ಮಾತೃ ಹೃದಯ ಇಲ್ಲದಿದ್ದರೆ, ಈ ಸದನವನ್ನು ನಡೆಸುವುದಕ್ಕೆ ಈ ಸದನದ ಮೂಲಕ ನಾಡಿನ ಜನತೆಯ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆಡಳಿತ ಪಕ್ಷಕ್ಕೆ ತಾಯಿ ಹೃದಯ ಇರಬೇಕು. ಈಗ ವಿರೋಧ ಪಕ್ಷಗಳು ಇಲ್ಲಿಗೆ ಬಂದು ಸುಮ್ಮನೆ ಮೂಗು ಮುಚ್ಚಿಕೊಂಡು ಕುಳಿತುಕೊಂಡು ಹೋಗುವುದಕ್ಕೆ ಅಲ್ಲ. ನಿಯಮಗಳಲ್ಲಿ ವಿರೋಧ ಪಕ್ಷಗಳ ಜವಾಬ್ದಾರಿ ಮತ್ತು ಕರ್ತವ್ಯಗಳಿವೆ. ಹಾಗೆಯೇ ಆಡಳಿತ ಪಕ್ಷಗಳ ಕರ್ತವ್ಯಗಳು ಸಹ ಇವೆ. ವಿರೋಧ ಪಕ್ಷಗಳು ಇಂತಹ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ನೀಡಿದೆ. ಇಂತಹ ಗಂಭೀರವಾದಂತಹ ವಿಚಾರಗಳು ಬಂದಾಗ, ಮಾನ್ಯ ಮುಖ್ಯಮಂತ್ರಿಗಳು ನೇಮಕ ಮಾಡಿದಂತಹ ಒಬ್ಬ ಸಚಿವರು, ಇಂತಹ ಒಂದು ಹೇಳಿಕೆಯನ್ನು ಹೇಳಿದ್ದಾರೆ ಎಂದಾಗ, ನಾನು ಆ ಸಚಿವರ ಬಗ್ಗೆ ಮಾತನಾಡುವುದಿಲ್ಲ. ಅವರು ಹಿರಿಯರು ಇರಲಿ, ಕಿರಿಯರು ಇರಲಿ. ಈಗ ಕೋರ್ಟ್‌ನಲ್ಲಿ ಅವರು ಚಿಕ್ಕವರು ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಹಿರಿಯರಿದ್ದಾರೆ. ಅವರು ರಾಷ್ಟ್ರಧ್ವಜದ ಬಗ್ಗೆ ಇಷ್ಟೊಂದು ಅವಹೇಳನಕಾರಿಯಾದಂತಹ ಹೇಳಿಕೆ ಕೊಟ್ಟಂತಹ ವಿಚಾರದ

ಬಗ್ಗೆ ನಿನ್ನೆಯ ದಿವಸದಿಂದ ಕರ್ನಾಟಕ ರಾಜ್ಯ ಮಾತ್ರವಲ್ಲ, ಇಡೀ ದೇಶದಲ್ಲೇ ಇದರ ಬಗ್ಗೆ ದೊಡ್ಡ ಚರ್ಚೆಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ನಡೆಸುವಂತಹ ಮಾನ್ಯ ಮುಖ್ಯಮಂತ್ರಿಗಳಾದವರು ತಮ್ಮ ಅಧ್ಯಕ್ಷತೆಯಲ್ಲಿ ಅಥವಾ ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆ ಒಂದು ಸಭೆ ಕರೆದು, ಇದನ್ನು ಸೌಹಾರ್ದಯುತವಾಗಿ ಬಗೆಹರಿಸುವಂತಹ ಒಂದು ಪ್ರಯತ್ನವನ್ನು ಕಳೆದು ಎರಡೂ ದಿನಗಳಿಂದ ಮಾಡಲಿಲ್ಲ. ನಾವು ವಿರೋಧ ಪಕ್ಷದವರು ಗಲಾಟೆ ಮಾಡಿ, ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆಯದಂತೆ ಹಾಗೆಯೇ ಯಾವೂದೂ ಸಹ ಆಗದ ರೀತಿ ನಾವು ಇಲ್ಲಿಗೆ ಬಂದು ಸುಮ್ಮನೆ ಕುಳಿತು ಹೋಗುವುದಕ್ಕೆ ಬಂದಿದ್ದೇವೆಯೇ? ನಮಗ್ಯಾರಿಗೂ ಜವಾಬ್ದಾರಿ ಇಲ್ಲವೇ? ಹೇಳಿಕೆ ಕೊಡುವುದು ಮತ್ತು ಮಾತನಾಡುವುದು. ಇಲ್ಲಿರುವಂತಹ ಎಲ್ಲಾ ಸದಸ್ಯರಿಗೂ ಕೂಡ ಈ ಸದನ ನಡೆಯಬೇಕು, ವಿಷಯಗಳ ಬಗ್ಗೆ ಚರ್ಚೆಯಾಗಬೇಕು ಮತ್ತು ಈ ನಾಡಿನ ಜನರ ಆಶೋತ್ತರಗಳನ್ನು ಈಡೇರಿಸಬೇಕು ಎನ್ನುವುದು ಎಲ್ಲರ ಆಶಯ. ಆದರೆ, ಈ ಸದನ ನಡೆಯಬೇಕು ಎನ್ನುವುದಾದರೆ, ಆಡಳಿತ ಪಕ್ಷದವರಿಗೆ ತಾಯಿ ಹೃದಯ ಇರಬೇಕು. ಇಂತಹ ಕಠಿಣ ಸಮಸ್ಯೆಗಳು ಬಂದಾಗ, ಆ ಸಮಸ್ಯೆಗಳನ್ನು ಹೇಗೆ ಸಮರ್ಥವಾಗಿ ನಿಭಾಯಿಸಿ, ನಾವು ಈ ನಾಡಿನ ಜನರಿಗೆ ಉತ್ತರವನ್ನು ಕೊಡಬೇಕು ಎಂದು ಆಳುವ ಪಕ್ಷದ ನಾಯಕರಿಗೆ ಇರಬೇಕು. ಇವತ್ತು ಮಾನ್ಯ ಸಚಿವರನ್ನು ಸಮರ್ಥನೆ ಮಾಡಿಕೊಂಡು ಮಾನ್ಯ ಗೃಹಸಚಿವರು ಹಾಗೂ ನಿನ್ನೆಯ ದಿವಸ ಮಾನ್ಯ ಕಾನೂನು ಸಚಿವರು ಹೇಳಿಕೆ ನೀಡಿದರು. ಈಗ ಸಚಿವರಾಗಿ ಇರುವಂತಹವರು ಅವರೇ ನೇಮಕ ಮಾಡಿದಂತಹವರು. ಅವರನ್ನು ಕರೆದು ತಮ್ಮಗಳ ಅಧ್ಯಕ್ಷತೆಯಲ್ಲೇ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆದು ಒಂದು ಸಮಾಲೋಚನೆ ಮಾಡಿ. ಈ ರೀತಿ ಬೇಡ. ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ. ಅವರು ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ಅದರೆ, ಪರಿಸ್ಥಿತಿ ಈ ರೀತಿ ಇದೆ. ಇದು ಯಾವ ಪಕ್ಷಕ್ಕೂ ಗೌರವ ತರುವಂತಹ ವಿಚಾರವಲ್ಲ. ಈಗ ಯಾರೇ ತಪ್ಪು ಮಾಡಿದರೂ ಸಹ ಅದು ತಪ್ಪು. ಈ ಸದನದಲ್ಲಿ 42 ವರ್ಷದಲ್ಲಿ ಎಂತೆಂತಹ ಅತಿರಥ-ಮಹಾರಥರು ಮತ್ತು ಪಂಡಿತರಿದ್ದರು. ಈ ಸದನದಲ್ಲಿ ಏನೋ ಬಾಯಿ ತಪ್ಪಿನಿಂದ ಹತ್ತತ್ತು ಬಾರಿ ತಪ್ಪಾದಾಗ, ಕ್ಷಮೆ ಕೇಳಿರುವಂತಹ ಸಾವಿರಾರು ಉದಾಹರಣೆಗಳು ಇತಿಹಾಸದಲ್ಲಿ ಇದೆ. ಐದು ಬಾರಿ, ಆರು ಬಾರಿ ಈ ಸದನದ ಸದಸ್ಯರಾಗಿ ಬಂದಂತಹವರು, ಚರ್ಚೆಯ ಸಂದರ್ಭದಲ್ಲಿ ಏನೋ ಒಂದು ಉದ್ವೇಗದಲ್ಲಿ

ಮಾತನಾಡಿದಂತಹ ವಿಚಾರಕ್ಕೆ ಹತ್ತಾರು ಬಾರಿ ಕ್ಷಮೆ ಕೇಳಿರುವುದು ಇದೆ. ಈ ಸದನ ಮತ್ತು ನಾಡಿನ ಜನರಿಗಿಂತ ಯಾರೂ ದೊಡ್ಡವರಲ್ಲ.

**(ಮುಂದು)**

(069) 17.02.2022 04.40 LL-KS **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಸಂವಿಧಾನದ ಆಶಯಗಳನ್ನು ಗೌರವಿಸುವಂತಹ ನಾವು ಹಾಗೂ ಸಂವಿಧಾನದ ಆಶಯದ ಮೇಲೆ ಪ್ರಮಾಣ ವಚನ ತೆಗೆದುಕೊಂಡಂತಹ ನಾವು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮತ್ತು ಶಾಸನಸಭೆಗಳಲ್ಲಿ ಹೇಗೆ ವರ್ತನೆ ಮಾಡಬೇಕೆನ್ನುವುದನ್ನು ನಾವು ಕಲಿತುಕೊಳ್ಳಬೇಕು ಹಾಗೂ ರೂಢಿಸಿಕೊಳ್ಳಬೇಕು. ಇವೊತ್ತಿನ ದಿವಸ ಆಡಳಿತ ಪಕ್ಷವೂ ಸಹ ಇಂತಹ ಸಮಸ್ಯೆಗಳು ಬಂದಾಗ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರೆಲ್ಲರೂ ಈ ಸಮಸ್ಯೆಯನ್ನು ಬಗೆಹರಿಸಿಕೊಂಡು ಸದನ ನಡೆಸಿಕೊಂಡು ಬಂದಿರುವುದರಿಂದಲೇ, ಈ ಸದನ ಬಹಳ ಗಟ್ಟಿಯಾಗಿ ನಿಂತಿದೆ ಮತ್ತು ಅದಕ್ಕೆ ಇಷ್ಟೊಂದು ಹೆಸರು ಬಂದಿರುತ್ತದೆ.

ಎಂತಹ ಸಮಸ್ಯೆಗಳು ಬಂದಿದ್ದರೂ ಸಹ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಕೂಡಿ ಆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದೇ ಇದುವರೆವಿಗೂ ನಡೆದುಕೊಂಡು ಬಂದಿರುವಂಥದ್ದು. ಆದರೆ, ಈ ವಿಚಾರದಲ್ಲಿ ಏತಕ್ಕಾಗಿ ಇಷ್ಟೊಂದು ಕಟಿಬದ್ಧವಾದ ಧೋರಣೆ? "ನಮ್ಮ ಸಚಿವರು ಯಾವುದೇ ತಪ್ಪು ಮಾಡಿರುವುದಿಲ್ಲ, ಯಾವುದೇ ಹೇಳಿಕೆ ನೀಡಿರುವುದಿಲ್ಲ" ಎಂದು ಅವರ ಪಕ್ಷದವರು ಹೇಳುತ್ತಿರುವುದು ಈ ನಾಡಿನ ಜನತೆಗೆ ಮಾತ್ರವಲ್ಲದೇ, ಇಡೀ ದೇಶಕ್ಕೆ ದೊಡ್ಡ ಅಪಮಾನ ಮಾಡಿರುವಂಥದ್ದಾಗಿದೆ. ಅದರ ಬಗ್ಗೆ ದೊಡ್ಡ ಚಿಂತನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ. ಇಂತಹ ಒಂದು ಕಟಿಬದ್ಧವಾದ ಧೋರಣೆಯನ್ನು ಎಷ್ಟು ದಿನ ಮಾಡಬಹುದು? ಅದನ್ನು ವಿರೋಧ ಪಕ್ಷದ ನಾಯಕರುಗಳು ಮಾಡೋಣವೇ? ಹಾಗಾದರೆ, ಸದನವನ್ನು ಮುಂದೂಡುತ್ತೇವೆ ಹಾಗೂ ಇನ್ನಿತರ ಯಾವುದೋ ಯೋಚನೆಗಳು ಅವರ ತಲೆಯಲ್ಲಿ

ಇರಬಹುದು. ಸದನ ನಡೆಯದಿರುವ ಹಾಗೆ ವಿರೋಧ ಪಕ್ಷದವರು ಮಾಡಿಬಿಟ್ಟರು ಎಂದು ತಾವು ಹೇಳಬಹುದು. ಆದರೆ, ಈ ದೇಶದ ಹಾಗೂ ಈ ನಾಡಿನ ಜನತೆಗೆ ಒಂದು ವಿಚಾರ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದೇನೆಂದರೆ, ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸುವುದಾಗಿ ಪ್ರಮಾಣ ವಚನ ತೆಗೆದುಕೊಂಡಂತಹ ಒಬ್ಬ ಮಂತ್ರಿಯೇ ಸಂವಿಧಾನಕ್ಕೆ ದೊಡ್ಡ ಅಪಚಾರವಾಗುವಂತೆ ಗಂಭೀರವಾದ ವಿಚಾರದ ಬಗ್ಗೆ ನಡೆದುಕೊಂಡಿರುವಂತಹ ಇವೊತ್ತಿನ ದಿವಸ ಕರ್ನಾಟಕ ವಿಧಾನ ಪರಿಷತ್ತು ಮತ್ತು ವಿಧಾನಸಭೆಯಲ್ಲಿ ಇಷ್ಟೊಂದು ಚರ್ಚೆಯಾಗುತ್ತಿದೆ. ಇಷ್ಟೆಲ್ಲಾ ಆದರೂ ಸಹ ಆಳುವ ಪಕ್ಷ ಅದನ್ನು ಸಮರ್ಥನೆ ಮಾಡಿಕೊಂಡರೆ ಇದರಿಂದಾಗಿ ಯಾರಿಗೆ ಒಳತಾಗುತ್ತದೆ? ಇಂತಹ ಸಮರ್ಥನೆ ಮಾಡಿಕೊಳ್ಳುವಂತಹ ಸರ್ಕಾರ ಈ ನಾಡಿನ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತದೆಯೇ? ಆ ಸಚಿವರಿಂದ ರಾಜೀನಾಮೆ ಪಡೆದರೆ ಏನು ತಲೆ ಹೋಗುತ್ತದೆಯೇ? ಈ ಹಿಂದೆ ಎಷ್ಟು ಜನ ಮಂತ್ರಿಗಳು ಇಂತಹ ಆರೋಪದಲ್ಲಿ ಈ ಶಾಸನಸಭೆಯಲ್ಲಿ ರಾಜೀನಾಮೆ ಕೊಟ್ಟಿದ್ದಾರೆಂದು ತಾವು ಗಮನಿಸಬೇಕು. ತದನಂತರ, ಕೇವಲ ಒಂದು ತಿಂಗಳನಲ್ಲಿಯೇ ಪುನಃ ಅವರೇ ಮಂತ್ರಿಯಾಗಿ ಬಂದಿರುತ್ತಾರೆ. ಎಂತಹ ಅವಕಾಶಗಳನ್ನು ನಾವು ಈ ಸದನದಲ್ಲಿ ನೋಡಿದ್ದೇವೆ. ಆಗಲೇ ಮಾನ್ಯ ಸದಸ್ಯರಾದ ಶ್ರೀ ಆರ್.ಬಿ. ತಿಮ್ಮಾಪೂರರವರು ಮಾತನಾಡುತ್ತಾ, "ಎಂತೆಂತಹ ಘಟನೆಗಳು ಈ ಹಿಂದೆ ನಡೆದಿವೆ. ಅವರಿಗೆ ಸಂಬಂಧಪಡದೇ ಇರುವಂತಹ ಘಟನೆಗಳಲ್ಲಿಯೂ ಸಹ ಅನೇಕ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ" ಎಂದು ಹೇಳಿರುತ್ತಾರೆ. ಉದಾಹರಣೆಗೆ, ಎಲ್ಲಿಯೋ ಒಂದು ರೈಲು ಅಪಘಾತ ಆದರೆ, ರಾಜೀನಾಮೆ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ನಮ್ಮ ರಾಜಕಾರಣಿಗಳು ಹಾಗೂ ಹಿರಿಯರು ಅದೆಂತಹ ಇತಿಹಾಸವನ್ನು ಮೆರೆದಿದ್ದಾರೆ!

**ಸಭಾಪತಿಯವರು:-** ಅವರು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೌದು. ಅವರು ಎಂತಹ ಇತಿಹಾಸವನ್ನು ಮೆರೆದಿದ್ದಾರಲ್ಲವೇ? ಸಣ್ಣ-ಪುಟ್ಟ ವಿಚಾರಗಳಿಗೆ ಅಂದರೆ, ಎಲ್ಲಿಯೋ ರೈಲು ಅಪಘಾತವಾದರೆ, ಅವರು ತಮ್ಮ ಪದವಿಗೆ ರಾಜೀನಾಮೆ ಕೊಡುತ್ತಾರೆಂದರೆ, ಅದು ರಾಜಕಾರಣದಲ್ಲಿ ಎಂತಹ ಉನ್ನತ ಮೌಲ್ಯವಲ್ಲವೇ? ಅದನ್ನು ನಾವು ರೂಢಿಸಿಕೊಳ್ಳಬೇಕು. ಇದು ಸೋಲು-ಗೆಲುವಿನ

ಪ್ರಶ್ನೆ ಅಲ್ಲ ಅಥವಾ ಪ್ರತಿಷ್ಠೆಯ ವಿಷಯವಲ್ಲ. ಇದು ರಾಷ್ಟ್ರಧ್ವಜದ ಗೌರವದ ಸಂಬಂಧವಾಗಿರುವುದರಿಂದ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಮಾನ್ಯ ಮುಖ್ಯಮಂತ್ರಿಯವರು ನಿನ್ನೆಯಿಂದಲೂ ಸಹ ವಿರೋಧ ಪಕ್ಷಗಳನ್ನು ಕರೆದು ಒಂದು ಮಾತನ್ನು ಸಹ ಆಡದೇ ಇರುವುದನ್ನು ನಾನು ಖಂಡಿಸುತ್ತೇನೆ. ಆಡಳಿತ ಪಕ್ಷಕ್ಕೆ ಮಾನವೀಯತೆ ಇಲ್ಲ ಹಾಗೂ ತಾಯಿ ಹೃದಯ ಇಲ್ಲವೆಂದು ನಾನು ಹೇಳಲೇಬೇಕಾಗುತ್ತದೆ.

ತಮ್ಮಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಈ ಆಡಳಿತ ಪಕ್ಷದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಪ್ರಯತ್ನ ಮಾಡದೇ ಇದೇ ರೀತಿ ಈ ಸದನವನ್ನು ಇಡುವುದೇ ಆದರೆ, ತಾವು ಈ ರಾಷ್ಟ್ರದಲ್ಲಿಯೇ ಹಿರಿಯ ಸದಸ್ಯರಾಗಿದ್ದು, ಈ ಸದನದ ಹಾಗೂ ಪೀಠದ ಗೌರವಗಳನ್ನು ಹೆಚ್ಚಿಸುವ ಜವಾಬ್ದಾರಿ ತಮ್ಮ ಮೇಲಿದೆ ಮತ್ತು ನಿಯಮಾವಳಿಗಳು ಸಹ ಇವೆ. ಹಾಗಾಗಿ, ತಾವು ಕೊಡುವಂತಹ ತೀರ್ಪಿಗೆ ನಾವೆಲ್ಲರೂ ಸಹ ಗೌರವವನ್ನು ನೀಡುತ್ತೇವೆ. ಆದರೆ, ಈ ಸದನ ಆರ್ಡರ್‌ನಲ್ಲಿ ಇರದೇ ಹೋದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟು ದಯಮಾಡಿ, ಈ ಸದನವನ್ನು ಮೊಟಕುಗೊಳಿಸಿ. ಈ ಸದನದಲ್ಲಿ ಈ ರೀತಿ ಆಳುವ ಪಕ್ಷ ಸಮರ್ಥವಾಗಿ ಉತ್ತರ ನೀಡದೇ ಅಥವಾ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕಟಿಬದ್ಧತೆಯಿಂದಷ್ಟೇ ಈ ರೀತಿ ಮುಂದುವರೆಯುವುದಾದರೆ ಅದರಿಂದಾಗಿ, ಸಾರ್ವಜನಿಕರ ಹಣ ಪೋಲಾಗಬಾರದು ಹಾಗೂ ಈ ಸದನವನ್ನು ಈ ರೀತಿ ನಿರಂತರವಾಗಿ ನಡೆಸಿಕೊಂಡು ಹೋಗಬಾರದೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಆಡಳಿತ ಪಕ್ಷಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಆಳುವ ಪಕ್ಷ ಇರಬಹುದು ಅಥವಾ ಬೇರೆ ಯಾವುದೇ ಪಕ್ಷ ಇರಬಹುದು, 'ಒಬ್ಬ ಮಂತ್ರಿ ಮುಖ್ಯವೇ ಅಥವಾ ಈ ರಾಷ್ಟ್ರಧ್ವಜ ಮುಖ್ಯವೇ' ಎಂಬ ನನ್ನ ಪ್ರಶ್ನೆಗೆ ಉತ್ತರ ನೀಡಬೇಕು.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ಮಾನ್ಯ ಸದಸ್ಯರ ಮಾತಿಗೆ ಬೆಂಬಲವನ್ನು ಸೂಚಿಸಿದರು)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ತಾವು ತಮ್ಮ ಮಾತನ್ನು ಮುಕ್ತಾಯಗೊಳಿಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಯವರಲ್ಲಿ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಕೂಡಲೇ ವಿರೋಧ ಪಕ್ಷದವರೆಲ್ಲರನ್ನು ತಮ್ಮ ಸಮ್ಮುಖದಲ್ಲಿ ಕರೆದು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೋರುತ್ತೇನೆ. ಈ ವಿಧಾನ ಮಂಡಲ ಯಶಸ್ವಿಯಾಗಿ ನಡೆಯುವುದಕ್ಕೆ ಆಡಳಿತ ಪಕ್ಷ ಮುಂದೆ ನಿಂತು ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು);-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಕಳೆದ ಎರಡು ದಿನಗಳಿಂದ ರಾಷ್ಟ್ರಧ್ವಜದ ವಿಚಾರದ ಮೇಲೆ ಈ ಸದನದಲ್ಲಿ ಸಂಘರ್ಷ ನಡೆಯುತ್ತಿದೆ. ಈ ಸಂಘರ್ಷ ನಡೆಯುವುದಕ್ಕೆ ಮೂಲ ಕಾರಣ ಒಬ್ಬ ಸಚಿವರು. ಯಾರೋ ಒಬ್ಬ ಸಾಧಾರಣ ಕಾರ್ಯಕರ್ತ ಈ ಹೇಳಿಕೆಯನ್ನು ನೀಡಿದ್ದರೆ, ಇದು ಇಷ್ಟೊಂದು ಮಹತ್ವ ಪಡೆಯುತ್ತಿರಲಿಲ್ಲ. ಒಬ್ಬ ಸಚಿವರೆಂದರೆ, ಅವರು ಸಂವಿಧಾನದ ಮೇಲೆ ಪ್ರಮಾಣವಚನ ಸ್ವೀಕರಿಸುತ್ತಾರೆ. ಸಂವಿಧಾನದ ಅಡಿಯಲ್ಲಿ ಅವರು ಮಂತ್ರಿಯಾಗುತ್ತಾರೆ ಮತ್ತು ಅದರ ಪ್ರಕಾರ ಅವರು ತಮ್ಮ ನಡತೆ ಗೌರವಯುತವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಇವೊತ್ತಿನ ದಿವಸ ದೇಶದಲ್ಲಿ ಸಮಗ್ರತೆ, ಸಾರ್ವಭೌಮತೆ ಮತ್ತು ಒಗ್ಗಟ್ಟು ಇದು ನಮ್ಮ ದೇಶದ ಗುಟ್ಟು. ಇಂತಹ ಒಂದು ಗುಟ್ಟು ಬರಬೇಕಾದರೆ, ನಮ್ಮ ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜ ಈ ಎರಡೂ ಈ ದೇಶವನ್ನು ಒಗ್ಗಟ್ಟಿನಲ್ಲಿ ಇಟ್ಟುಕೊಳ್ಳುವುದಕ್ಕೆ ಮೂಲ ಕಾರಣ. ಆ ಕಾರಣದಿಂದಲೇ ಸಂವಿಧಾನದ ಆರ್ಟಿಕಲ್ 51(ಎ) ನಮಗೆ ಏನು ಅವಕಾಶ ಕೊಟ್ಟಿದೆ; ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, "ಪ್ರತಿಯೊಬ್ಬ ನಾಗರಿಕನ ಕರ್ತವ್ಯ, ಈ ದೇಶದ ಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು" ಎಂದು ಹೇಳುತ್ತದೆ. ಈ ದೇಶದ ರಾಷ್ಟ್ರಧ್ವಜಕ್ಕೆ ಯಾವುದೇ ರೀತಿಯ ಅಪಮಾನ ಬರಬಾರದೆಂದು *1971ರಲ್ಲಿ The Prevention of Insults to National Honour Act'* ಎಂದು ಮಾಡಿರುತ್ತಾರೆ. ಅದರಲ್ಲಿ ರಾಷ್ಟ್ರಧ್ವಜ ಕೂಡ ಇರುತ್ತದೆ. ಏತಕ್ಕಾಗಿ ಈ ಆಕ್ಟ್ ನ್ನು ಜಾರಿಗೆ ತಂದಿರುತ್ತಾರೆಂದರೆ, ಯಾವುದೇ ವ್ಯಕ್ತಿ ನಮ್ಮ ದೇಶದ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿದಾಗ ಅಥವಾ ಆ ರಾಷ್ಟ್ರಧ್ವಜದ

ಗೌರವವನ್ನು ಕಡಿಮೆ ಮಾಡಿದಾಗ, ಆತನ ವಿರುದ್ಧ ನಾವು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕಾಗಿಯೇ ಸದರಿ ಆಕ್ಟ್‌ನ್ನು ಜಾರಿಗೆ ತರಲಾಗಿರುತ್ತದೆ. ಆದರೆ, ಇವೊತ್ತಿನ ದಿವಸ ಒಬ್ಬ ಮಂತ್ರಿಯೇ ಈ ರೀತಿ ಹೇಳಿಕೆ ನೀಡುವಾಗ, ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ರಾಷ್ಟ್ರಧ್ವಜಕ್ಕೆ ಗೌರವ ಸಿಗುತ್ತದೆ? ಇದರಿಂದಾಗಿ, ನಾಳೆಯ ದಿವಸ ಬೇರೆಯ ವ್ಯಕ್ತಿಗಳು ಸಹ, "ಒಬ್ಬ ಮಂತ್ರಿಯೇ ಈ ರೀತಿ ಮಾತನಾಡಿದಾಗ, ನಾನು ಮಾತನಾಡುವುದರಲ್ಲಿ ಏನು ತಪ್ಪಿದೆ" ಎಂದು ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಹಾಗಾಗಿ, ಇದು ಅಗೌರವವಾದಂತಹ ವಿಷಯ ಆಗುತ್ತದೆ. ನಾನು ಇವೊತ್ತಿನ ದಿವಸ ...

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ತಮ್ಮ ಮಾತನಾಡುವ ಆಸ್ಟ್ ದೊಡ್ಡದಿದೆಯೇ?

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಕೆಂದು ಎದ್ದು ನಿಂತುಕೊಂಡಾಗ ತಕ್ಷಣವೇ ತಾವು ಈ ರೀತಿ ಮಾತನಾಡುತ್ತೀರಿ? ಕಾರಣ ಏನೆಂದು ನನಗೆ ಗೊತ್ತಿರುವುದಿಲ್ಲ. ನಿನ್ನೆಯ ದಿವಸ ಮಾನ್ಯ ಕಾನೂನು ಸಚಿವರು ಮಾತನಾಡುತ್ತಾ, "ಹೌದು, ಶ್ರೀ ಕೆ.ಎಸ್. ಈಶ್ವರಪ್ಪನವರು ಏನು ಅಂತಹ ದೊಡ್ಡ ಮಾತನ್ನು ಹೇಳಿದರು" ಎಂದು ಕೇಳಿದರು. ಅವರು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆಯೇ ಹೊರತು, ಇದು ನನ್ನ ಹೇಳಿಕೆಯಲ್ಲ. ಅವರು, "ಮುಂದಿನ ನೂರು ವರ್ಷಕ್ಕೆ ಬರಬಹುದೆಂದು" ಹೇಳಿದರು. ನೂರು ವರ್ಷಕ್ಕೆ ಬರಬಹುದೆಂದರೆ ಅದರ ಅರ್ಥ ಏನು? ಇವೊತ್ತಿನ ದಿವಸ ಒಂದು ಮಗುವಿಗೆ ಜನ್ಮ ನೀಡುವುದಕ್ಕೆ ಒಂಭತ್ತು ತಿಂಗಳು ಸಮಯ ಬೇಕು. ಅಂದರೆ, ಒಂಭತ್ತು ತಿಂಗಳ ಹಿಂದೆಯೇ ಆ ಬೀಜ ಬಿತ್ತಬೇಕು. ಒಂದು ತೆಂಗಿನ ಗಿಡ ಹಾಕಿ 10 ವರ್ಷಗಳ ನಂತರ ಫಲ ಕೊಡುತ್ತದೆ. ಇವೊತ್ತಿನ ಕಾಲದಲ್ಲಿ ಅದು ಕೇವಲ 5 ವರ್ಷಗಳಲ್ಲಿಯೂ ಸಹ ಫಲ ಕೊಡುತ್ತದೆ. ಆ ರೀತಿ ಮಾನ್ಯ ಈಶ್ವರಪ್ಪನವರು ಇವೊತ್ತಿನ ದಿವಸ ಕೇಸರಿ ಧ್ವಜವನ್ನು ಹಾರಿಸುತ್ತೇವೆಂದು ಇವೊತ್ತಿನ ದಿವಸ ಬೀಜ ಹಾಕಿದ್ದಾರೆ. ಅಂದರೆ, ಇವರ ಮನಸ್ಸಿನಲ್ಲಿ/ದೇಹದಲ್ಲಿ ಎಷ್ಟರಮಟ್ಟಿಗೆ ಈ ರಾಷ್ಟ್ರಧ್ವಜದ ಬಗ್ಗೆ ಅಸಹ್ಯ ಇದೆಯೆಂಬುದನ್ನು ಇಲ್ಲಿ ತೋರಿಸುತ್ತದೆ.

ಇದರಿಂದಾಗಿ ನನಗೆ ಅನಿಸುವುದೇನೆಂದರೆ, ಆ ರೀತಿ ಹೇಳಿಕೆ ನೀಡಿದಂತಹ ಮಂತ್ರಿಯವರ ಮೇಲೆ sedition law ಪ್ರಕಾರ ಕ್ರಮ ತೆಗೆದುಕೊಳ್ಳಲೇಬೇಕಾಗುತ್ತದೆ. ಏಕೆಂದರೆ, it has been proven. ಪ್ರೂವ್ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರು ಹೇಳಿಕೆ

ಕೊಟ್ಟಿರುವಂತದ್ದು, ರೆಕಾರ್ಡ್‌ನಲ್ಲಿ ಇರುತ್ತದೆ. ನೂರು ವರ್ಷಕ್ಕೆ ಮಾಡುತ್ತೇವೆಂದರೆ, it has been admitted. ಇವೊತ್ತಿನ ದಿವಸ ಮಹಾತ್ಮ ಗಾಂಧೀಜಿಯವರನ್ನು ಗುಂಡಿಟ್ಟು ಹೊಡೆಯುತ್ತಾರೆಂದರೆ, ಅವರ ಮೇಲೆ ಯಾವುದೇ ರೀತಿಯ ಕ್ರಮ ಆಗುವುದಿಲ್ಲ ಮತ್ತು ಗಾಂಧೀಜಿಯವರಿಗೆ ಗುಂಡು ಹೊಡೆದಂತಹ ವ್ಯಕ್ತಿಯನ್ನು ಇವೊತ್ತಿನ ದಿವಸ ಪೂಜಿಸುತ್ತಿದ್ದಾರೆ. ಅಂತಹವರ ವಿರುದ್ಧ ಯಾವುದೇ ಕ್ರಮ ಆಗುವುದಿಲ್ಲ. Father of Nation ಆದಂತಹ ಮಹಾತ್ಮ ಗಾಂಧೀಜಿ ಎನ್ನುವಂತಹ ಮಹಾನ್ ವ್ಯಕ್ತಿಗೆ ಈ ರೀತಿ ಆದರೆ ಅಥವಾ ನಾವು ಪೂಜಿಸತಕ್ಕತಹ ವ್ಯಕ್ತಿಗಳಗೆ ಈ ರೀತಿಯಾದರೆ, ನಾಳೆ ದಿವಸ ದೇಶ ಯಾವ ರೀತಿ ಇರುತ್ತದೆ? ನಾನು ಒಂದು ಮಾತನ್ನು ಹೇಳುವುದೇನೆಂದರೆ, ಈ ದೇಶವನ್ನು ನಾವು fanaticism ಕೆಳಗಡೆ ಆಳತಕ್ಕಂಥದ್ದು ಸಾಧ್ಯವೇ ಇರುವುದಿಲ್ಲ. ಇವೊತ್ತಿನ ದಿವಸ ಪ್ರಪಂಚದಲ್ಲಿ ಹಲವಾರು ದೇಶ ಈ ಒಂದು ಮತಾಂಧತೆಯ ಮೇಲೆ ನಡೆಯತಕ್ಕಂತಹ ಆಡಳಿತ ಇದೆ, ಇದು ಯಾವುದೂ ಸಹ ಸಕ್ಸಸ್ ಆಗಿರುವುದಿಲ್ಲ.

(ಮುಂದು)

(070)17.02.2022 4.50 ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್.ರಮೇಶ್ (ಮುಂದು):-**

ನಮ್ಮ ದೇಶದಲ್ಲಿ ಸಮಗ್ರತೆಯು ಒಗ್ಗಟ್ಟಿನಿಂದ ಕೂಡಿದೆ ಎಂದಾದರೆ, ಅದು ನಮ್ಮಲ್ಲಿರುವಂಥ secularism ನಿಂದ ಕೂಡಿರುವುದಾಗಿದೆ. ಸುಮಾರು 500-600 ವರ್ಷಗಳ ಹಿಂದೆ ದೇಶದ ಉದ್ದಗಲ್ಲಕ್ಕೂ 500 ಕ್ಕೂ ಹೆಚ್ಚು ರಾಜ್ಯಗಳು ಹಾಗೂ ಆಡಳಿತಗಾರರು ಇದ್ದರು. ಅವರೆಲ್ಲರನ್ನೂ ಒಟ್ಟುಗೂಡಿಸಿ ಸುಮಾರು 70-75 ವರ್ಷಗಳಿಂದ ಉತ್ತಮ ಆಡಳಿತದಿಂದ ಅಭಿವೃದ್ಧಿ ಪಡೆದಿವೆ. ಆ ಅಭಿವೃದ್ಧಿಯನ್ನು ಕೆಳಗೆ ತಲುಪುವ ಮಟ್ಟದಲ್ಲಿ ಹೇಳಿಕೆ ಬರುತ್ತಿದೆ. ಅಂತರರಾಷ್ಟ್ರೀಯ ಮಟ್ಟದವರೆಗೂ ಮಾತನಾಡುವಂಥ ಕೆಲಸವಾಗುತ್ತಿದೆ. ಎಲ್ಲಾ ದೇಶದವರು ಮತ್ತು ರಾಜ್ಯದವರು ಮಾತನಾಡುವಂಥದಾಗಿದೆ. ಕೇವಲ ನಾವು ಈ ಸದನದಲ್ಲಿ ಕುಳಿತುಕೊಂಡು ಮಾತನಾಡುವುದಕ್ಕೆ ಸೀಮಿತವಾಗಿಲ್ಲ. ಅಂತರರಾಷ್ಟ್ರೀಯ ಮಾಧ್ಯಮದಲ್ಲಿಯು ವರದಿಯಾಗುತ್ತಿದ್ದೆ. ಮಾನ್ಯ ಕೆ.ಎಸ್. ಈಶ್ವರಪ್ಪನವರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರದವರು ಸಾಕ್ಷಿ ಕೇಳುತ್ತಿದ್ದಾರೆ. There is a

proof. ಅವರು ಬೀಗ ಹಾಕಿರುವುದೇ ಸಾಕ್ಷಿ. ಹಾಗಾಗಿ ದಯವಿಟ್ಟು ಮಾನ್ಯ ಕೆ.ಎಸ್. ಈಶ್ವರಪ್ಪನವರನ್ನು ಕೆಳಗೆ ಇಳಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಖಂಡಿತವಾಗಿ ಆ ರೀತಿ ಮಾಡಿದರೆ ಇಡೀ ಪ್ರಪಂಚವೇ ನಮ್ಮ ದೇಶವನ್ನು ಮತ್ತು ರಾಜ್ಯವನ್ನು ಹೊಗಳುತ್ತದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ನನಗೆ ಅವಕಾಶ ಕಲ್ಪಿಸಿದಕ್ಕೆ ತಮಗೆ ಧನ್ಯವಾದಗಳು. ಈ ಸದನಕ್ಕೆ ಒಂದು ಇತಿಹಾಸ ಇದೆ. ಈ ಸದನಕ್ಕೆ ತನ್ನದೇ ಆದ ಕಾರ್ಯ ಪದ್ಧತಿ ಮತ್ತು ನಡವಳಿಕೆ ಇದೆ. ಈ ಸದನದಲ್ಲಿಯೇ ಮಾತ್ರವಲ್ಲ. ಇಡೀ ದೇಶದಲ್ಲಿಯೇ ಸತತವಾಗಿ 07 ಬಾರಿ ಸದಸ್ಯರಾಗಿ ಆಯ್ಕೆಯಾಗಿ ಬಂದು ಈಗ ಸಭಾಪತಿಗಳಾಗಿ ಈ ಪೀಠದಲ್ಲಿ ಕುಳಿತು ನಮಗೆ ಮಾರ್ಗದರ್ಶನ ನೀಡಿದ್ದೀರಿ. ಅದು ನಮ್ಮೆಲ್ಲರ ಸೌಭಾಗ್ಯ ಎಂದು ಭಾವಿಸಿದ್ದೇನೆ. ಈ ದೇಶಕ್ಕಾಗಿ ಸ್ವತಂತ್ರ ತಂದು ಕೊಟ್ಟ ಪಕ್ಷ ನಮ್ಮದು ಎಂದು ಬಹಳ ಹೆಮ್ಮೆಯಿಂದ ವಿರೋಧ ಪಕ್ಷದವರು ಹೇಳಿದ ಮಾತನ್ನು ಸಹ ನಾನು ಕೇಳಿದ್ದೇನೆ. ಅದೇ ರೀತಿ ರಾಜಕಾರಣವನ್ನು ರಾಷ್ಟ್ರ ಕಾರ್ಯವೆಂದು ಭಾವಿಸಿ, ಈ ರಾಷ್ಟ್ರದ ಪುನರ್ ನಿರ್ಮಾಣಕೋಸ್ಕರ ನಾವು ರಾಜಕಾರಣ ಮಾಡುತ್ತೇವೆ ಎಂದು ಬಹಳ ಸ್ವಾಭಿಮಾನದಿಂದ ಹೇಳುವಂಥ ಕಾರ್ಯಕರ್ತರು ಭಾರತೀಯ ಜನತಾ ಪಕ್ಷದಲ್ಲಿ ಕುಳಿತಿದ್ದಾರೆ. ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ಎರಡು ಸಂಖ್ಯೆಯಿಂದ ಅಧಿಕಾರಕ್ಕೆ ಬಂದಿದ್ದೇವೆ ಎಂದರೆ, ಅದು ಈ ದೇಶದ ಮತ್ತು ರಾಜ್ಯದ ಜನರ ಆಶೀರ್ವಾದದಿಂದ ಬಂದಿರುವುದು.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಆಪರೇಷನ್ ಕಮಲವು,...

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮೊದಲು ಮಾತನಾಡುತ್ತೇನೆ. ಒಂದು ವೇಳೆ ಯಾರಾದರೂ ಏನಾದರೂ ಕಲಿತಿದ್ದರೆ ಅದಕ್ಕೆ ಪಿತಾಮಹಾರು ಅವರೇ. ಈ ಪ್ರವೃತ್ತಿಯನ್ನು ಗೋವಾದಿಂದ ಪ್ರಾರಂಭ ಮಾಡಿದ್ದು, ಅವರೇ ವಿನಃ ಬೇರೆ ಯಾರು ಅಲ್ಲ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು yield ಆಗಬೇಕು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. I am not yielding.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಏನು ಎಂಬುದನ್ನು ನಾನು ಹೇಳುತ್ತೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್. ಈಶ್ವರಪ್ಪನವರ ಬಗ್ಗೆ ವಿರೋಧ ಪಕ್ಷದವರಿಗೆ ಅನುಮಾನ ಬಂದಿರಬಹುದು. ಆದರೆ, ಮಾನ್ಯ ಕೆ.ಎಸ್. ಈಶ್ವರಪ್ಪನವರು ಒಬ್ಬ ದೇಶ ಭಕ್ತರು ಎನ್ನುವುದರ ಬಗ್ಗೆ ಹತ್ತು ಹಲವಾರು ಉದಾಹರಣೆಗಳಿವೆ. ಈಗಾಗಲೇ ನಮ್ಮ ಎಲ್ಲಾ ಸದಸ್ಯರು ಮಾತನಾಡಿದ್ದು, ಪದೇ ಪದೇ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ನಾನು ಪ್ರಾರಂಭದಲ್ಲಿಯೇ ಹೇಳಿದ ಹಾಗೆ, ಮಾನ್ಯ ಕೆ.ಎಸ್.ಈಶ್ವರಪ್ಪನವರು ಒಬ್ಬ ದೇಶ ಭಕ್ತ ಕಾರ್ಯಕರ್ತ ಹಾಗೂ ದೇಶ ಭಕ್ತ ನಾಯಕರಾಗಿದ್ದು, ಅದರ ಬಗ್ಗೆ ದಯವಿಟ್ಟು ಸಂಶಯಪಡುವುದು ಬೇಡ. ನಾನು ಈಗಾಗಲೇ ಹೇಳಿದ ಹಾಗೆ ತಾವು ಆ ಪೀಠದಲ್ಲಿ ಕುಳಿತು ಮಾರ್ಗದರ್ಶನ ನೀಡುತ್ತಿರುವುದು ನಮ್ಮ ಸೌಭಾಗ್ಯ. ಮಾನ್ಯ ವಿರೋಧ ಪಕ್ಷದ ಸದಸ್ಯರು ನಿಲುವಳಿ ಸೂಚನೆ ಅಡಿ ಮಾನ್ಯ ಕೆ.ಎಸ್.ಈಶ್ವರಪ್ಪನವರ ಹೇಳಿಕೆಯನ್ನು ತಂದಿದ್ದಾರೆ. ಇದು ನಮ್ಮ ಕಾರ್ಯ ಪದ್ಧತಿಯಲ್ಲಿ ಮಹತ್ವವಾದ ಅಂಶವಾಗಿದ್ದು, ಅದನ್ನು ಸ್ವಾಗತ ಮಾಡುತ್ತೇನೆ. ನಿಲುವಳಿ ಸೂಚನೆಯಡಿ ಪ್ರಸ್ತಾಪ ಮಾಡಲು ಸದನದಲ್ಲಿ ತಂದರೆ ಅದನ್ನು ಕೈಗೆತ್ತಿಕೊಳ್ಳಬೇಕೇ ಅಥವಾ ಬೇಡವೇ ಎಂಬುವ ಪರಮಾಧಿಕಾರ ತಮಗೆ ಸೇರಿದ್ದು, ಅದರಂತೆ ತಾವು ಆ ನಿಲುವಳಿ ಸೂಚನೆಯನ್ನು ತೆಗೆದುಕೊಂಡಿದ್ದೀರಿ. ಆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಂಬಂಧಪಟ್ಟ ಪಾರ್ಲಿಮೆಂಟರಿ ಸಚಿವರಿಗೆ, ಸದನದ ನಾಯಕರಿಗೆ ಹಾಗೂ ಕೆಲವು ಪ್ರಮುಖ ನಾಯಕರಿಗೆ ಮಾತನಾಡಲು ಅವಕಾಶ ನೀಡಿದ್ದೀರಿ. ಹಾಗಾಗಿ ಅದರ ಮೇಲೆ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಇಬ್ಬರೂ ಮಾತನಾಡಿದ್ದೇವೆ. ನಾನು ತಮಗೆ ನಿಲುವಳಿ

ಸೂಚನೆ ಬಗ್ಗೆ ಹೇಳುವಷ್ಟು ದೊಡ್ಡವನಾಗಿಲ್ಲ. ತಮ್ಮ ಎದುರಿನಲ್ಲಿಯೇ ತಮ್ಮ ಅನುಭವವನ್ನು ಹಂಚಿಕೊಂಡು ನಾನು ಬೆಳೆದಂತಹ ಕಾರ್ಯಕರ್ತನಾಗಿದ್ದೇನೆ. ಒಂದು ಸಲ ಈ ನಿಲುವಳಿ ಸೂಚನೆ ಸದನದಲ್ಲಿ ನಡೆಯಬೇಕಾದರೆ, ಆ ನಿಲುವಳಿ ಸೂಚನೆ ಸೂಕ್ತವಲ್ಲವೆಂದು ತಾವು ಪೀಠದಿಂದ ಆದೇಶ ನೀಡಿದ ಮೇಲೆಯು ಅದೇ ವಿಷಯದ ಮೇಲೆ ಪುನಃ ಚರ್ಚೆ ಮಾಡಿರುವಂಥ ನಿರ್ದೇಶನವನ್ನು ನಾನು ಇಲ್ಲಿಯವರೆಗೂ ನೋಡಿಯೇ ಇಲ್ಲ. ಜೂನ್ ಮಾಹೆ ಬಂದರೆ, ತಾವು ಒಬ್ಬ ಸದಸ್ಯರಾಗಿ ನಿರಂತರವಾಗಿ 42 ವರ್ಷಗಳಿಂದ ಈ ಸದನದಲ್ಲಿದ್ದೀರಿ. ಇಂತಹ ನಿದರ್ಶನವನ್ನು ತಾವು ಸಹ ನೋಡಿಯೇ ಇಲ್ಲವೆಂದು ಭಾವಿಸಿದ್ದೇನೆ. ಆದ್ದರಿಂದ ಈ ಸದನದ ಮೂಲಕ ತಮ್ಮ ಪೀಠಕ್ಕೆ ವಿನಂತಿಸುವುದೇನೆಂದರೆ, ಒಂದು ಸಲ ಪೀಠದಿಂದ ನಿರ್ಣಯ ಬಂದ ಮೇಲೆ ಆ ವಿಷಯದ ಮೇಲೆ ಚರ್ಚೆ ಮಾಡುವುದು ಸೂಕ್ತವಲ್ಲ. ಹಾಗಾಗಿ ತಮ್ಮ ಮೂಲಕ ವಿರೋಧ ಪಕ್ಷದವರಲ್ಲಿ ವಿನಂತಿಸುವುದೇನೆಂದರೆ, ಈ ವಿಷಯದಲ್ಲಿ ಮತ್ತೆ ಚರ್ಚೆ ಮಾಡಬೇಕೆಂದು ಇಚ್ಛೆ ಪಟ್ಟರೆ, ಬೇರೊಂದು ವಿಷಯದ ಮೇಲೆ ಪ್ರಸ್ತಾವನೆ ನೀಡಿ ಚರ್ಚೆ ಮಾಡಲಿ. ಈ ನಿಲುವಳಿ ಸೂಚನೆಯಡಿ ಈ ರೀತಿ ಚರ್ಚೆ ಮಾಡುವುದರಿಂದ ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಸದನಕ್ಕೆ ಗೌರವ ತರುವುದಿಲ್ಲ. ದಯವಿಟ್ಟು ಈ ನಿಲುವಳಿ ಸೂಚನೆಯ ಮೇಲಿನ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಬೇಕೆಂದು ಕೈ ಮುಗಿದು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:-** ಇದು ನಿಲುವಳಿ ಸೂಚನೆ ಅಡಿ ಮಾಡುತ್ತಿರುವ ಚರ್ಚೆಯಾಗಿಲ್ಲ. ಸದನ ಪ್ರಾರಂಭಗೊಳ್ಳುವ ಮೊದಲು ಒಳ್ಳೆಯ ವಾತಾವರಣ ನಿರ್ಮಾಣ ಮಾಡಬೇಕೆಂದು ಹಾಗೂ ಪ್ರತಿಯೊಬ್ಬ ಸದಸ್ಯರ ಮಾತಿನ ವಿಚಾರಗಳೇನಿವೆ, ಅದನ್ನು ತಿಳಿದುಕೊಳ್ಳುವ ಸಲುವಾಗಿ ಮಾತನಾಡುತ್ತಿದ್ದಾರೆ ವಿನಃ ನಿಲುವಳಿ ಸೂಚನೆ ಅಡಿ ಚರ್ಚೆ ಮಾಡುತ್ತಿಲ್ಲ. ನಿಲುವಳಿ ಸೂಚನೆ ಅಡಿ ಮಾಡುತ್ತಿದ್ದ ಚರ್ಚೆಯು ನಿನ್ನೆ ದಿವಸವೇ ಮುಕ್ತಾಯಗೊಂಡಿದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಆದರೆ, ಈಗ ಚರ್ಚೆ ಮಾಡುತ್ತಿರುವ ವಿಷಯವು ಅದೇ ಆಗಿದೆ. ಹಾಗಾಗಿ, ನಾನು ಅದಕ್ಕೆ ಸಂಬಂಧಿಸಿದಂತೆಯೇ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, (ಗೊಂದಲ) ಮಾನ್ಯ ಸದಸ್ಯರು ಬೇರೆಯವರು ಮಾತನಾಡುವಾಗ ಎಲ್ಲದಕ್ಕೂ ಅಡ್ಡ ಬಂದು ಮಾತನಾಡುತ್ತಾರೆ ಅದು ಸರಿಯೇ? ಪ್ರತಿಯೊಬ್ಬರು ಮಾತನಾಡುವ ಸಂದರ್ಭದಲ್ಲಿ ಎಲ್ಲರಿಗೂ ಅಡ್ಡ ಪಡಿಸುತ್ತಿದ್ದರು.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ಚರ್ಚೆಗೆ ಸಂಬಂಧಿಸಿದಂತೆ ಇನ್ನೊಂದು ರೂಪದಲ್ಲಿ ಚರ್ಚೆಗೆ ಪ್ರಸ್ತಾವನೆ ನೀಡಿ ಚರ್ಚೆ ಮಾಡಲಿ ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಅಡಗೂರ್ ಹೆಚ್ ವಿಶ್ವನಾಥ್‌ರವರೇ ತಾವು ಮಾತನಾಡಿ.

**ಶ್ರೀ ಸುನೀಲ್‌ಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ಈಶ್ವರಪ್ಪನವರು ರಾಜೀನಾಮೆ ನೀಡಿದರೆ ಮಾನ್ಯ ಅಡಗೂರ್ ಹೆಚ್ ವಿಶ್ವನಾಥ್‌ರವರಿಗೆ ಸಚಿವ ಸ್ಥಾನಕ್ಕೆ ಅವಕಾಶ ಸಿಗಬಹುದು. ಜೊತೆಗೆ ಅವರು ಒಬ್ಬ ಹಿರಿಯ ಸದಸ್ಯರು. ಹಾಗಾಗಿ ಮಾನ್ಯ ಕೆ.ಎಸ್. ಈಶ್ವರಪ್ಪನವರಿಂದ ರಾಜೀನಾಮೆ ಕೊಡಿಸಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯಣ್ಣ, ನಮ್ಮ ತಂದೆಯ ಸ್ಥಾನದಲ್ಲಿರುವವರು ಹಾಗೂ ರಕ್ತ ಹಂಚಿಕೊಂಡವರ ಕುತ್ತಿಗೆಯನ್ನು ಕೊಯ್ದು ಸಿಂಹಾಸನದಲ್ಲಿ ಕುಳಿತುಕೊಳ್ಳುವಂಥ ಬುದ್ಧಿ ನಮ್ಮ ಪಕ್ಷದವರಲ್ಲಿ ಯಾರಿಗೂ ಇಲ್ಲ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ವಾಹ್! ವಾಹ್! ಎಂದು ಉದ್ಗರಿಸಿದರು)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕಳೆದ 2-3 ದಿವಸಗಳಿಂದ ಉಭಯ ಸದನಗಳಲ್ಲಿ ಮಾತಿನ ಗೋಗರಿತ ನಡೆಯುತ್ತಿದ್ದು, ನಾನು ಅಷ್ಟೇ ರಾಷ್ಟ್ರೀಯವಾದಿ, ನಾನು ಅಷ್ಟೇ ಪ್ರಜಾತಂತ್ರವಾದಿ ಎಂದು ನಾವುಗಳೇ ಮಾತನಾಡಿಕೊಳ್ಳುತ್ತಿದ್ದೇವೆ. ಆದರೆ, ಇವತ್ತಿನ ದಿವಸ "ಈ ರಾಜ್ಯಕ್ಕೆ ಏನಾಗಿದೆ? ಏತಕ್ಕೆ ಪ್ರಜಾಪ್ರತಿನಿಧಿಗಳು ಈ ರಾಜ್ಯದ ಮಾನಮರ್ಯಾದೆಯನ್ನು ಕಳೆಯುತ್ತಿದ್ದಾರೆ" ಎಂದು ಹೊರಗಿನ ಜನ

ಮಾತನಾಡಿಕೊಳ್ಳುತ್ತಿದ್ದಾರೆ. ಶಾಲಾ-ಕಾಲೇಜಿಗೆ ಹೋಗಬೇಕಾದ ಮಕ್ಕಳನ್ನು ಬೀದಿಗೆ ಬಿಟ್ಟು, ಜಾತಿವಾದ, ಧರ್ಮದ ವಾದ ತಂದು ಆಗಿತ್ತು. ನಮ್ಮ ರಾಷ್ಟ್ರೀಯ ಬಾವುಟದ ಮೇಲೆ ಎಷ್ಟು ಘನತೆ-ಗೌರವ ಇದೆ ಎಂಬುದು ಎಲ್ಲರಿಗೂ ತಿಳಿದಿದೆ. ಅದು ಕೇವಲ ಒಂದು ಪಕ್ಷಕ್ಕೆ ಮಾತ್ರ ಸೀಮಿತವಾಗಿಲ್ಲ. ಕಾಂಗ್ರೆಸ್ ಪಕ್ಷದವರಿಗೂ, ಭಾರತೀಯ ಜನತಾ ಪಾರ್ಟಿಯವರಿಗೂ ಹಾಗೂ ನಮ್ಮ ಮಧ್ಯೆ ಕುಳಿತಿರುವ ಜೆ.ಡಿ.(ಎಸ್.) ನವರಿಗೂ ಸಹ ಅಷ್ಟೇ ಅಭಿಮಾನ ಇದೆ. ಆ ಬಾವುಟವು ಕೇವಲ ಪಕ್ಷದ ಬಾವುಟ ಅಲ್ಲ, ಅದು ಈ ರಾಷ್ಟ್ರದ ಬಾವುಟವಾಗಿದೆ. ನಾವು ಹಾಗೂ ನೀವು ಬಹಳ ವರ್ಷಗಳ ಹಿಂದೆಯೇ ಆಯ್ಕೆಯಾಗಿ ಇಲ್ಲಿಗೆ ಬಂದಿರುವವರು. ನಾನು 1978ನೇ ಸಾಲಿನಲ್ಲಿ ಆಯ್ಕೆಯಾಗಿ ಈ ಸದನಕ್ಕೆ ಬಂದೆ. ಹಾಗೆಯೇ ತಾವು ಸಹ 1980ನೇ ಸಾಲಿನಲ್ಲಿ ಆಯ್ಕೆಯಾಗಿ ಬಂದಿದ್ದೀರಿ.

**ಸಭಾಪತಿಯವರು:-** ಹೌದು. ತಾವು ನನಗಿಂತ ಹಿರಿಯರು ಎಂದು ನಾನು ಒಪ್ಪಿಕೊಂಡಿದ್ದೇನೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಇಂತಹ ಬಹಳಷ್ಟು ಸದನದ ಕಲಹಗಳನ್ನು ನಾವು ನೋಡಿದ್ದೇವೆ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ದೇವರಾಜ್ ಅರಸುರವರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಆರ್.ಗುಂಡೂರಾವ್‌ರವರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ತಕ್ಷಣವೇ ಅಲ್ಲಿಯೇ ಅದನ್ನು ಸಮಾಧಾನ ಮಾಡುತ್ತಿದ್ದ ಪ್ರಸಂಗವನ್ನು ನೋಡಿದ್ದೇವೆ. ಹಾಗೆಯೇ ಇವತ್ತು ನನಗೆ ಬಹಳ ಸಂತೋಷವಾದ ವಿಚಾರವೇನೆಂದರೆ, ಮಾನ್ಯ ಮರಿತಿಬ್ಬೇಗೌಡರವರ ಭಾಷಣ ಬಹಳ ಪ್ರೌಢವಾಗಿತ್ತು.

**ಸಭಾಪತಿಯವರು:-** ತಾವು ಮಾನ್ಯ ಎಸ್.ರವಿರವರು ಮಾತನಾಡಿದ ಮಾತನ್ನು ಗಮನಿಸಲಿಲ್ಲವೆಂದು ಅನಿಸುತ್ತದೆ. ಅವರು ಸಹ ಎಷ್ಟು ಸಮಾಧಾನದಿಂದ ಚೆನ್ನಾಗಿ ಮಾತನಾಡಿರುವುದನ್ನು ಯಾವತ್ತಾದರೂ ನೋಡಿದ್ದೀರಾ! ಇದೇ ಮೊದಲ ಸಲ ಅಷ್ಟು ಸಮಾಧಾನವಾಗಿ ಚೆನ್ನಾಗಿ ಮಾತನಾಡಿರುವುದನ್ನು ನೋಡಿರುವುದು.

**(ಈ ಹಂತದಲ್ಲಿ ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಅದೆಲ್ಲವನ್ನೂ ಬಿಟ್ಟು ಇವತ್ತಿನ ದಿವಸ, ಈ ನಾಡಿನ ಸಭಾಪತಿಯವರಾದ ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳವರು ಸೇರಿಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹಾಗೂ ಸಭಾನಾಯಕರನ್ನು ಒಂದು ದಿನ ಕರೆಯಿಸಿ ಸಮಾಧಾನದಿಂದ ಮಾತನಾಡಿ, ಆ ವಿಚಾರವನ್ನು ಕೊನೆ ಮಾಡಬೇಕಾಗಿತ್ತು. ಇವತ್ತಿನ ದಿವಸ ಏನಾಗುತ್ತಿದೆ ಎಂದರೆ, ಒಬ್ಬರಿಗೊಬ್ಬರು ಏನೇನು ಮಾತನಾಡುತ್ತಿದ್ದಾರೆ ಎಂಬುದು ಅವರಿಗೇ ಅರ್ಥವಾಗದಂತಹ ಪರಿಸ್ಥಿತಿಗೆ ಬಂದಿದ್ದಾರೆ.

(ಮುಂದು)

(071) 17.02.2022/5.00/ಎಸ್‌ಕೆ-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ಮುಂದು):-**

ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ಇದಕ್ಕೆ ಸಮಯ ಕೊಡುವುದು ಬೇಡ. ವಿಧಾನಸಭೆಯಲ್ಲಿ ಯಾರೂ ಕೂಡ ಅಲ್ಲಿ ಮಲಗುವುದು ಬೇಡ. ಇದೆಲ್ಲಾ ನಮ್ಮ ಗೌರವದ ಪ್ರಶ್ನೆಯಾಗಿದೆ. ಈ ಸದನಗಳ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಈ ಸದನಗಳ ಸದಸ್ಯರ ಮೌಲ್ಯದ ಪ್ರಶ್ನೆಯಾಗಿದೆ. ಇವೆಲ್ಲವನ್ನು ಕೂಡ ನಾವು ಮರೆತು, ರಾಜ್ಯದಲ್ಲಿ ನಾಲ್ಕೈದು ದಿವಸಗಳಂದ ಏನಾಗುತ್ತಿದೆ? ಹಾಗಾಗಿ ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಗೆ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಮುಖ್ಯಮಂತ್ರಿಗಳು ಎಂದರೆ, ಈ ರಾಜ್ಯದಲ್ಲಿ ಆಡಳಿತ ಇರಬಹುದು, ಅಭಿವೃದ್ಧಿ ಇರಬಹುದು, ಕರ್ನಾಟಕ ರಾಜ್ಯದ ಗೌರವ, ಘನತೆ, ಗಾಂಭೀರ್ಯ, ಹೆಮ್ಮೆ ಇದೆಲ್ಲವನ್ನು ಕೂಡ ಎತ್ತಿ ಹಿಡಿಯುವಂತಹ ನಾಯಕ ಒಬ್ಬ ಮುಖ್ಯಮಂತ್ರಿ. ಅಂತಹ ಮುಖ್ಯಮಂತ್ರಿಗಳು ಇದಕ್ಕೆಲ್ಲಾ ಇವತ್ತು ಒಂದು ಕೊನೆ ಆಡಬೇಕು. ಇದಕ್ಕೆ ಸಂಬಂಧಪಟ್ಟವರೆಲ್ಲರನ್ನು ಕರೆಸಿಕೊಂಡು, ಮಾತಾಡಿ, ಇವತ್ತು ರಾತ್ರಿಯೇ ಕೊನೆ ಆಡಬೇಕು. ನಾಳೆ ಬೆಳಗ್ಗೆ ಶುಕ್ರವಾರ. ಶನಿವಾರ ಸದನ ಇರುವುದಿಲ್ಲ. ನಾವೆಲ್ಲರೂ ಈ ವಾರದ ನಾವು ಈ ವಾರ ಕೊನೆ ದಿವಸವಾದರೂ ಕೂಡ ಸಮಾಧಾನ ಸಾಮರಸ್ಯದಿಂದ ಕುಳಿತುಕೊಳ್ಳೋಣ. ಈ ರಾಜ್ಯದ ರಾಜ

ರಾಜೇಶ್ವರಿ, ಭುವನೇಶ್ವರಿ ತಾಯಿ ಸಹ ನೋಡುತ್ತಿದ್ದಾಳೆ. ಹಾಗಾಗಿ ಪಕ್ಷ ಮುಖ್ಯವಲ್ಲ. ಇಲ್ಲಿ ಮೂರು ಪಕ್ಷಗಳ ಪರಕಾಯ ಪ್ರವೇಶ ಮಾಡಿ ನೋಡಿದರೆ, ಯಾರಲ್ಲೂ ವಿಷ ಇಲ್ಲ. ಅದು ಬಿ.ಜೆ.ಪಿ., ಕಾಂಗ್ರೆಸ್, ಜೆ.ಡಿ., (ಎಸ್) ಪಕ್ಷಗಳು ಇರಬಹುದು. ಆದರೆ ಪರಕಾಯ ಪ್ರವೇಶ ಮಾಡಿ ನೋಡಿದಾಗ, ಎಲ್ಲರಲ್ಲಿಯೂ ರಾಷ್ಟ್ರೀಯ ಸ್ವಾಭಿಮಾನ ಇದೆ. ಆದರೆ ಪಕ್ಷದ ವಿಚಾರ ಮತ್ತು ಪಕ್ಷದ ಸಲುವಾಗಿ ಪ್ರತಿಷ್ಠೆ. ಆ ಪ್ರತಿಷ್ಠೆ ನನ್ನನ್ನು ಮತ್ತು ನನ್ನ ರಾಷ್ಟ್ರವನ್ನು ಹಾಗೂ ನನ್ನ ನಾಡನ್ನು ಹೊತ್ತಿಕೊಂಡು ಹೋಗುತ್ತಿದೆ. ನಮ್ಮ ಪ್ರತಿಷ್ಠೆಗಳನ್ನೆಲ್ಲಾ ಕೈಬಿಡಬೇಕು. ಮಾನ್ಯ ಮುಖ್ಯಮಂತ್ರಿಗಳು ಮೂರು ಪಕ್ಷದವರನ್ನು ಕರೆದು, ಇದಕ್ಕೆ ಒಂದು ಕೊನೆ ಆಡಬೇಕು ಮತ್ತು ನಮ್ಮ ರಾಜ್ಯದ ಘನತೆಯನ್ನು ಕಾಪಾಡಬೇಕೆಂದು ಹೇಳಿ, ಮಾನ್ಯ ಸಭಾಪತಿಯವರಿಗೆ ನಾನು ತಮ್ಮ ಮೂಲಕ ಸರ್ಕಾರದ ಮುಖ್ಯಸ್ಥರಾದಂತಹ ಮಾನ್ಯ ಮುಖ್ಯಮಂತ್ರಿಯವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರೇ ತಾವು ಮಾತನಾಡಿ. ಮಾನ್ಯ ಸದಸ್ಯರು ಯಾರೂ ಮಾತನಾಡ ಬೇಡಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ನಾನು ಅವರಿಗೆ ಉತ್ತರ ಕೊಡಬೇಕಾಗಿದೆ.

**ಸಭಾಪತಿಯವರು:-** ತಾವು ಒಂದು ನಿಮಿಷ ನನ್ನ ಮಾತನ್ನು ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿದ್ದೀರಿ ಹಾಗೂ ಉಳಿದ ಮಾನ್ಯ ಸದಸ್ಯರೆಲ್ಲರೂ ಸಹ ಮಾತನಾಡಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೇರೆಯವರು ಮಾತನಾಡುವಾಗ ನಾನು ಸುಮ್ಮನೆ ಕುಳಿತಿದ್ದೆ. ದಯವಿಟ್ಟು, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ದಯವಿಟ್ಟು, ಮಾನ್ಯ ಗೃಹ ಸಚಿವರೇ ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಒಂದು ನಿಮಿಷ ಆಗುವುದಿಲ್ಲ.

**ಸಭಾಪತಿಯವರು:-** ನಾನು ತಮಗೆ ಹೇಳಲಿಲ್ಲ. ಮಾನ್ಯ ಗೃಹ ಸಚಿವರಿಗೆ ಕುಳಿತುಕೊಳ್ಳಿ ಎಂದು ಹೇಳಿದೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಐವತ್ತು ನಿಮಿಷ ಸಮಯವನ್ನು ತೆಗೆದುಕೊಂಡು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ತಮ್ಮ ಭಾಷೆ ನನಗೆ ಅರ್ಥವಾಗಲಿಲ್ಲ.

**ಸಭಾಪತಿಯವರು:-** ಈ ಚರ್ಚೆ ಪ್ರಾರಂಭವಾಗಿ ಒಂದು ಗಂಟೆ ನಲವತ್ತೈದು ನಿಮಿಷವಾಯಿತು. ಇಷ್ಟೆಲ್ಲಾ ಕೇಳಿದ್ದೀರಿ. ಒಂದು ಒಳ್ಳೆಯ ವಾತಾವರಣ ಸರಿ ಬರಲಿ ಎನ್ನುವ ದೃಷ್ಟಿಯಿಂದ ಈಗ ಮಾತಾಡಿದ್ದು ಒಂದು ಗಂಟೆ ನಲವತ್ತೈದು ನಿಮಿಷಗಳಾಯಿತು. ಮಾನ್ಯ ವಿಶ್ವನಾಥ್‌ರವರು ಹಾಗೂ ಬೇರೆ ಬೇರೆ ಮಾನ್ಯ ಸದಸ್ಯರು ಹೇಳಿದ ಹಾಗೆ, ನಿರ್ಮಲವಾದ ವಾತಾವರಣವಾಗಲಿ ಎನ್ನುವ ಸದುದ್ದೇಶದಿಂದ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವ ಚಟವಿಲ್ಲ.

**ಸಭಾಪತಿಯವರು:-** ತಮಗೆ ಮಾತನಾಡುವ ಚಟ ಇದೆ ಎಂದು ಯಾರು ಹೇಳಿದರು?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಗೌರವಾನ್ವಿತ ಗೃಹ ಮಂತ್ರಿಗಳು ಬಂದು, ಇಲ್ಲಿ ಅವರು ಭಾಷಣ ಮಾಡಿದಾಗ, ನಾನು ವಿಧಿ ಇಲ್ಲದೇ ಮಾತನಾಡುವ ಪರಿಸ್ಥಿತಿ. ರಂಗ ಕಲಾವಿದರಾದ ಶ್ರೀ ಲಿಂಗಪ್ಪಣ್ಣನವರಿಗೆ ನಾನು ಏನ್ರಿ ಹೀಗಾಗುತ್ತಿದೆ ಎಂದು ಕೇಳಿದಾಗ, ಅವರು ನನಗೆ ಒಂದು ಗಾದೆ ಹೇಳಿದರು. 'ಬಿ.ಜೆ.ಪಿ.ಯವರ ಕೆಲಸ ಗೂಟ ಕಿತ್ತು ಏನೋ ಸಿಕ್ಕಿಹಾಕಿಕೊಂಡಾಗಿದೆ ಹರಿಪ್ರಸಾದ್‌ರವರೇ. ಮಾನ್ಯ ಲಿಂಗಪ್ಪಣನವರು ಹೇಳಿದ್ದನ್ನೇ ಹೇಳುವುದಕ್ಕೆ ಆಗುವುದಿಲ್ಲ. ಹಿಜಾಬ್ ಬಗ್ಗೆ ಏಕೆ ಮಾತನಾಡುತ್ತಿಲ್ಲ ಎಂದು ಜವಾಬ್ದಾರಿ ಸ್ಥಾನದಲ್ಲಿರುವಂತಹ ಗೃಹ ಮಂತ್ರಿಗಳು ನಮ್ಮನ್ನು ಕೇಳಿದರು. ಇವರು ಪಕ್ಷದ ಪರವಾಗಿದ್ದಾರಾ, ಸರ್ಕಾರದ ಪರವಾಗಿದ್ದಾರಾ ಮತ್ತು ಸಂವಿಧಾನದ ಪರವಾಗಿದ್ದಾರಾ ಎಂಬುದು ಗೊತ್ತಾಗಬೇಕಾಗಿದೆ. ಹಿಜಾಬ್ ವಿಚಾರ ಏಕೆ ಮಾತನಾಡುತ್ತಿಲ್ಲ ಎಂದರೆ ಅದು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಇದೆ. ಆ ಜವಾಬ್ದಾರಿ ಕೂಡ ನಮಗೂ ಇದೆ. ನಾವು ಬೇರೆ ವಿಚಾರದ ಬಗ್ಗೆ ಮಾತನಾಡಿದಾಗ, subjudice ಎನ್ನುತ್ತಿದ್ದರು. ಇವರಿಗೆ prejudice ಇರಬಹುದು. ಆ ಗೌರವ

ನಮಗೆ ಇದೆ. ಅದರಿಂದ ಆ ವಿಚಾರ ನಾವು ಮಾತನಾಡಿಲ್ಲ. ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ. ನಾನು ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಅವರವರ ಅನಿಸಿಕೆಗಳನ್ನು ಹೇಳಿದ್ದಾರೆ. ಆದರೆ ತಪ್ಪು ಏನಿಲ್ಲ. ಒಬ್ಬ ಜವಾಬ್ದಾರಿ ಸ್ಥಾನದಲ್ಲಿರುವಂತಹವರು, ಜವಾಬ್ದಾರಿಗೆ ತಕ್ಕಂತೆ ಮಾತನಾಡಬೇಕಾಗುತ್ತದೆ. ದಯವಿಟ್ಟು, ಕೆಲವರು ಪದೇ ಪದೇ ವಿಚಾರಗಳನ್ನು ಹೇಳುತ್ತಾರೆ. ಇತಿಹಾಸಗಳು ಬಂತು. ತಾಯಿ ಹಾಲು ಕುಡಿದಿದ್ದೇವೆ ಎಂದು ನಿನ್ನೆ ಮಂತ್ರಿಗಳು ಹೇಳಿದರು. ಇವತ್ತು ಮಾನ್ಯ ಗೃಹ ಮಂತ್ರಿಗಳು ಹೇಳಿದರು. ಇದರ ಜೊತೆಗೆ ಶ್ರೀಮತಿ ಭಾರತಿ ಶೆಟ್ಟಿಯವರು ಸಹ ಹೇಳಿದರು. ಇವೆಲ್ಲಾ ಪುನರಾವರ್ತನೆಯಾಗಿ ಬರುವಂತಹದ್ದು necessity ಇಲ್ಲ. ನಾನು ಒಂದೊಂದೇ ವಿಚಾರವಾಗಿ ಮಾತನಾಡುತ್ತಾ ಬರುತ್ತೇನೆ. ಸಹೋದರಿಯಾದ ಡಾ. ತೇಜಸ್ವಿನಿ ಗೌಡರು ಶ್ಯಾಮ ಪ್ರಸಾದ್ ಮುಖರ್ಜಿ ವಿಚಾರ ಕಾಶ್ಮೀರದಲ್ಲಿ ಫ್ಯ್ಲಾಗ್ ವಿಚಾರದ ಬಗ್ಗೆ ಮಾತನಾಡುತ್ತಿದ್ದರು. ಶ್ಯಾಮ ಪ್ರಸಾದ್ ಮುಖರ್ಜಿಯವರು ಪಂಡಿತ ಜವಾಹರಲಾಲ್ ನೆಹರುರವರ ಸಚಿವರ ಸಂಪುಟದಲ್ಲಿ ಸಚಿವರಾಗಿದ್ದರು. 1947ನೇ ಇಸವಿಯ ಮೊದಲು *Fazlul Huq* ಪಶ್ಚಿಮ ಬಂಗಾಳದ ಮುಸ್ಲಿಂ ಲೀಗ್‌ನ ಮುಖ್ಯಮಂತ್ರಿಯವರ ಸಚಿವ ಸಂಪುಟದಲ್ಲಿಯೂ ಸಹ ಇದ್ದರು. *Fazlul Huq* ಯಾರು ಎಂದು ಹೇಳಿದರೆ, ಪಾಕಿಸ್ತಾನ ಮತ್ತು ಇಂಡಿಯಾ ವಿಭಾಗವಾಗಬೇಕೆಂದು ಹೇಳಿ, ಮೊದಲು ನಿರ್ಣಯವನ್ನು ಮಾಡಿದಂತಹವರು. ಶ್ಯಾಮಪ್ರಸಾದ್ ಮುಖರ್ಜಿಯವರನ್ನು ತೆಗೆದುಕೊಳ್ಳುತ್ತಾರೆ. ಯಾರಾದರೂ ಬಂದಿರುತ್ತಾರೆ. ಅದು ನನಗೆ ಗೊತ್ತು. ಇವರದೆಲ್ಲಾ ವರದಿಯಾಗುತ್ತಾ ಇರುತ್ತದೆ. ಇವರು ಬಂದು ಕುಳಿತಿರುತ್ತಾರೆ. ಆದರೆ ವರದಿಯಾಗಲಿ ಸಂತೋಷದ ವಿಷಯ. ಯಾರನ್ನಾದರೂ ಮೆಚ್ಚಿಸುವುದಕ್ಕೆ ಮಾಡಲಿ ಸಂತೋಷ. ಕೊನೆಗೆ ನಾವು ತಾಯಿ ಹಾಲು ಕುಡಿದಿದ್ದೇವೆ ಎಂದು ನಿನ್ನೆ ಮಾನ್ಯ ಗೃಹ ಮಂತ್ರಿಯವರು ಹೇಳಿದ್ದಾರೆ. ಅದನ್ನು ನಾನು ಪುನಃ ಹೇಳಬೇಕಾಗಿದೆ. ತಾಯಿ ಹಾಲು ಕುಡಿದಿದ್ದೇವೆ ಎಂದು ಹೇಳಿದ್ದೀರಲ್ಲಾ ಸ್ವಾಮಿ. 1992ರಲ್ಲಿ ಶ್ರೀ ಮುರಳಿ ಮನೋಹರ ಜೋಶಿಯವರು ಕಾಶ್ಮೀರದಲ್ಲಿ ಧ್ವಜ ಹಾರಿಸಲು ಹೋಗಿದ್ದರು. ಆ ಸಂದರ್ಭದಲ್ಲಿ ನಾನು ಕೂಡ ಲೋಕಸಭೆಯಲ್ಲಿದ್ದೆ. 1992ರಲ್ಲಿ ಜಮ್ಮುವಿನಿಂದ ಮುಂದಕ್ಕೆ ಹೋಗುವುದಕ್ಕೆ ಬಿಡಲಿಲ್ಲ. ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿರುವುದು ಸರಿಯಿದೆ. ಲಾಲ್ ಚೌಕ್‌ನಲ್ಲಿ ಧ್ವಜಾರೋಹಣ ಮಾಡಿಸಲು ಮಾನ್ಯ ಮುರಳಿ ಮನೋಹರ ಜೋಶಿಯವರಿಗೆ ಪೊಲೀಸ್ ಭದ್ರತೆಯನ್ನು ಬಿಟ್ಟು, ಮಿಲಿಟರಿಯವರ ಭದ್ರತೆಯೊಂದಿಗೆ

ಕರೆದುಕೊಂಡು ಹೋಗಿ ಧ್ವಜರೋಹಣ ಮಾಡಿಸಿ, ಅಲ್ಲಿಂದ ಕರೆದುಕೊಂಡು ಬಂದರು. ಮೊನ್ನೆ ತಾನೇ ಯಾರೋ ಅಗಸ್ಟ್ 15 ರಂದು ಲಾಲ್‌ಚೌಕ್‌ನಲ್ಲಿ ಧ್ವಜರೋಹಣ ಮಾಡುತ್ತೇನೆಂದು ಹೇಳಿ, ಅರ್ಧ ಗಂಟೆಯಲ್ಲಿ ಮಾಡಿಬಿಟ್ಟು ಬಂದರು. ನಮ್ಮ ರಾಷ್ಟ್ರ ಧ್ವಜ ಇದೆಯೆಲ್ಲಾ, ಇದು ನಮ್ಮ ತಾಯಿ ಸಮಾನ. ಯಾವ ತಾಯಿ ಎಷ್ಟೇ ಕೆಟ್ಟವಳಾಗಿದ್ದರೂ ಕೂಡ ಮಕ್ಕಳಿಗೆ ವಿಷ ಕುಡಿಸುವುದಿಲ್ಲ. ಆದರೆ ಈಗ ನಡೆಸತಕ್ಕಂತಹ ಪರಿಸ್ಥಿತಿ ನಮ್ಮ ಮಕ್ಕಳಿಗೆ ವಿಷ ಕುಡಿಸುವ ಪರಿಸ್ಥಿತಿ ಆಗುತ್ತಿದೆ. ತ್ರಿವರ್ಣ ಧ್ವಜ ಇದೆ ನೋಡಿ, ಅವರು ಹೇಳಿಬಿಟ್ಟರು. ಅವರು ದೆಹಲಿಗೆ ಹೋದ ಮೇಲೆ ಹಿಂದಿ ಕಲಿತು ಬಿಟ್ಟಿದ್ದಾರೆ. ಏಕ್ ದೇಶ್, ಏಕ್ ನೇತಾ, ಏಕ್ ಧರ್ಮ್, ಏಕ್ ಸಂವಿಧಾನ್, ಏಕ್ ಪ್ರಧಾನ್, ಏಕ್ ಶಿಕ್ಷಣ್, ಏಕ್ ರೇಷನ್, ಏಕ್ ಕಪಡಾ, ಇದೆಲ್ಲಾ ಏಕ್-ಏಕ್ ಎಂದು ಹೇಳಿ ಬಂದು ಬಿಟ್ಟಿತು.

**ಶ್ರೀ ಸಿ.ಸಿ. ಪಾಟೀಲ್ (ಲೋಕೋಪಯೋಗಿ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮಗೆ ಸರಿಯಾಗಿ ಹೇಳುವುದಕ್ಕೆ ಬರುವುದಿಲ್ಲ ಬಿಡಿ. ಅದನ್ನು ನಾವು ಒಬ್ಬರೇ ಹೇಳಬೇಕು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮೂರು ಬಣ್ಣ ಏತಕ್ಕೆ ಬಂತು ಎಂದರೆ, ಇದು ಬಹು ಸಂಸ್ಕೃತಿಯ ರಾಷ್ಟ್ರ ಸ್ವಾಮಿ. ಮಾನ್ಯ ರಮೇಶ್‌ರವರು ಹೇಳಿದಾಗೇ, ನಾನೂ research ಮಾಡಿದ್ದೇನೆ. ಅವರೂ research ಮಾಡಿದ್ದಾರೆ. ಅದು ಎಲ್ಲೆಲ್ಲೋ ಹೋಗಿ ಬಿಡುತ್ತದೆ. ಮಾನ್ಯ ರಮೇಶ್‌ರವರು ಹೇಳಿದಾಗೇ ಸುಮಾರು 562 ರಾಜ ಮಹಾರಾಜರು ಇದ್ದರು. ಪ್ರತಿಯೊಬ್ಬರಿಗೂ ಸಹ ಅವರದೇ ಆದ ಧ್ವಜವಿತ್ತು. ಎಲ್ಲಿಯೂ ಧರ್ಮದ ಧ್ವಜ ಇರಲಿಲ್ಲ. ಅವರವರ ಸಾಮ್ರಾಜ್ಯದ ಧ್ವಜವಿತ್ತು. ಅದನ್ನು ನಡೆಸಿಕೊಂಡು ಹೋಗುತ್ತಿದ್ದರು. ಇದನ್ನೆಲ್ಲಾ ಒಂದು ಮಾಡಿದಾಗ, ಸರ್ದಾರ್ ವಲ್ಲಭಭಾಯಿ ಪಟೇಲ್ ಕಾಂಗ್ರೆಸ್ ಪಕ್ಷದ ದೊಡ್ಡ ನಾಯಕರು. ಆರ್.ಎಸ್.ಎಸ್., ಬಗ್ಗೆ ಏನು ಹೇಳಿದ್ದಾರೆಂಬುದನ್ನು ಹೇಳೋಣವೇ?

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸರ್ದಾರ್ ವಲ್ಲಭಭಾಯಿ ಪಟೇಲ್‌ರವರ ಅಭಿಪ್ರಾಯಕ್ಕೆ ಮಾನ್ಯ ಜವಾಹರಲಾಲ್ ನೆಹರುರವರು ಬೆಲೆ ಕೊಡಲಿಲ್ಲ ಎಂಬ ಬಗ್ಗೆ ಹೇಳೋಣವೇ?

**ಶ್ರೀ ಯು.ಬಿ. ವೆಂಕಟೇಶ್:-** ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ಹೊರತುಪಡಿಸಿ, ಮಾನ್ಯ ಸದಸ್ಯರುಗಳು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ನಿರ್ದೇಶನದ ಮೇರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನು ಹೊರತುಪಡಿಸಿ, ಇನ್ನುಳಿದ ಮಾನ್ಯ ಸದಸ್ಯರುಗಳು ಮಾತನಾಡಿರುವುದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಲಾಲ್ ಚೌಕ್‌ನಲ್ಲಿ ಧ್ವಜಾರೋಹಣ ಮಾಡುವುದಕ್ಕೆ ಹೋದರು. ವಿರೋಧಿಗಳ ಗುಂಡಿಗೆ ಎದೆಗಳನ್ನು ಕೊಟ್ಟರೂ, ಯಾರಾದರೂ ಸತ್ತರಾ! ಈ ತ್ರಿವರ್ಣ ಧ್ವಜದ ಬಗ್ಗೆ ಹೇಳುತ್ತೇನೆ ಕೇಳಿ. ಈ ತ್ರಿವರ್ಣ ಧ್ವಜದ ಸಲುವಾಗಿ ಅಸ್ಸಾಂನ ಕನಕಲತ ಬರೋವಾ ಎನ್ನುವವರು ಬ್ರಿಟೀಷರ ಗುಂಡಿನಿಂದಾಗಿ ತಮ್ಮ ಪ್ರಾಣವನ್ನು ಕಳೆದುಕೊಂಡರು. ಪಶ್ಚಿಮ ಬಂಗಾಳದ ಮಾತಾಂಗಿನಿ ಹಜ್ರಾ ಎಂಬ ಮಹಿಳೆ ತ್ರಿವರ್ಣ ಧ್ವಜದ ಸಲುವಾಗಿ ತಮ್ಮ ಪ್ರಾಣವನ್ನು ಕೊಟ್ಟಿದ್ದಾರೆ. ಗುಜರಾತ್‌ನ ಸಿರೀಶ್‌ಕುಮಾರ್ ಎನ್ನುವವರು ತ್ರಿವರ್ಣ ಧ್ವಜದ ಸಲುವಾಗಿ ತಮ್ಮ ಪ್ರಾಣವನ್ನು ಕೊಟ್ಟಿದ್ದಾರೆ.

**ಶ್ರೀ ಎನ್. ರವಿಕುಮಾರ್:-** ಈ ಕಾಂಗ್ರೆಸ್ ಆಡಳಿತವಿದ್ದಾಗಲೂ ಕೂಡ ರಾಷ್ಟ್ರಧ್ವಜಕ್ಕೆ ಬಲಿದಾನ ಆಗಬೇಕಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಗುಜರಾತಿನ ಶ್ರೀ ಸಿರೀಶ್‌ಕುಮಾರ್ ರವರು ತಮ್ಮ ಪ್ರಾಣವನ್ನು ಕೊಟ್ಟು, ಈ ದೇಶದ ತ್ರಿವರ್ಣ ಧ್ವಜವನ್ನು ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳು ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಸೂಚನೆಯ ಮೇರೆಗೆ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ತ್ರಿವರ್ಣ ಧ್ವಜವನ್ನು ಪ್ರಾಣಾರ್ಪಣೆ ಮಾಡಿ, ಮಾಡಿದ್ದಾರೆ. ಆ ಧ್ವಜದಲ್ಲಿನ ಮೂರು ಬಣ್ಣಗಳಲ್ಲಿ ಎಲ್ಲಾ ಸಂಸ್ಕೃತಿಗಳನ್ನು ಪ್ರತಿನಿಧಿಸಲಾಗಿದೆ. ಈ ದೇಶದಲ್ಲಿ ಏಳು ದೊಡ್ಡ ದೊಡ್ಡ ಧರ್ಮಗಳಿವೆ.

(ಮುಂದು)

**(072) 17.02.2022 5.10 ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ಆ ಧರ್ಮಗಳು ಸ್ವತಂತ್ರ ಬರುವುದಕ್ಕೆ ಮೊದಲು ಇದ್ದವು, ಸ್ವತಂತ್ರ ಬಂದ ನಂತರವೂ ಇವೆ. ಹಿಂದೂ ಧರ್ಮ, ಇಸ್ಲಾಂ ಧರ್ಮ, ಕ್ರೈಸ್ತ ಧರ್ಮ, ಬೌದ್ಧ ಧರ್ಮ, ಸಿಖ್ ಧರ್ಮ, ಜೈನ ಧರ್ಮ ಮತ್ತು ಜೋರೋ ಆಸ್ಟ್ರಿಯನ್ (Zoro astrian) ಧರ್ಮಗಳಿವೆ. ನಮ್ಮದು ಬಹು ಧರ್ಮೀಯ ರಾಷ್ಟ್ರ. ನಮ್ಮದು ಸುಮಾರು 19 ಸಾವಿರ ಭಾಷೆಗಳಿರುವ ರಾಷ್ಟ್ರ. ಎಲ್ಲಾ ಬಣ್ಣಗಳು ನಮ್ಮಲ್ಲಿ ಇರಬೇಕೆಂದು ಈ ಮೂರು ಬಣ್ಣವನ್ನು ಮಾಡಿಕೊಂಡಿರತಕ್ಕಂಥದ್ದು. vernight ಟೈಲರ್‌ರವರ ಹತ್ತಿರ ಹೋಗಿ ಇದನ್ನು ಹೊಲಿಸಿಕೊಂಡು ಬಂದಿರುವುದಲ್ಲ. ಇದಕ್ಕೆ ಸುದೀರ್ಘವಾಗಿ 1916ನೇ ಇಸವಿಯಿಂದ 1947ನೇ Constituent Assembly ವರೆಗೆ ಚರ್ಚೆಯಾಗಿದ್ದು, ಬಾವುಟವನ್ನು ಈ ದೇಶದ ಗೌರವವೆಂದು ನಾವು ಒಪ್ಪಿಕೊಂಡಿದ್ದೇವೆ. ಇದೆಲ್ಲಾ 1980ರಲ್ಲಿ ಬಂದು ಎರಡು ಬಣ್ಣ ಹಾಕಿ ಮಾಡಿರತಕ್ಕಂಥ ಬಾವುಟ ಅಲ್ಲ. ಆದ್ದರಿಂದ ಈ ಬಾವುಟ ಮಾಡುವ ಸಂದರ್ಭದಲ್ಲಿ ಹಲವರು ತ್ಯಾಗ ಬಲಿದಾನ ಮಾಡಿದ್ದಾರೆ. ಕಾಶ್ಮೀರದಲ್ಲಿ ಲಾಹೋರ್‌ಗೆ ಹೋಗಿಬಿಟ್ಟು ಜಿನ್ನಾಗಿನ್ನಾ ದೊಡ್ಡ secular leader ಇಲ್ಲವೆಂದು ನಾವು

ಹೇಳಿದ್ದೇವೆಯೇ? ಪಾಕಿಸ್ತಾನದ Prime Minister ಶ್ರೀ ನವಾಜ್ ಶರೀಫ್‌ರವರ ಮೊಮ್ಮಗಳ birthday ಗೆ ಹೋಗಿ ಬಿರಿಯಾನಿ ತಿಂದು ಬಂದವರು ನಾವಾ? ಪ್ರಧಾನ ಮಂತ್ರಿಗಳ ತಾಯಿಗೆ ಪಾಕಿಸ್ತಾನದಿಂದ ಇವತ್ತು ಸಹ ಮಾವಿನಹಣ್ಣು ಬರುತ್ತದೆ. ಅದನ್ನು ನಾವು ತಿನ್ನುತ್ತಿದ್ದೇವೆಯೇ? ಮಾನ್ಯ ಗೃಹ ಸಚಿವರೇ, ತಾವು ಇತಿಹಾಸವನ್ನು ನೋಡಬೇಕು. ನಾವು ಈ ರಾಷ್ಟ್ರದ ಇತಿಹಾಸವನ್ನು ನೋಡಿದಾಗ, ತಾವು ಈ ರಾಷ್ಟ್ರಧ್ವಜದ ಬಗ್ಗೆ ಬಹಳ ಗೌರವಿದೆ ಎಂದು ಹೇಳಿದಿರಿ. ನಾನು ನಿನ್ನೆಯೇ ಹೇಳಿದ್ದೇನೆ, ಇವತ್ತು ಕೂಡ ಹೇಳುತ್ತೇನೆ. 1947ನೇ ಇಸವಿ ಆರ್.ಎಸ್.ಎಸ್.ನ ಮುಖವಾಣಿ "Organizer" ನಲ್ಲಿ editorial ಬರೆದಿದ್ದಾರೆ. ಅದರಲ್ಲಿ;

*"The people who have come to power by the kick of fate may give in our hands the Tricolour but it will never be respected and owned by Hindus. The word three is in itself an evil, and a flag having three colours will certainly produce a very bad psychological effect and is injurious to a country."*

ಎಂದು ಹೇಳಿರುವುದು ನಾವಲ್ಲಾ, ನಿಮ್ಮ ಪೂರ್ವಜರು ಹೇಳಿರುವುದು. ಆದ್ದರಿಂದ ರಾಷ್ಟ್ರಧ್ವಜದ ಬಗ್ಗೆ ಈ ಡೋಂಗಿ ದೇಶ ಪ್ರೇಮ ನಮಗೆ ಬೇಕಾಗಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಸರ್ದಾರ್ ವಲ್ಲಭಾಬಾಯಿ ಪಟೇಲ್‌ರವರು, ಕಾಶ್ಮೀರದಲ್ಲಿ ಎರಡು ಧ್ವಜ ಮತ್ತು ಎರಡು ಸಂವಿಧಾನ ಇರಬಾರದೆಂದು ಅಭಿಪ್ರಾಯಪಟ್ಟಿದ್ದರು? ಮಾನ್ಯ ಪಂಡಿತ್ ಜವಾಹರ್ ಲಾಲ್ ನೆಹರು ರವರು ಪಾರ್ಲಿಮೆಂಟ್‌ನಲ್ಲಿ ಏನು ಹೇಳಿದರು?

**(ಗೊಂದಲ)**

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, surgical strike ಬಗ್ಗೆ ಇವರು proof ಕೇಳುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಅವರು ಇಲ್ಲವೆಂದು ಹೇಳಲಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ನಾಲ್ಕು ಜನ ಸತ್ತಿರತಕ್ಕಂಥವರ ಹೆಸರು ಹೇಳಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಸದನದಲ್ಲಿ ಒಮ್ಮೆಲೆ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:-** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳಿದರೂ ಕೇಳುತ್ತಿಲ್ಲ, ಅವರು ಕೇಳದಿದ್ದರೆ ಏನು ಮಾಡುವುದು ಹೇಳಿ. ಕಡತಕ್ಕೆ ಹೋಗಬಾರದು ಎಂದು ಹೇಳಿದ್ದೇನೆ. ಇನ್ನೇನು ಹೇಳಬೇಕು ನಾನು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆರ್ಗನೈಜರ್ ಪತ್ರಿಕೆಯಲ್ಲಿ ಬಂದಿರುವುದನ್ನು ಇವರು ಓದುತ್ತಿರುವುದು ತಪ್ಪು. ಅದು ಆರ್ಗನೈಜರ್ ಪತ್ರಿಕೆಯಲ್ಲಿ ಇಲ್ಲ. ಇವರದೇ ಆದಂತಹ ಪದಗಳನ್ನು ಆರ್ಗನೈಜರ್‌ನಲ್ಲಿ ಹೇಳುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದು ಸುಳ್ಳಾದರೆ ನಾನು ಭಾಷಣವನ್ನು ನಿಲ್ಲಿಸುತ್ತೇನೆ.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ, ಬಂದರು, ಮತ್ತು ಒಳನಾಡು ಜಲ ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಗೌರವಾನ್ವಿತ ಹಿರಿಯ ಸದಸ್ಯರು. ಅವರು ರಾಜ್ಯಸಭೆಯಲ್ಲಿ ಕೆಲಸ ಮಾಡಿ ಇಲ್ಲಿಗೆ ಬಂದಿದ್ದಾರೆ. ಅವರ ಬಗ್ಗೆ ನಮಗೆ ಗೌರವವಿದೆ. ಆದರೆ ಅವರು ನಮ್ಮ ಬಗ್ಗೆ ಆಪಾದನೆ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಇರತಕ್ಕಂಥ ಗೌರವ ಮತ್ತು ಅವರ ಹಿರಿತವನ್ನು ಬಿಟ್ಟು, ನಾವು ಏನು low belt ಎಂದು ಕರೆಯುತ್ತೇವೆಲ್ಲಾ, ನಿನ್ನೆ ದಿವಸ ನಾಗಪುರಕ್ಕೆ **XXX** ಎಂದು ಹೇಳಿದರು. ಇವತ್ತು 'ಡೋಂಗಿ' ಎಂದು ಹೇಳಿದರು. ಇದು ಅವರಿಗೆ ಹೆಚ್ಚು ಘನತೆ ತರುವುದಿಲ್ಲ. 'ನಂಬರ್ ದಸ್ ಸಫ್ಧರ್ ಜಂಗ್ ರೋಡ್' ನವರು ನಿಮ್ಮನ್ನು ಪ್ರೀತಿ ಮಾಡಬಹುದು ಅಷ್ಟೇ. ಅದನ್ನು ಬಿಟ್ಟು ಇದರಿಂದ ಬೇರೆ ಇನ್ನೇನೂ ಆಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರನ್ನು ಯಾರು ಪ್ರೀತಿ ಮಾಡುತ್ತಾರೆ. ಈಗ ಶ್ರೀ ಎನ್. ರವಿಕುಮಾರ್‌ರವರು ಅದು "Organizer" ನಲ್ಲಿ ಬಂದಿಲ್ಲವೆಂದು ಹೇಳುತ್ತಾರಲ್ಲಾ, ನಮ್ಮಲ್ಲಿ ಯಾವುದೂ ಸುಳ್ಳಿನ ಫ್ಯಾಕ್ಟರಿ ಇಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ದಾರ್ ವಲ್ಲಭಭಾಯಿ ಪಟೇಲ್‌ರವರು ನೆಹರೂರವರ ಬಗ್ಗೆ ಏನು ಹೇಳಿದ್ದಾರೆ ಅದನ್ನು ತೆಗೆದುಕೊಳ್ಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಒಂದು ಸುಳ್ಳನ್ನು ನೂರು ಬಾರಿ ಹೇಳತಕ್ಕಂಥದ್ದನ್ನು ನಮಗೆ ಹೇಳಿಕೊಟ್ಟಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕಾಶ್ಮೀರ ಈ ದೇಶದ ಅವಿಭಾಜ್ಯ ಅಂಗ. ಆಗ ನಿಮ್ಮವರು ಏಕೆ ತ್ರಿವರ್ಣ ಧ್ವಜವನ್ನು ಹಾರಿಸಲಿಲ್ಲ? ಏಕೆ ಮಾನ್ಯ ಮುರಳಿ ಮನೋಹರ್ ಜೋಷಿಯವರನ್ನು **(ಗೊಂದಲ)** ಕರೆದುಕೊಂಡು ಬಂದು, ರಾಷ್ಟ್ರಧ್ವಜವನ್ನು ಹಾರಿಸಬೇಕಾದಂಥ ಪರಿಸ್ಥಿತಿ ಈ ದೇಶಕ್ಕೆ ಬಂತು. ಅದಕ್ಕೆ ಕಾರಣ ಕಾಂಗ್ರೆಸ್ ತಾನೆ?

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇಟಲಿಯಲ್ಲಿ ಮುಸಲೋನಿಯವರು ಇದ್ದರು ನೋಡಿ, ನಿಮ್ಮ ಸಂಘ ಪರಿವಾರದ ಸಂಸ್ಥಾಪಕರು ಅವರ ಮುಂದೆ ಹೋಗಿ ಕೈ ಮುಗಿದುಕೊಂಡು ಬಂದಿರುವುದು. ನೀವು ಕೂಡ ಅಲ್ಲಿಂದಲೇ ಬಂದಿರತಕ್ಕಂಥವರು. ನೀವು 'ಇಟಲಿ' ಎಂದು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುಕ್ಕೆ ಅವಕಾಶ ಕೊಡಬಾರದೆಂದು ಹೀಗೆ ಮಾಡುತ್ತಿದ್ದಾರೆ. ಆದ್ದರಿಂದ. . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ನಮ್ಮ ದೇಶದಲ್ಲಿ ಹೋರಾಟ ಮಾಡತಕ್ಕಂಥ ಪರಿಸ್ಥಿತಿ ಬಂದಿದ್ದು, ಡೋಂಗಿ ಕಾಂಗ್ರೇಸ್ ಪಕ್ಷದಿಂದ ದೇಶ ವಿರೋಧಿ....

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಸದನದಲ್ಲಿ ಒಮ್ಮೆಲೆ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:-** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ರಘುನಾಥ್ ಮಲ್ಕಾಪೂರೆ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಚರ್ಚೆಗೆ ಅವಕಾಶ ಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಶ್ರೀ ರಘುನಾಥ್ ಮಲ್ಕಾಪೂರೆಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅನುಮತಿ ಕೊಟ್ಟಿದ್ದೇನೆ. ಅವರು ಮಾತನಾಡುವುದು, ಬಿಡುವುದು ಅವರಿಗೆ ಬಿಟ್ಟಿದ್ದು.

ನಿಮಗೆ ಆ ರೀತಿ ಏನಾದರೂ ಅನಿಸಿದ್ದರೆ ನನಗೆ ಒಂದು ಲೆಟರ್ ಕೊಡಿ ಆಮೇಲೆ ನಿಮಗೆ ರಿಪ್ಲೈ ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ನಮ್ಮನ್ನು ಡೋಂಗಿ ಎಂದರು.

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರೇ, ಅವರು ನಿಮಗೆ ಹೇಳಿದ್ದು ಅಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ದೇಶಭಕ್ತರು, ದೇಶ ಭಕ್ತರು ಎಂದು ಎಲ್ಲೂ ಹೇಳುವುದಿಲ್ಲ ಸ್ವಾಮಿ. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ಜೊತೆಗೆ ಇದ್ದವರು ಇವರು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಅದಕ್ಕೆ ನಿಮ್ಮ ಕಾಂಗ್ರೆಸ್ ಕಾಲದಲ್ಲಿ ಸಾವಿರಾರು ಜನ terrorist ಗಳು ಹುಟ್ಟುಕೊಂಡಿದ್ದರು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರ ಪೂರ್ವಜರು, ಅವರ ಸಂಘ ಪರಿವಾರದವರು, ವೀರ ಸಾರ್ವರ್ಕರ್‌ರವರು ಬ್ರಿಟಿಷರಿಗೆ ಕ್ಷಮಾಪಣೆ ಬರೆದುಕೊಟ್ಟಿದ್ದಾರೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಸದನದಲ್ಲಿ ಒಮ್ಮೆಲೆ ಎದ್ದು ನಿಂತು ಮಾತನಾಡಿದರು)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಧೈರ್ಯ ಇದ್ದರೆ ಮಾತನಾಡಿ, ನಿಮಗೆ ಬೇಡ ಎಂದವರು ಯಾರು?

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಚರ್ಚೆ ಆಗುತ್ತಿಲ್ಲ.. . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸತ್ಯ ಹೇಳಿದರೆ ಮೈ ಪರಚಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಡಾ॥ ವೈ.ಎ.ನಾರಾಯಣ ಸ್ವಾಮಿಯವರೇ, ನಿಮಗೆ ಇಷ್ಟಬಂದಂತೆ ಹೇಳುವುದೇನು. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಇಲ್ಲಿ ಆ ಪಕ್ಷ, ಈ ಪಕ್ಷ ಎನ್ನದೇ ಎಲ್ಲಾ ಗೌರವಾನ್ವಿತ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರಿಂದ ಈ ರೀತಿಯ ಪ್ರಚೋದನೆಯ ಶಬ್ಧಗಳನ್ನು, ನಾವ್ಯಾರೂ ನಿರೀಕ್ಷೆ ಮಾಡಿರಲಿಲ್ಲ. ಅವರ ಸ್ಥಾನ-ಮಾನಗಳು ತುಂಬಾ ದೊಡ್ಡದು. ಅವರು ಅವರ ಅಂತಸ್ತಿಗೆ ತಕ್ಕಂತೆ ಮಾತನಾಡಬೇಕು. ಅವರು provoking ಆಗಿ ಮಾತನಾಡುವುದಾದರೆ ಹೇಗೆ? ನಮಗೂ ಕೂಡ ಮಾತನಾಡಲು ಅವಕಾಶ ಕೊಡಿ, ಮಾತನಾಡುತ್ತೇವೆ; ನಾವು ತಯಾರಿದ್ದೇವೆ. ನಿಮಗಿಂತ ಕಿರಿಯ ಸದಸ್ಯರೆಲ್ಲಾ beautiful ಆಗಿ ಮಾತನಾಡಿದ್ದಾರೆ, ಅವರು ಈ ರೀತಿ ಮಾತನಾಡಲಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಧಾರಾಳವಾಗಿ ಮಾತನಾಡಬಹುದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ನಿಮ್ಮ ಪಕ್ಷದ ಅನಿಲ್‌ಕುಮಾರ್‌ರವರು ಮಾತನಾಡಿದರು, ಅದಕ್ಕೆ ನಾವು ವಿರೋಧ ಮಾಡಿದ್ದೇವೆಯೇ?

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಸದನದಲ್ಲಿ ಒಮ್ಮೆಲೆ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:-** ಏನ್ರೀ, ಇದೇನು ಕುರಿ ದೊಡ್ಡಿಯೇ? ನಿಮಗೆ ಎಷ್ಟು ಬಾರಿ ಹೇಳುವುದು. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಆಯನೂರು ಮಂಜುನಾಥ್ ರವರೇ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ ಒಂದು ಸಂಘರ್ಷ ನಡೆಯಿತು. ಅವರವರ ನಿಲುವಿಗೆ ಅವರವರು ಅಂಟುಕೊಂಡಿದ್ದೇವೆ. ಇದರ ಮಧ್ಯೆ ನಮ್ಮ ಹಿರಿಯರಾದಂಥ ಮಾನ್ಯ ಅಡಗೂರು ಹೆಚ್.ವಿಶ್ವನಾಥ್‌ರವರು ಒಂದು ಸೌಹಾರ್ದಯುತವಾದಂಥ ಒಂದು ಸಲಹೆಯನ್ನು ಕೊಟ್ಟರು. ಆ ಹಿನ್ನೆಲೆಯಲ್ಲಿ ನಾವು ಸದನವನ್ನು ನೋಡುತ್ತಿದ್ದೇವೆ. ಹಾಗಾಗಿ, ನಾವು ನಿನ್ನೆ ಮತ್ತು ಮೊನ್ನೆಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಅನಗತ್ಯವಾಗಿ ನಮ್ಮನ್ನು ಎಷ್ಟೇ ಪ್ರಚೋದನೆಯನ್ನು ಮಾಡಿದರೂ ಕೂಡ ಎದ್ದುನಿಂತಿಲ್ಲ. ಅವರಷ್ಟು ಅಲ್ಲದೇ ಇದ್ದರೂ ಸ್ವಲ್ಪ ಕಡಿಮೆಯಾದರೂ ಚಿಂತೆ ಇಲ್ಲ, ನಮಗೆ ವಾಪಸ್ಸು ಬ್ಯಾಟ್ ಹೊಡೆಯುವುದಕ್ಕೆ ಬರುತ್ತದೆ. ಆದರೆ ಒಂದು ವಾತಾವರಣ. . .

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರೇ, ತಾವು ಒಮ್ಮೆ ಅದನ್ನು ರಿಪೀಟ್ ಮಾಡಿ.

**ಶ್ರೀ ಆಯನೂರು ಮಂಜುನಾಥ್:-** ಅಷ್ಟು ಅಲ್ಲದಿದ್ದರೂ ನಮಗೆ ಕಡಿಮೆ ಮಾಡುವುದಕ್ಕಾದರೂ ಬರುತ್ತದೆ, ಇದು ಸ್ಪಷ್ಟವಾಗಿ ಕೇಳಿಸಿತೋ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬ್ಯಾಟಿಂಗ್ ಮಾಡಲು ನಾವು ಕ್ರಿಕೆಟ್ ಪ್ಲೇಯರ್ ಅಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಭಾಷೆಯನ್ನು ಅವರು ಹೇಗೆ ಬೇಕಾದರೂ ಉಪಯೋಗಿಸಬಹುದು. ಅವರು **XXX** ಮತ್ತೊಂದು ಹೆಸರನ್ನು ಹೇಳಿದರು. ಅದಕ್ಕೆ ನಾವು ಯಾವತ್ತಾದರೂ ಮಾತನಾಡಿದ್ದೇವೆಯೇ? ಅವರು ಒಬ್ಬರು ವಿರೋಧ ಪಕ್ಷದ ನಾಯಕರು. ನಾವು ಅವರನ್ನು ಮೇಲ್ಮಟ್ಟದಲ್ಲಿ ನೋಡುತ್ತಿದ್ದೇವೆ. ಆದರೆ ಆ ಮನುಷ್ಯ ಕೆಳಗಡೆ ಇಳಿಯುತ್ತಿಲ್ಲ, ಅವರು ಎಷ್ಟು ಕೆಳಗಡೆ ಇಳಿಯುತ್ತಾರೋ ಎಂದು ಬಿಟ್ಟೆವು. ಈಗ ಪ್ರಶ್ನೆ ಇರುವುದೇನೆಂದರೆ, ಮಾನ್ಯ ಸಭಾಪತಿಯವರೇ, ಈಗ ತಾವು ಕೂಡ Adjournment Motion ನ್ನು reject ಮಾಡಿದ ಮೇಲೆ ಒಂದು ಸೌಹಾರ್ದಯುತವಾದ ವಾತಾವರಣ ನಿರ್ಮಾಣವಾಗಿ, ಒಂದು ಇತ್ಯರ್ಥವಾಗಲಿ ಎಂದು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇತ್ಯರ್ಥವಾಗುವುದು ಬೇಡವೆಂದು ಅವರ ಮನಸ್ಸಿನಲ್ಲಿದ್ದರೆ, ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನಮಗೂ ಅವಕಾಶ ಕೊಡಿ. ನಮಗೂ ವಾಪಸ್ಸು ಮಾತನಾಡುವುದಕ್ಕೆ ಬರುತ್ತದೆ. ನಾವು ಬಾಯಿ ಮುಚ್ಚಿಕೊಂಡು ಕುಳಿತಿರುವುದು, ನಮಗೆ ವಾಪಸ್ಸು ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಅಲ್ಲ, ಒಂದು ಒಳ್ಳೆಯ ವಾತಾವರಣ ಬರಲಿ ಎಂದು ಸುಮ್ಮನೆ ಕುಳಿತಿದ್ದೆವು. ಆಯಿತು, ಇದು ಸಂಸದೀಯ ವ್ಯವಸ್ಥೆ. ಅವರು ತಪ್ಪು ಮಾಡಬಹುದು, ನಾವೂ ಕೂಡ ತಪ್ಪು ಮಾಡಬಹುದು. ಆದರೆ ಜೊತೆಗೂಡಿ ಮುಂದೆ ಸಾಗಬೇಕಾಗಿರುತ್ತದೆ. ಎಲ್ಲಿಂದ ಎಲ್ಲಿಗೋ ಹೇಳಿದರೆ ಹೇಗೆ? ನಮಗೂ ಕೂಡ ಬಹಳ ಹೇಳುವುದು ಇದೆ. ಕೊನೆಗೆ ಒಂದು ಮಾತನ್ನು ಹೇಳುವುದೇನೆಂದರೆ, ನಾವೆಲ್ಲರೂ ಸೇರಿ ಒಂದು atmosphere ಮಾಡೋಣ. ಒಂದು ಸೌಹಾರ್ದಯುತ ವಾತಾವರಣ ನಿರ್ಮಾಣ ಮಾಡೋಣ.

**ಸಭಾಪತಿಯವರು:-** ಹೌದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇಲ್ಲವೇ ಇದು ಹೀಗೆಯೇ ಮುಂದುವರೆದರೆ ಇದಕ್ಕೆ end ಇಲ್ಲವೇ? ಪೂರ್ತಿ lock ಆಗಿದೆಯೇ, ಇದು dead lock ಆಗಿದೆಯೇ ಹಾಗಾದರೆ, ತಾರೀಖು 25ರವರೆಗೂ ಹೀಗೆಯೇ ನಡೆಯಲಿ, ಯಾರು ಬೇಡ ಅನ್ನುತ್ತಾರೆ. ಒಂದು line

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

ಗೌರವಾನ್ವಿತ ರಾಜ್ಯಪಾಲರ ವಂದನಾ ನಿರ್ಣಯವನ್ನು ಕಳುಹಿಸಿಕೊಟ್ಟರೆ, constitutional obligation ಮುಗಿಯಿತು. ಆ ರೀತಿ ಆಗುವುದು ಬೇಡ ಎನ್ನುವುದು ನನ್ನ ಸಲಹೆ.

**Mr. CHAIRMAN:-** correct.

(ಮುಂದು)

(073)17.2.2022/5.20/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ:-** ಅದಕ್ಕೋಸ್ಕರ ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನೀವು ಟೀಕೆ ಮಾಡಿ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆದರೆ ನಿಮ್ಮ ಟೀಕೆ ಹೇಗಿರಲಿ ಎಂದರೆ ನಾವು ಸ್ವಲ್ಪ enjoy ಮಾಡುವ ಹಾಗಿರಲಿ. ಅದು ಬಿಟ್ಟು ಉರಿದೆದ್ದು ನಿಂತುಕೊಂಡು ಗಲಾಟೆ ಮಾಡುವ ಹಾಗೆ ಮಾಡಬೇಡಿ ಎಂಬ ವಿನಂತಿಯನ್ನು ತಮ್ಮ ಮೂಲಕ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಈಗ ಮಾನ್ಯ ವಿರೋಧ ಪಕ್ಷದ ನಾಯಕರೇ, ಬೇಗ ಮಾತನಾಡಿ ಮುಗಿಸಿ. ಏಕೆಂದರೆ ಈಗಾಗಲೇ ಈ ವಿಚಾರದ ಬಗ್ಗೆ ಮಾತನಾಡಲು ಪ್ರಾರಂಭಿಸಿ ಸುಮಾರು ಎರಡು ಗಂಟೆಗಳಾಯಿತು.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನೇನು provoke ಮಾಡಬೇಕೆಂದು ಎದ್ದೇಳಿಲ್ಲ. ಗೃಹ ಸಚಿವರು ಬಂದು ಆ ರೀತಿ ಹೇಳಿದಾಗ; ನಾವೇನು ರಣಹೇಡಿಗಳಲ್ಲ, ನಾವು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಇತಿಹಾಸಕ್ಕೆ ಹೋದಾಗ ನಾವೂ ಇತಿಹಾಸ ಹೇಳಬೇಕಾಗುತ್ತದೆ. ಏಕೆಂದರೆ ಇತಿಹಾಸವನ್ನು ತಿದ್ದಿ ತಿದ್ದಿ ಬಿಟ್ಟಿರುವವರು ಇವರು. ಅವರು ಹೇಳುತ್ತಾರೆ, ನಿನ್ನೆ ನಾನೇನೋ **XXX** ಎಂದು ಹೇಳಿದೆನಂತೆ. ಹೇಳಿದೆ. ಅದೇನು

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

unparliamentary ಶಬ್ಧವೇ? ನಾಗಪುರ ಎಂದು ಹೇಳಿದರೂ ಇವರು ಕುಣಿದಾಡುತ್ತಾರೆ. ಆರ್.ಎಸ್.ಎಸ್ ಎಂದರೆ ಬೇಕಾದರೆ ಇವರು ಕುಣಿದಾಡಲಿ. ಏಕೆಂದರೆ ಅದು ಬೇರೆ ಪ್ರಶ್ನೆ.

**ಶ್ರೀ ಆಯನೂರು ಮಂಜುನಾಥ(ಪದವೀಧರರ ಕ್ಷೇತ್ರ):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮುಂದೆ ನಾವು ಕೊತ್ವಾಲಪುರದ ಬಗ್ಗೆ ಮಾತನಾಡುತ್ತೇವೆ. ನಮಗದು ಬೇಡ. ಸುಮ್ಮನೇ ಕೆಣಕಬೇಡಿ. ನಮಗೂ ಇತಿಹಾಸ ಗೊತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಆಯಿತು.

**ಶ್ರೀ ಆಯನೂರು ಮಂಜುನಾಥ:-** ನಾವು ಕೊತ್ವಾಲಪುರ ಎಂದು ಹೇಳುತ್ತೇವೆ, ಕೊತ್ವಾಲಪುರದ ಪ್ರಜೆಗಳು ಎಂದು ಹೇಳುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಆಯಿತು ಹೇಳಿ.

**ಶ್ರೀ ಆಯನೂರು ಮಂಜುನಾಥ:-** ಕೊತ್ವಾಲಪುರದಲ್ಲಿ ಹೇಗೆ ಬದುಕಿದ್ದೆವು ಎಂದು ಹೇಳುತ್ತೇವೆ. ನಮ್ಮ ಹತ್ತಿರವೂ ಬಹಳ ಇದೆ. ಬೇಡ ಅದು ಅಗತ್ಯವಿಲ್ಲ. ಸಂಸದೀಯ ಭಾಷೆ ಮೇಲೆ ಚರ್ಚೆ ಮಾಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೊತ್ವಾಲಪುರದ ಕೊತ್ವಾಲರಿಗೆಲ್ಲಾ ಆಶೀರ್ವಾದ ಮಾಡಿದವರು ಯಾರೆಂದು ಕೇಳಿ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ಪೂರ್ವಾಗ್ರಹಪೀಡಿತರಿಗೆ (ಗೊಂದಲ) ಶಿವಮೊಗ್ಗದಲ್ಲಿ ಕೊತ್ವಾಲಪುರದವರನ್ನು ಬೆಳೆಸಿದವರು ಯಾರೆಂದು ಕೇಳಿ. ಶಿವಮೊಗ್ಗದಲ್ಲಿ ಬೆಳೆಸಿ ಬೆಂಗಳೂರಿಗೆ ತಂದವರು ಯಾರೆಂದು ಕೇಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರನ್ನೆಲ್ಲಾ ಬೆಳೆಸಿದವರು ಇವರೇ, (ಗೊಂದಲ)

**ಶ್ರೀ ಆಯನೂರು ಮಂಜುನಾಥ:-** ನಾವು ನಾಗಪುರದವರೇ, ಕೊತ್ವಾಲಪುರದವರಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರೆಲ್ಲಾ petty offenders, ಅವರನ್ನು ಬೆಳೆಸಿ ಬೆಂಗಳೂರಿಗೆ ಕಳುಹಿಸಿದವರು ನೀವೇ. (ಗೊಂದಲ)

**ಶ್ರೀ ಆಯನೂರು ಮಂಜುನಾಥ:-** ಕೊತ್ವಾಲಪುರದವರಲ್ಲ, ನಾವು ಯಾರಿಗೂ ಚಮಚಾಗಳಾಗಿದ್ದವರಲ್ಲ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಚರ್ಚೆ ಮಾಡುವುದಕ್ಕೆ ಬರಲಿಲ್ಲ ಎಂದು ಹೇಳಿದಾಗ;

**ಶ್ರೀ ಆಯನೂರು ಮಂಜುನಾಥ:-** ಯಾರಿಗೋ ಮಸ್ಕಾ ಹೊಡೆದುಕೊಂಡು ಸದನಕ್ಕೆ ಬಂದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾತನಾಡುವುದಕ್ಕೆ ಬರಲಿಲ್ಲವೆಂದರೆ ವೈಯಕ್ತಿಕವಾದ ಆಪಾದನೆ ಮಾಡುವುದಕ್ಕೆ ಬರುತ್ತಾರೆ. ನಾವು ಅದಕ್ಕೂ ತಯಾರು. ಅವರು ಉತ್ತರ ಕೊಡಲಿ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ:-** ಸದನಕ್ಕೆ ಯಾರನ್ನೂ beg ಮಾಡಿಕೊಂಡು ಬಂದಿಲ್ಲ. ಕೊತ್ವಾಲಪುರದವರಿಗೆ ಚುನಾವಣೆ ಗೆಲ್ಲುವ ತಾಕತ್ತಿದೆ. (ಗೊಂದಲ) ಯೋಗ್ಯತೆ ಅರ್ಹತೆ ಇದೆಯೇ? (ಗೊಂದಲ) ಚುನಾವಣೆಯಲ್ಲಿ ಗೆದ್ದು ಬರುತ್ತೇವೆ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ:-** ತಾಕತ್ತಿದೆ. ನಿಮ್ಮ ಹಾಗೆ ಚಮಚಾಗಿರಿ ಮಾಡುವುದಿಲ್ಲ. ನಾವು polish ಮಾಡಿ ಬರುವುದಿಲ್ಲ. (ಗೊಂದಲ) ಚುನಾವಣೆಯಲ್ಲಿ ಗೆದ್ದು ಬರುತ್ತೇವೆ. ಕಂಡವರ

ಮನೆ ಬಾಗಿಲು ಕಾಯುವುದಿಲ್ಲ, (ಗೊಂದಲ) ಕಂಡವರ ಮನೆ ಬಾಗಿಲಿನಲ್ಲಿ ಸಲಾಂ ಹೊಡೆದುಕೊಂಡಿರಲಿಲ್ಲ. (ಗೊಂದಲ) ನಿಮ್ಮ ನಾಯಕರುಗಳ ತರಹ beg ಮಾಡಿ ಬರುವುದಿಲ್ಲ. ಕೊತ್ವಾಲಪುರದವರ ಹತ್ತಿರ ಪಾಠ ಕೇಳಬೇಕಾಗಿಲ್ಲ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು yield ಆಗುತ್ತಿಲ್ಲ, ಅವರನ್ನು ಕೂರಿಸಿ. (ಗೊಂದಲ) ಅವರಿಗೆ ಮಾತನಾಡುವುದಕ್ಕೆ ಆಮೇಲೆ ಅವಕಾಶ ಕೊಡಿ (ಗೊಂದಲ)

**ಸಭಾಪತಿಯವರು:-** ಮಾನ್ಯ ಆಯನೂರ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರು yield ಆಗಿಲ್ಲ, ತಾವು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ನಸೀರ್ ಅಹಮದ್:-** ಶ್ರೀ ಬಂಗಾರಪ್ಪನವರಿಗೆ, ಮಾನ್ಯ ಯಡಿಯೂರಪ್ಪನವರಿಗೆ, ಮಾನ್ಯ ಈಶ್ವರಪ್ಪನವರಿಗೆ, ಮಾನ್ಯ ದೇವೇಗೌಡರಿಗೆ ಕಾಂಗ್ರೆಸ್‌ನಲ್ಲಿ ಎಷ್ಟು ಸಲ

(ಗೊಂದಲ)

ಶ್ರೀ ಆಯನೂರು ಮಂಜುನಾಥ:- ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥ್‌ರವರೇ, . . .

**ಶ್ರೀ ಆಯನೂರು ಮಂಜುನಾಥ:-** (ಗೊಂದಲ) ಹಿಂಬಾಲಕರು ನೀವು. ಭಾಷೆ ಸರಿ ಮಾಡಿಕೊಳ್ಳುವುದಕ್ಕೆ ಹೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಭಾಷೆ ಸರಿ ಮಾಡಿಕೊಳ್ಳುವುದಕ್ಕೆ **XXX XXX** ಹೇಳಿ. ನಮಗೇಕೆ ಹೇಳುತ್ತೀರಿ?

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

(ಗೊಂದಲ)

**ಶ್ರೀ ಸಿ.ಸಿ ಪಾಟೀಲ್:-** ಇವರು ಏನು ಮಾತನಾಡುತ್ತಿದ್ದಾರೆ?

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ನಿಮ್ಮ culture ಅನ್ನು ಸುಧಾರಿಸಿಕೊಳ್ಳಿ (ಗೊಂದಲ) ಕಾಂಗ್ರೆಸ್‌ನ culture ಏನೆಂದು ದೇಶಕ್ಕೆ ಚೆನ್ನಾಗಿ ಗೊತ್ತಿದೆ

(ಗೊಂದಲ)

**ಶ್ರೀ ಆಯನೂರು ಮಂಜುನಾಥ:-** ಈ ಭಾಷೆ ನಡೆಯುವುದಕ್ಕೆ ಬಿಡುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಸರ್ಕಾರಕ್ಕೆ ಉತ್ತರ ಕೊಡುವ ಯೋಗ್ಯತೆ ಇಲ್ಲ. ವೈಯಕ್ತಿಕ ಟೀಕೆ ಟಿಪ್ಪಣಿ ಮಾಡುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ ಕೇಳಿ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:-** ಈ ರೀತಿಯ ಉದ್ಧಟತನಕ್ಕೆ ಜನರು ದೇಶದಲ್ಲಿ ಚೆನ್ನಾಗಿ ಪಾಠ ಕಲಿಸಿದ್ದಾರೆ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಎದ್ದು ನಿಂತು ಮಾತನಾಡಲನುವಾದರು)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಪೀಠದಲ್ಲಿ ನಾನು ಎದ್ದು ನಿಂತಾಗಲೂ ಮಾತನಾಡುತ್ತೀರಲ್ಲಾ? ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಮಲ್ಕಾಪುರೆಯವರು ಕೇಳಿದ್ದು ನನ್ನ ಮನಸ್ಸಿನಲ್ಲಿ ಮೊದಲಿನಿಂದಲೂ ಇತ್ತು. ಈ ಸದನವನ್ನು ಸತ್ಸಂಪ್ರದಾಯಕ್ಕೆ ತೆಗೆದುಕೊಂಡು ಹೋಗಬೇಕು. ಎಲ್ಲರ ಮನಸ್ಸಿನಲ್ಲಿದ್ದಂತಹ ನೋವನ್ನು ಹೊರಗೆ ಹಾಕಬೇಕು, ಒಳ್ಳೆಯ

ವಾತಾವರಣವನ್ನು ನಿರ್ಮಾಣ ಮಾಡಿ ಸದನವನ್ನು ನಡೆಸಬೇಕೆಂಬ ಸದುದ್ದೇಶದಿಂದ ನಾನು ಇಷ್ಟು ಸಮಯದವರೆಗೆ ಎರಡು ಗಂಟೆ 15 ನಿಮಿಷದಿಂದ ಇಲ್ಲಿ ಕುಳಿತಿದ್ದೇನೆ. ತಾವು ವಿಚಾರ ಮಾಡಬೇಕು. ಒಬ್ಬರ ಮೇಲೊಬ್ಬರು ಆಪಾದನೆ ಮಾಡಿ provoke ಮಾಡುವ ಕೆಲಸ ಮಾಡಿದರೆ ಸದನವನ್ನು ಹೇಗೆ ನಡೆಸಬೇಕು? ದಯಮಾಡಿ ತಮಗೆಲ್ಲಾ ವಿನಂತಿ ಮಾಡಿಕೊಳ್ಳುತ್ತೇನೆ, ಅನಾವಶ್ಯಕವಾಗಿ ಯಾರೂ ಪ್ರಚೋದನಕಾರಿ ಭಾಷಣ ಮಾಡಬೇಡಿ. ಸದನವನ್ನು ನಡೆಸೋಣ. ರಾತ್ರಿ 10 ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಆದರೆ ಇಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಒಂದು ಒಳ್ಳೆಯ ಸಂದೇಶ ಕಳುಹಿಸುವಲ್ಲಿ ದಯಮಾಡಿ ಸಹಕಾರ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ರಾತ್ರಿ 10 ಗಂಟೆಯವರೆಗೂ ಸದನವನ್ನು ನಡೆಸಿ.

**ಶ್ರೀ ರಘುನಾಥ ರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೇ , . . .

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಮಲ್ಕಾಪುರೆಯವರೇ, ಒಂದು ನಿಮಿಷ ಕೇಳಿ . . .

(ಗೊಂದಲ)

**ಶ್ರೀ ರಘುನಾಥ ರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೇ, ಅವರು ಅವರ ಘನತೆಗೆ ತಕ್ಕ ಹಾಗೆ ಮಾತನಾಡಲಿ. ಅವರು ರಾತ್ರಿ 10 ಗಂಟೆಯವರೆಗೆ ಮಾತನಾಡಲಿ ನಾವು ರಾತ್ರಿ 12 ಗಂಟೆಯವರೆಗೆ ಕೇಳುತ್ತೇವೆ. (ಗೊಂದಲ)

**ಶ್ರೀ ಎನ್.ರವಿ ಕುಮಾರ್:-** ಮಾನ್ಯ ಸಭಾಪತಿಯವರೆ, ನೀವು ತೆಗೆದುಕೊಂಡಿರುವ ಕ್ರಮವನ್ನು ನಾವು ಸ್ವಾಗತ ಮಾಡುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ದಯಮಾಡಿ ಇದನ್ನು ಸೌಹಾರ್ದಯುತವಾಗಿ ಮುಗಿಸಬೇಕು. ಮುಗಿಸಿ.

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಬೇಕಾದ ಹಾಗೆ ಟೀಕೆ ಟಿಪ್ಪಣಿ ಮಾಡಲಿ. ಆದರೆ ಸಂಸದೀಯ ವ್ಯವಹಾರದಲ್ಲಿ (ಗೊಂದಲ) ಭಾಷೆಗಳ ಮೇಲೆ ಹಿಡಿತವಿರಲಿ. ನಾವು-ನೀವು ಉತ್ತರ ಕರ್ನಾಟಕ ಭಾಗದಿಂದ ಬಂದವರು. "ಸೌತೇಕಾಯಿ ತಿನ್ನಬೇಡ ಎಂದರೂ ಎದ್ದು ಎದ್ದು ಕೂತು ತಿಂದೆ" ಎಂಬಂತೆ ಆಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಚರ್ಚೆಯನ್ನು ಮುಂದುವರೆಸುವುದು ಬೇಡ. ನಮ್ಮ ಒಕ್ಕೊರಲಿನ ಮನವಿ ಇದೆ. (ಗೊಂದಲ) ಇದನ್ನು ಮುಗಿಸಿಬಿಡಿ. ಏತಕ್ಕೆ ನಡೆಸುತ್ತೀರಿ? (ಗೊಂದಲ) ಮುಖ್ಯಮಂತ್ರಿಯವರು ಮತ್ತು ವಿರೋಧ ಪಕ್ಷದ ನಾಯಕರನ್ನು ಕರೆಸಿ ಸಮಾಧಾನಕರವಾಗಿ ಮುಗಿಸಿ ಎಂದು ಹೇಳಿದ್ದಾರೆ. (ಗೊಂದಲ)

**ಸಭಾಪತಿಯವರು:-** ಯಾರು ಮಾಡುವವರು?

**ಶ್ರೀ ಎಸ್.ವ್ಹಿ. ಸಂಕನೂರ:-** ತಾವು ಸಭಾಪತಿಗಳಾಗಿದ್ದೀರಿ (ಗೊಂದಲ)

**ಸಭಾಪತಿಯವರು:-** ಅದನ್ನೇ ಕೇಳುತ್ತಿದ್ದೇನೆ. ಕೇಳುವುದಕ್ಕೆ ನೀವೆಲ್ಲಿ ಬಿಡುತ್ತೀರಿ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ಚರ್ಚೆ ಸಾಕು. ಏನನ್ನು ಕೇಳಬೇಕು?

**ಸಭಾಪತಿಯವರು:-** ಇದು ಪ್ರಜಾಪ್ರಭುತ್ವ, ಎಲ್ಲರಿಗೂ ಅಷ್ಟೇ ಅಧಿಕಾರ ಇದೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಸೌಹಾರ್ದಯುತವಾಗಿ ಮುಗಿಸಿ ಎಂದು ನಿಮಗೆ ಜವಾಬ್ದಾರಿ ಕೊಟ್ಟಿದ್ದಾರೆ. ಮತ್ತೆ ಈ ಚರ್ಚೆ ಏತಕ್ಕೆ? ಇದು ಬೇಡ, ನಮ್ಮ ಮನಸ್ಸಿಗೆ ನೋವಾಗುತ್ತದೆ. ಶಬ್ದ ಕೇಳುವುದಕ್ಕೆ ನಮ್ಮ ಮನಸ್ಸಿಗೆ ನೋವಾಗುತ್ತದೆ. ಸಾಕು ಮುಗಿಸಿ. ದಯವಿಟ್ಟು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ.

**ಸಭಾಪತಿಯವರು:-** ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ, ಸಾಕು ಇದನ್ನು ಮುಗಿಸಿಬಿಡಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಮಂತ್ರಿಗಳು ಯಾರೋ ಪದ ಬಳಸುವಾಗ ಹಿಡಿತವಿರಲಿ ಎಂದು ಹೇಳಿದರು. Hon'ble Law and Parliamentary Affairs Minister ಇದ್ದರೆ ಚೆನ್ನಾಗಿರುತ್ತಿತ್ತು. "Parliamentary Expressions" ಎಂಬ ಒಂದು ಪುಸ್ತಕವಿದೆ. ನಾನು ಪದ ಬಳಸುತ್ತಿರುವುದು, ಅದರಲ್ಲಿ unparliamentary ಅಂತಹದ್ದು ಏನಾದರೂ ಇದ್ದರೆ ನಾನು ಈ ಸದನಕ್ಕೆ ರಾಜೀನಾಮೆ ಕೊಡುತ್ತೇನೆ. ಮಂತ್ರಿಯವರು ಅವರ ಸ್ಥಾನಕ್ಕೆ ಏನಾದರೂ ರಾಜೀನಾಮೆ ಕೊಡುತ್ತಾರಾ ನೋಡಿ. ಅವರು ಅಲ್ಲಿ ಹಿಂದೆ ಹೋಗಿ ಮಾತನಾಡುತ್ತಿದ್ದಾರೆ. ಈ parliament procedures, parliament democracy ಯಲ್ಲಿ "Parliamentary Expressions" ಎಂದು ಇದೆ. ಅದರಲ್ಲಿ ಏನೇನು ಪದಗಳಿವೆ ಅದನ್ನೇ ಉಪಯೋಗಿಸುತ್ತಿದ್ದೇನೆ. ಅದನ್ನು ಬಿಟ್ಟು ಬೇರೆ ನಾನೇನೂ ಉಪಯೋಗಿಸುತ್ತಿಲ್ಲ. ಅವರು ಮೈ ಪರಚಿಕೊಂಡರೆ ನಾನೇನು ಮಾಡುವುದಕ್ಕಾಗುತ್ತದೆ? ನಾನು ಬಂದಿರುವುದೇ ಇಲ್ಲಿ ಪ್ರಶ್ನೆ ಮಾಡುವುದಕ್ಕೆ. ಅದು ಮೇಲಿದ್ದೇನೋ, ಕೆಳಗಿದ್ದೇನೋ ಅಥವಾ ಭೂಮಿ ಕೆಳಗಡೆ ಹೋಗುತ್ತೇನೋ ಅದು ಬೇರೆ ವಿಚಾರ. ನನ್ನ ಪ್ರಶ್ನೆಗಳಿಗೆ ಉತ್ತರ ಕೊಡುವುದನ್ನು ಕಲಿಯಲಿ. ಉತ್ತರ ಇಲ್ಲದಿದ್ದರೆ ವೈಯಕ್ತಿಕವಾಗಿ ಆಪಾದನೆ ಮಾಡಿದರೆ ನಾನು ಜಗ್ಗುವವನಲ್ಲ. 45 ವರ್ಷಗಳಿಂದ ಇಂತಹ ಮೂರ್ಖರುಗಳನ್ನೆಲ್ಲಾ ನೋಡಿಕೊಂಡು ಬಂದಿರುವಂತಹವನು ನಾನು. Open ಆಗಿ fight ಮಾಡಿಕೊಂಡು ಬರುತ್ತಿದ್ದೇನೆ. ಇನ್ನೂ ಮಾಡುತ್ತೇನೆ, ಸಾಯುವವರೆಗೂ ಮಾಡುತ್ತೇನೆ.

(ಗೊಂದಲ)

**ಶ್ರೀ ಸಿ.ಸಿ. ಪಾಟೀಲ್**:- ಅವರೊಬ್ಬರೇ ಬುದ್ಧಿವಂತರೇ?

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಇದು ಮೇಲ್ಮನೆ ಎಂದು ಹೇಳಿದ ಮೇಲೆ ಇದು ಮೂರ್ಖರ ಮನೆಯೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ಎಷ್ಟು ಸಮಯದವರೆಗೆ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಸಿ.ಸಿ. ಪಾಟೀಲ್:-** ಮತ್ತೆ ಮತ್ತೆ ಅದೇ ಭಾಷೆ ಉಪಯೋಗಿಸುತ್ತಾರೆ

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೊಬ್ಬರು ಹೇಳಿದರು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಷಯಕ್ಕೆ ಬನ್ನಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಉತ್ತರ ಕೊಡಬೇಕು. ಅವರು ನಮ್ಮ ಪಕ್ಷಕ್ಕೂ ಬಂದಿದ್ದರು. ನಾನು ಅವರ ಹೆಸರನ್ನು ಹೇಳುತ್ತಿಲ್ಲ. ನಮ್ಮ ಪಾರ್ಟಿಯಲ್ಲಿ ಯಾವ ರೀತಿ ಟಿಕೆಟ್ ತೆಗೆದುಕೊಂಡರು ಎಂಬುದನ್ನು ಹೇಳಿದರೆ ನಾಚಿಕೆಯಾಗುತ್ತದೆ, ನನ್ನ ನಾಲಿಗೆ ಕೊಳಕಾಗುತ್ತದೆ.

**ಸಭಾಪತಿಯವರು:-** ನೋಡಿ ವಿರೋಧ ಪಕ್ಷದ ನಾಯಕರೇ, ಅದು ಬೇಡ, ಆ ವಿಚಾರವನ್ನು ತೆಗೆಯಬೇಡಿ, ಇದನ್ನು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆದರೂ ನಾನು ಹೇಳುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:-** ಅನುಮತಿ ಕೊಟ್ಟಿದ್ದಕ್ಕೆ ನನ್ನದೇ ತಪ್ಪೆನಿಸುತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಪ್ಪಲ್ಲ ಇದು ಸರಿ. ಮಾನ್ಯ ಗೃಹ ಸಚಿವರು ಯಾವ ದಿನಪತ್ರಿಕೆಯಲ್ಲಿ ಬಂದಿದೆ ಎಂದು ಕೇಳುತ್ತಿದ್ದರು. ಕನ್ನಡಪ್ರಭ, ನ್ಯೂಸ್ 18,

ಪ್ರಜಾವಾಣಿ ದಿನಪತ್ರಿಕೆಗಳಲ್ಲೆಲ್ಲಾ ಬಂದಿದೆ. ಸನ್ಮಾನ್ಯ ಮಂತ್ರಿಗಳಾದ ಈಶ್ವರಪ್ಪನವರು ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿರುವುದು ಬಹಳ ಸ್ಪಷ್ಟವಾಗಿದೆ. ಬೆಳಗ್ಗೆ Law and Parliamentary Affairs Minister ಮಾತನಾಡುವಾಗ ಅವರು ಆ ರೀತಿ ಏನೂ ಹೇಳಿಲ್ಲ, interaction ಮಾಡುವಾಗ ಹೇಳಿದರು ಎಂದು ಹೇಳಿದರು. ಮಾಧ್ಯಮದವರ ಮೇಲೆ ಆಪಾದನೆ ಹೊರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಾಧ್ಯಮದವರ ಹತ್ತಿರ interaction ಆಗುತ್ತದೆಯೇ ಅಥವಾ ಮಾಧ್ಯಮದ ಮುಂದೆ ಹೇಳಿಕೆಗಳನ್ನು ಕೊಡುತ್ತಾರೆಯೇ? ಏಕೆಂದರೆ, ಮಾಧ್ಯಮದ ಹತ್ತಿರ interaction ಆಗುವಾಗ ಅದು ಖಾಸಗಿಯಾಗಿ ಕೊಡಬೇಕು. ಆದರೆ ಅದು ಖಾಸಗಿಯಲ್ಲ. ಎಲ್ಲಾ ಮಾಧ್ಯಮದವರೂ ಅದನ್ನು ಈಗಾಗಲೇ ಪ್ರಕಟಣೆ ಮಾಡಿದ್ದಾರೆ. ಆದ್ದರಿಂದ ರಾಷ್ಟ್ರಕ್ಕೆ ದೊಡ್ಡ ಅಗೌರವವನ್ನು ತೋರಿಸಿರುವಂತಹವರು ಇವರೇ. ಆದ್ದರಿಂದ ಇವರು ನಮಗೆ ಹೇಳುವುದಕ್ಕೆ ಬರುವುದು ಬೇಡ. ನಾವು ಎಲ್ಲಿಯೂ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

(ಮುಂದು)

(74) ಎಸ್‌ಪಿಆರ್/ಎಕೆ/5:30/17/02/2022 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಯಾರು ಸ್ವಾತಂತ್ರ್ಯ ಹೋರಾಟದಲ್ಲಿರಲಿಲ್ಲ; ಯಾರು ಮಹಾತ್ಮಾ ಗಾಂಧೀಯವರ ಕೊಲೆಗೆ ಪಾತ್ರರಾಗಿದ್ದರು ಅವರುಗಳು ಮಾತ್ರವೇ ತಾವುಗಳು ದೇಶಭಕ್ತ ಹಾಗೂ ತಾಯಿ ಹಾಲು ಕುಡಿದವರಾಗಿದ್ದೇವೆ ಎಂಬ ಸರ್ಟಿಫಿಕೇಟ್‌ಗಳನ್ನು ಹಾಕಿಕೊಳ್ಳಬೇಕು. ಹಾಗಾದರೆ, ನಾವು ಯಾವ ಹಾಲನ್ನು ಕುಡಿದಿದ್ದೇವೆ ಎಂದು ಕೇಳಲಿಚ್ಛಿಸುತ್ತೇನೆ. ನಮ್ಮ ಪೂರ್ವಜರು ಬಹಳ ಧೈರ್ಯವಂತರಾಗಿದ್ದು, ಅವರ ಹಾಲನ್ನೇ ನಮ್ಮ ತಾಯಿಯು ಕುಡಿಸಿದ್ದಾರೆ; ನಾವೇನೂ ನರ ಹೇಡಿಗಳಲ್ಲ. ಆದರೆ ಕಾಶ್ಮೀರದಲ್ಲಿ ಎದೆ ಕೊಟ್ಟು ತ್ರಿವರ್ಣ ಧ್ವಜ ಹಾಕಿರುವುದಾಗಿ ಆಡಳಿತ ಪಕ್ಷದ ಸದಸ್ಯರು ಹೇಳಿದರು. 52 ವರ್ಷಗಳ ಕಾಲ ಆರ್.ಎಸ್.ಎಸ್.ಸಂಸ್ಥೆಯ ಕಛೇರಿಯ ಮೇಲೆ ತ್ರಿವರ್ಣ ಧ್ವಜವನ್ನು ಏಕೆ ಹಾಕಲಿಲ್ಲ ಎನ್ನುವುದನ್ನು ಇವರುಗಳು ಪ್ರಶ್ನಿಸಲಿ; ಆಗ ನಾನೊಪ್ಪಿಕೊಳ್ಳುತ್ತೇನೆ. ಹುಬ್ಬಳ್ಳಿಯಲ್ಲಿ ನೀಡಿದ್ದಾಗಿ ನಮ್ಮ ಸಹೋದರಿಯವರು ಈಗಾಗಲೇ ತಿಳಿಸಿದರು. ಅಂದರೆ, ರಾಷ್ಟ್ರಧ್ವಜದ ಮೇಲಿನ ಪ್ರೀತಿಯಿಂದ ಆ ರೀತಿಯಾಗಿ ಮಾಡಿದರೇ ಎಂದು ನಾನು ಕೇಳುತ್ತೇನೆ. ಯಾವುದೋ ಧರ್ಮವನ್ನು ಕೆರಳಿಸುವುದಕ್ಕಾಗಿ ಇವರುಗಳು ಈ ರೀತಿಯಾಗಿ ಮಾಡಿದರು. ರಾಷ್ಟ್ರದ ಸ್ವತಂತ್ರಕ್ಕಾಗಿ

ಎಲ್ಲಾ ಧರ್ಮದವರು ಹೋರಾಟ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಗೋಲ್ವಾಲ್ಕರ್‌ರವರು ಬರೆದಿರುವ **'ಬಂಚ್ ಆಫ್ ಥಾಟ್ಸ್'** ಎಂಬ ಪುಸ್ತಕದ ಪುಟ ಸಂಖ್ಯೆ: 172 ರಲ್ಲಿ ಬರೆದಿರುವುದನ್ನು ಇವರುಗಳು ನೋಡಿ, ಓದಬೇಕು. ಈ ದೇಶದ 'ಮೂರು ಆಂತರಿಕ ವೈರಿಗಳು' ಎಂಬುದಾಗಿ ಅವರು ಉಲ್ಲೇಖಿಸಿದ್ದಾರೆ. ಆ ಪೈಕಿ ಕಮ್ಯೂನಿಷ್ಟ್, ಅಲ್ಪಸಂಖ್ಯಾತರು ಆಗಿದ್ದು, ಇದರ ಬಗ್ಗೆ ಉಲ್ಲೇಖಿಸಿದ್ದಾರೆ. ಈ hidden agenda ವನ್ನು ಅನುಷ್ಠಾನಗೊಳಿಸಲು ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ನಾವುಗಳು ಸುಮ್ಮನೆ ಕುಳಿತುಕೊಳ್ಳಬೇಕೆ? ಈ ದೇಶಕ್ಕಾಗಿ ಪ್ರಾಣ ತೆತ್ತವರ ಪೈಕಿ ಕನಿಷ್ಠ ಒಬ್ಬರ ಹೆಸರನ್ನು ಇವರುಗಳು ತಿಳಿಸಲಿ. ಕ್ಷಮಾಪಣೆ ಕೇಳಿದವರ ಎಲ್ಲರ ಇತಿಹಾಸವು ನಮ್ಮಲ್ಲಿದೆ. ಗುಜರಾತ್ ರಾಜ್ಯದಲ್ಲಿ ಸರ್ದಾರ್ ವಲ್ಲಭಾಯಿ ಪಟೇಲ್‌ರವರ ಹೆಸರಿನಲ್ಲಿ ಒಂದು ದೊಡ್ಡ ಕ್ರೀಡಾಂಗಣವಿತ್ತು. ಇಷ್ಟೆಲ್ಲಾ ಪ್ರೀತಿ ಇದ್ದಿದ್ದರೆ, ಯಾವ ಕಾರಣಕ್ಕಾಗಿ ಅದರ ಹೆಸರನ್ನು ಬದಲಾಯಿಸಿದರು?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವುಗಳು ಸರ್ದಾರ್ ವಲ್ಲಭಾಯಿ ಪಟೇಲ್‌ರವರ ಪ್ರತಿಮೆಯನ್ನೇ ಮಾಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದು ಇಡೀ ಪ್ರಪಂಚದಲ್ಲಿಯೇ ಅತೀ ದೊಡ್ಡದಾದ ಕ್ರೀಡಾಂಗಣವಾಗಿದ್ದು, ಅದನ್ನು 'ಮೋಟೆರಾ' ಕ್ರೀಡಾಂಗಣ ಎಂಬುದಾಗಿಯೂ ಸಹ ಕರೆಯುತ್ತಾರೆ. ಇವರುಗಳಿಗೆ ಇಷ್ಟೊಂದು ಗೌರವವಿದ್ದಿದ್ದರೆ, ಏತಕ್ಕಾಗಿ ಅದರ ಹೆಸರನ್ನು ಬದಲಾಯಿಸಿದರು ಎಂದು ಪ್ರಶ್ನಿಸುತ್ತೇನೆ. ಏಕೆಂದರೆ, ಇವರ ಪಕ್ಷದಲ್ಲಿ ಯಾರೂ ಸಹ ಇಲ್ಲ ; ಕೇವಲ ಬೇರೆಯವರನ್ನು ಎರವಲು ಪಡೆದುಕೊಂಡು ಆ ನಂತರದಲ್ಲಿ ನಾನೇ ಮಾಡಿದ್ದು, ಎಂಬುದಾಗಿ ಹೇಳುತ್ತಾರೆ. **XXX** ಇದಕ್ಕೆ ನಮ್ಮದು ಯಾವುದೇ ಅಭ್ಯಂತರವಿಲ್ಲ. ಆದರೆ, ಅವರು ಉಕ್ಕಿನ ಮನುಷ್ಯ ಅಥವಾ ಲೋಹ ಪುರುಷನಾಗುವುದಕ್ಕೆ ಸಾಧ್ಯವೇ ಇಲ್ಲ. ಯಾರಾದರೂ ಲೋಹ ಪುರುಷರಿದ್ದರೆ, ಅದು ಸರ್ದಾರ್ ವಲ್ಲಭಾಯಿ ಪಟೇಲ್‌ರವರು ಮಾತ್ರವೇ; ಇನ್ಯಾರೂ ಇರುವುದಕ್ಕೆ ಸಾಧ್ಯವೇ ಇಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಮೇಜನ್ನು ತಟ್ಟಿದರು)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

ಇವರುಗಳು ಇದನ್ನು ನಕಲು ಮಾಡುವುದಕ್ಕೆ ಹೋಗುತ್ತಾರೆ. ಆದರೆ, ಇದೆಲ್ಲವೂ ಸಹ ನಡೆಯುವುದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇದು **XXX** ಚರ್ಚೆಯೋ ಅಥವಾ ಈ ಸದನದ ಸೌಹಾರ್ದಯುತ ಚರ್ಚೆಯೋ ತಿಳಿಯುತ್ತಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಕೋತ್ವಾಲ್‌ಪುರ ಚರ್ಚೆಯಾಗಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇದು ಕೋತ್ವಾಲಪುರದ ಚರ್ಚೆಯಾದರೆ, ಇದರ ಬಗ್ಗೆ ನಂತರದಲ್ಲಿ ಮಾತನಾಡೋಣ. ಅವರು ಮಾತನಾಡಿದ ನಂತರ ನನಗೂ ಸಹ ಮಾತನಾಡಲು ಅವಕಾಶವನ್ನು ನೀಡಿ; ನಾವೂ ಸಹ ಮಾತನಾಡುತ್ತೇವೆ. **(ಗೊಂದಲ)** ಇಲ್ಲಿ ಮಾತನಾಡುತ್ತಿರುವ ವಿಷಯ ಮತ್ತು ಉದ್ದೇಶವೇನು?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇವರು ಇತಿಹಾಸ ತಿರುಚುವ ಕೆಲಸವನ್ನು ಮಾಡುತ್ತಿದ್ದಾರೆ.

**ಸಭಾಪತಿಯವರು:-** ಸಾಕು ಮಾಡಿ ; ಅವರು ಯೀಲ್ಡ್ ಆಗಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಶ್ರೀ ಅಡಗೂರ್ ಹೆಚ್.ವಿಶ್ವನಾಥ್ ಹಾಗೂ ತಾವು ಹೇಳಿದ್ದೀರಿ ಎಂದು ನಾನು ಸುಮ್ಮನಿದ್ದೆನು. ಮಿಕ್ಕವರೆಲ್ಲರೂ ಇತಿಹಾಸವನ್ನು ಹೇಳುತ್ತಲೇ ಇದ್ದಾರೆ. ಅವರುಗಳೆಲ್ಲರೂ ಹೇಳುತ್ತಿರುವ ಸುಳ್ಳಿನ ಇತಿಹಾಸವನ್ನು ಕೇಳಿಸಿಕೊಂಡು ನಾನು ಸುಮ್ಮನಿರಲೇ? ಅವರುಗಳು ಮಾತನಾಡುವ ಸಂದರ್ಭದಲ್ಲಿ ಮಧ್ಯದಲ್ಲಿ ನಾನು ಬಾಯಿಯನ್ನು ಹಾಕಬಹುದಾಗಿತ್ತು.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರುಗಳು ಹೇಳಿದ್ದು ಮಾತ್ರವೇ ಸತ್ಯವೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದು ಸತ್ಯವೆಂದು ನಾನು ಹೇಳುತ್ತಿಲ್ಲ. ಈ ಬಗ್ಗೆ ಒಂದು ದಿವಸ ಪೂರ್ತಿ ಚರ್ಚೆ ಮಾಡಿ; ಅದನ್ನು ಕೇಳಲು ನಾವು ತಯಾರಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರುಗಳೇ ಹೇಗೆ ಹೇಳುತ್ತಾರೋ ; ಅದೇ ರೀತಿಯಾಗಿ ನಾವೂ ಸಹ ಹೇಳುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಬಗೆಯ ಚರ್ಚೆಯನ್ನು ನಾವೂ ಮಾಡುತ್ತೇವೆ; ಅವರುಗಳು ಬರಲಿ. **(ಗೊಂದಲ)** ನಾವು ಸುಳ್ಳಿನ ಫ್ಯಾಕ್ಟರಿಯನ್ನು ನಿರ್ಮಿಸಿಲ್ಲ. **(ಗೊಂದಲ)** ನಾನು ಸುಳ್ಳಿನ ಫ್ಯಾಕ್ಟರಿಯಿಂದ ಬಂದವನಲ್ಲ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಸತ್ಯಾಂಶ ಹೇಳಿದ್ದೇವೆ.

**ಸಭಾಪತಿಯವರು:-** ಸಭಾನಾಯಕರು ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, **XXX** ಬಗ್ಗೆ ಮಾತನಾಡುವಾಗ ವಿರೋಧ ಪಕ್ಷದ ನಾಯಕರು ಬಹಳ ವ್ಯಂಗವಾಗಿ ಮಾತನಾಡಿದರು. ಆ ಮಾತನ್ನು ನಾವು ಈಗಲೂ ಸಹ ಹೇಳುತ್ತೇವೆ. ಇತ್ತೀಚಿನ ದಿನಗಳಲ್ಲಿ ನಮ್ಮ ಭಾರತ ದೇಶದಲ್ಲಿ ಮಾತ್ರವಲ್ಲದೇ ಇಡೀ ಪ್ರಪಂಚದಲ್ಲಿಯೇ 'ವಿಶ್ವದ ನಾಯಕ' ಎಂದು ಯಾರನ್ನಾದರೂ ಕರೆದಿದ್ದರೆ, ಅದು ನಮ್ಮ ದೇಶದ **XXX** ಮಾತ್ರವೇ ಆಗಿದ್ದಾರೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ನಮ್ಮ ನಾಯಕ ಅಥವಾ ನಿಮ್ಮ ನಾಯಕ ಎಂಬುದಾಗಿ ಅಲ್ಲ. ಆ ಸ್ಥಾನದಲ್ಲಿ **XXX** ವಿರೋಧ ಪಕ್ಷದ ನಾಯಕರು ಊಹೆ ಮಾಡಿಕೊಳ್ಳಲು ಸಾಧ್ಯವಿದೆಯೇ? **(ಗೊಂದಲ) XXX** ಬಗ್ಗೆ ಮಾತ್ರವೇ ಇಡೀ ಪ್ರಪಂಚವು ಹೆಮ್ಮೆ ಪಡುತ್ತಿದೆ.

**(ಗೊಂದಲ)**

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಸಭಾನಾಯಕರಿಗೆ ಕೈ ಮುಗಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಾಸ್ತವಿಕವಾಗಿ ಸತ್ಯವನ್ನು ಮರೆಮಾಚುವುದಕ್ಕೆ ಸಾಧ್ಯವಿಲ್ಲ. ವಿರೋಧ ಪಕ್ಷದ ನಾಯಕರು ಕೈ ಮುಗಿಯುವುದು ಬೇಡ. **(ಗೊಂದಲ)** ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ...

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, **XXX** ... **(ಗೊಂದಲ) XXX** ...

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿಮರ್ಶೆ ಮಾಡಿ ಎಂದು ನಾನು ಅವರಿಗೆ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನನಗೆ **XXX XXX ರವರಿಗಿಂತ** ದೊಡ್ಡ ನಾಯಕರು.

**(ಗೊಂದಲ)**

**ಶ್ರೀ ಸಿ.ಸಿ.ಪಾಟೀಲ್ :-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, .....

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, **XXX XXX** ಎಂದು ವಿರೋಧ ಪಕ್ಷದ ಮುಖ್ಯ ಸಚೇತಕರು ಹೇಳಿದರು...... ಇದಕ್ಕೆ ನನ್ನದೇನೂ ಪ್ರಶ್ನೆ ಇಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ....

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಇರಲಿ, ಅವರೊಬ್ಬ **XXX** ಆದರೆ **XXX** ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. **(ಗೊಂದಲ)** ಇವತ್ತಿನ ವಾತಾವರಣದಲ್ಲಿ ರಾಷ್ಟ್ರೀಯ ಅಧ್ಯಕ್ಷರಾದ **XXX** ಹೇಳಿದಂತೆಯೇ **XXX** ಮಾಡುತ್ತಿರುವುದು. ಇದು ಅವರಿಗೆ ನೆನಪು ಇರಲಿ. **(ಗೊಂದಲ) XXX XXX** ಫಾಲೋ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನಿಮಗೆ ಇನ್ನು ಎಷ್ಟು ಸಮಯ ಬೇಕು ಎನ್ನುವುದನ್ನು ತಿಳಿಸಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಚಿದಾನಂದ ಎಂ.ಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೌದು **XXX XXX** ಫಾಲೋ ಮಾಡುತ್ತಾರೆ; ಆದರೆ, ಅವರು ಎಲ್ಲಿ ತಪ್ಪು ಮಾಡುತ್ತಾರೆ ಎಂದು ತಿದ್ದುವುದಕ್ಕಾಗಿ ಇವರು ಫಾಲೋ ಮಾಡುತ್ತಿದ್ದಾರೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ನೀಡಿ. ನಾನು ಇಲ್ಲಿಗೆ ಬಂದು ಒಂದೂವರೆ ವರ್ಷಗಳಾಯಿತು. ಆ ಕಡೆ – ಈ ಕಡೆ ನೋಡುವುದರೊಳಗೆ ಒಂದು ವರ್ಷಗಳ ಅವಧಿಯು ದಾಟಿದೆ. ಕಳೆದ ಒಂದೂವರೆ ವರ್ಷದಿಂದ ನಾನು ಇದನ್ನೇ ನೋಡುತ್ತಿದ್ದೇನೆ.

**ಸಭಾಪತಿಯವರು:-** ನೀವು ಏನು ಹೇಳಬೇಕೆಂದುಕೊಂಡಿದ್ದೀರೋ ಅದನ್ನು ಮೊದಲು ಹೇಳಿ ಮಾರಾಯರ್ರೆ !

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಸೌಹಾರ್ದದ ವಾತಾವರಣವನ್ನು ನಿರ್ಮಿಸುವ ದೃಷ್ಟಿಯಲ್ಲಿ, ನಿನ್ನೆಯ ದಿನ ತಾವು ಹೇಳಿದಂತೆ, ಈಗ ಈ ಸದನವನ್ನು ಈ ರೀತಿಯಾಗಿ ಮುನ್ನಡೆಸುತ್ತಿದ್ದೀರಿ. ನಿನ್ನೆಯಷ್ಟೇ ನಾವು ಸಮನ್ವಯದ ಕವಿ ಶ್ರೀ ಚೆನ್ನವೀರ ಕಣವಿಯವರಿಗೆ ಬಹಳ ದೊಡ್ಡ ರೀತಿಯಲ್ಲಿ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೇವೆ. ಅವರದ್ದೇ ಆದ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

***"ನಾವು ಆಡುವ ಮಾತು ಹೀಗಿರಲಿ ಗೆಳೆಯ,***
***ಮೃದು ವಚನ ಮೂಲೋರ್ಕ ಗೆಲ್ಲುವುದು ತಿಳಿಯ,***
***ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ,***
***ಮೂರು ಘಳಿಗೆಯ ಬಾಳು ಮಗಮಗಿಸುತಿರಲಿ'***

ಇಷ್ಟೊಂದು ಹಿರಿಯರೆಲ್ಲಾ ಇರುವ ಸದನದಲ್ಲಿ ಇದರ ವೈಭವ, ಇತಿಹಾಸಗಳ ಬಗ್ಗೆ ಮಾತನಾಡುವವರು ನಾವು; ವಿಧಾನಸೌಧದ ಎದುರುಗಡೆ ಓಡಾಡುವಾಗ ನಾನು ಬಹಳ ಆಸೆಯ ಕಣ್ಣುಗಳಿಂದ ಈ ರಾಜ್ಯದ ಜನ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳನ್ನು ನೋಡುವವರ ಭಾವನೆಯನ್ನು ಅರ್ಥ ಮಾಡಿಕೊಂಡು, ಬಹಳಷ್ಟು ಜವಾಬ್ದಾರಿಯುತವಾಗಿ ನಾವು ಇಲ್ಲಿ ನಡೆದುಕೊಳ್ಳಬೇಕು. ***"ಛೋಟಿ ಮೂಹ್ ಬಡಿ ಬಾತ್"*** ಎನ್ನುವ ಹಿಂದಿಯ ನಾಣ್ಣುಡಿಯಂತೆ ನಾನು ಇಲ್ಲಿ ಮಾತನಾಡುತ್ತಿದ್ದೇನೆ. ನಾನು ಇಲ್ಲಿಗೆ ಬಂದು ಕೇವಲ ಒಂದೂವರೆ ವರ್ಷಗಳಾಗಿವೆ. ಈ ಬಾರಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ 25 ಸದಸ್ಯರು ಆಯ್ಕೆಗೊಂಡು ಇಲ್ಲಿಗೆ ಬಂದಿದ್ದಾರೆ. ನಾನು ಈ ಹಿಂದೆ ಆಯ್ಕೆಗೊಂಡು ಬಂದಾಗ ಕೋರೋನಾ ಸಾಂಕ್ರಾಮಿಕ ಕಾರಣದಿಂದಾಗಿ ಯಾವುದೇ ತರಬೇತಿ ಶಿಬಿರಗಳನ್ನು ಆಯೋಜಿಸಿರಲಿಲ್ಲ. ಇತ್ತೀಚೆಗೆ ಆಯೋಜಿಸಿದ್ದ ತರಬೇತಿ ಶಿಬಿರವು ಮಾತ್ರವೇ ನನಗೆ ದೊರೆತಿದೆ. ಈ ಬಾರಿ ತುಂಬಾ ಜನ ಹೊಸಬರು ಆಯ್ಕೆಗೊಂಡು ಬಂದಿದ್ದಾರೆ. ನಿಯಮಗಳನ್ವಯ ಸದನ ನಡೆಯುತ್ತದೆ ಎಂಬುದಾಗಿ ತರಬೇತಿ ಶಿಬಿರದಲ್ಲಿ ತಿಳಿಸಲಾಗಿತ್ತು. ಈ ರೀತಿಯಾಗಿ ಹೇಳಿದ ನಮ್ಮ 'ಮಾಸ್ಟರ್'..... ಸದನದಲ್ಲಿ ಏನು ಮಾಡಬಾರದು ಎಂದು ತರಬೇತಿ ಶಿಬಿರದಲ್ಲಿ ತಿಳಿಸಲಾಗಿತ್ತೋ ಆದರೆ ಅದನ್ನೇ ಇಲ್ಲಿ ಈಗ ಮಾಡುತ್ತಿದ್ದೇವೆ ಎಂದು ಹೇಳಿದರೆ ಮತ್ತು ಯಾವುದನ್ನು ಮಾಡಬೇಕಿತ್ತೋ ಅದನ್ನು ಮಾಡುತ್ತಿಲ್ಲ ಎನ್ನುವುದಾರೆ,..... ನನ್ನ ಮಾತುಗಳನ್ನು ನಿಲ್ಲಿಸುವುದಕ್ಕೂ ಮೊದಲು ಮತ್ತೆ ನಾನು ಪುನಃ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರು ಸಾಗರದಲ್ಲಿ ಈಜಿ ಬಂದವರಾಗಿದ್ದಾರೆ. ಅವರೊಂದಿಗೆ ಹೋಲಿಕೆ ಮಾಡುವುದಾರೆ, ನಾನೊಂದು ಸಣ್ಣ ನದಿ ಅಥವಾ ಕೆರೆ ಇದ್ದಂತೆ; ಏನು ಬೇಕಾದರೂ ಕರೆಯಬಹುದು. ಪ್ರತಿಪಕ್ಷದ ನಾಯಕರು ಅತ್ಯಂತ ಹಿರಿಯರು ಹಾಗೂ ತಾವು ದಾಖಲೆಯ ಸಭಾಪತಿಗಳಾಗಿದ್ದೀರಿ. ಇಂತಹವರುಗಳೆಲ್ಲರೂ ಉಪಸ್ಥಿತರಿರುವ ಸಭೆಯಲ್ಲಿ ಯಾವುದೇ ಚರ್ಚೆಯು ಅರ್ಥಪೂರ್ಣವಾಗುವ ರೀತಿಯಲ್ಲಿ ನಾವುಗಳು ನಡೆದುಕೊಳ್ಳಲಿಲ್ಲವೆಂದಾದರೆ, ಈ ಮೇಲ್ಮನೆ ಬೇಕು ಎಂದು ಹೇಳುವ ಹಾಗೂ ಜನ ಕೇಳುವ ಪ್ರಶ್ನೆಗೆ ನಾವು ಉತ್ತರ ಕೊಡಲು ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ನಾವು ಹೆಚ್ಚು ಜವಾಬ್ದಾರಿಯುತವಾಗಿ

ವರ್ತಿಸಬೇಕೆಂದು ಒಬ್ಬ ಸಣ್ಣ ಸದಸ್ಯನಾಗಿ, ನಾನು ಎಲ್ಲ ಹಿರಿಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ಹಿಂದಿ ನಾಣ್ಣುಡಿಯನ್ನು ಹೇಳಲಿಚ್ಛಿಸುತ್ತೇನೆ.

***"ಥೋಡೋ ಕಲ್ಕಿ ಬಾತೇ, ಕಲ್ಕಿ ಬಾತ್ ಪುರಾನಿ,***
***ನಯೇ ದೋರ್ ಮೇ ಲಿಖೇಂಗೇ ನಯೀ ಖಹಾನಿ"***

ಈಗ ಹೊಸ ಸದಸ್ಯರುಗಳು ಬಂದಿದ್ದಾರೆ ; ಹೀಗಾಗಿ ಈಗ ನಮಗೆ ಅವಕಾಶ ದೊರೆತಿದೆ. ಅವರುಗಳೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಳ್ಳೆಯ ರೀತಿಯಲ್ಲಿ ಸೌಹಾರ್ಯತಯುತವಾದ ವಾತಾವರಣ ಸೃಷ್ಟಿಸುವ ರೀತಿಯಲ್ಲಿ ಎಲ್ಲರೂ ನಡೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:-** ಸರಿಯಿದೆ. ವಿರೋಧ ಪಕ್ಷದ ನಾಯಕರೇ ನೀವು ಮುಂದುವರೆಸಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ವ್ಯಂಗ್ಯ ಮಾಡಿದೆನು ಎಂದು ಸಭಾನಾಯಕರು ಯಾವ ಕಾರಣಕ್ಕಾಗಿ ಮೇಲೆದ್ದು ಹೇಳಿದರು ಗೊತ್ತಾಗಲಿಲ್ಲ. ನಾನು ಅವರನ್ನು **XXX** ಎಂಬುದಾಗಿ ಕರೆಯಿರಿ ಎಂದು ಹೇಳಿದೆನು – ಇದು ತಪ್ಪೇ? ಅವರಿಗೆ ಈ ರೀತಿಯ ಕೀಳರಿಮೆ ಏಕೆ ಬೇಕು? ಅವರ ಈ ಮನೋಭಾವನೆಗೆ ' ಕೀಳರಿಮೆ' ಎಂತಲೂ ಹಾಗೂ ಆಂಗ್ಲ ಭಾಷೆಯಲ್ಲಿ 'inferiority complex' ಎಂಬುದಾಗಿ ಕರೆಯುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರೇ, ನಾವು ಹೇಳುವುದನ್ನು ಕೇಳಿ ; ನಮಗೆ ಯಾವುದೇ 'ಕೀಳರಿಮೆ' ಇಲ್ಲ ....

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರುಗಳು ಪದೇ ಪದೇ ಅದನ್ನೇ ಹೇಳುತ್ತಿದ್ದಾರೆ. ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಅವರಿಗೆ ಕೀಳರಿಮೆ ಬೇಡ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರ ಬಗ್ಗೆ ನನಗೆ ಪೂರ್ಣ ಗೌರವವಿದೆ. ಅವರು ಮಾತುಗಳನ್ನು ಮುಗಿಸಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಯಾರಿಗೂ ಸಹ ಕೀಳರಿಮೆ ಬೇಡ. ಅವರಿಗೂ ಸಹ ಶಕ್ತಿ ಹಾಗೂ ಬುದ್ಧಿ ಇವೆ. ಅವರಿಗೂ ಸಹ ತರಬೇತಿ ಚೆನ್ನಾಗಿ ಆಗಿದೆ. ಅವರೂ ಸಹ ನಮಗೆ ಉತ್ತರವನ್ನು ನೀಡಲಿ; ಆದರೆ ಯಾವುದನ್ನೇ ಆಗಲೀ ವೈಯಕ್ತಿಕವಾಗಿ ತೆಗೆದುಕೊಳ್ಳುವುದು ಬೇಡ. ಅಷ್ಟೇ ತೀಕ್ಷ್ಣವಾಗಿ ಉತ್ತರ ನೀಡುವ ಶಕ್ತಿಯು ನಮಗಿದೆ. ಶ್ರೀ ಪ್ರತಾಪ್ ಸಿಂಹ ನಾಯಕ್ ಮತ್ತು ಶ್ರೀ ಅರುಣ ರವರಂತಹ ಕೆಲವು ಯುವ ಸದಸ್ಯರು ನಿನ್ನೆಯ ದಿನ ಮಾತನಾಡುತ್ತಿದ್ದರು. ನಾವೇನಾದರೂ ಇನ್ನೂ 500 ವರ್ಷಗಳ ಕಾಲ ಇಲ್ಲಿ ಇರುತ್ತೇವೆಯೇ? ಆದರೆ ಆಡಳಿತ ಪಕ್ಷದವರು ತಾವು 500 ವರ್ಷಗಳ ಕಾಲ ಆಡಳಿತ ಪಕ್ಷದ ಸ್ಥಾನದಲ್ಲಿಯೇ ಇರುತ್ತೇವೆಂದು ಭಾವಿಸಿದ್ದಾರೆ. ಒಂದು ವರ್ಷದ ನಂತರ ಆಡಳಿತ ಪಕ್ಷದವರು ಈ ಭಾಗಕ್ಕೆ ಬರಬೇಕು; ಹೀಗಾಗಿ ಅವರುಗಳು ವಿರೋಧ ಪಕ್ಷದ ಸ್ಥಾನಕ್ಕೆ ಬಂದಾಗ ಏನು ಮಾಡಬೇಕು ಎಂಬುದರ ಬಗ್ಗೆ ಸ್ವಲ್ಪ ತರಬೇತಿಯನ್ನು ಪಡೆದುಕೊಳ್ಳಲಿ. ಅದೇ ರೀತಿಯಾಗಿ ವಿರೋಧ ಪಕ್ಷದ ಭಾಗಕ್ಕೆ ಹೊಸದಾಗಿ ಬಂದಿರುವ ಹೊಸ ಸದಸ್ಯರುಗಳು ವಿರೋಧ ಪಕ್ಷದ ಸ್ಥಾನದಲ್ಲಿ ಹೇಗಿರಬೇಕು; ಸರ್ಕಾರದವರು ಏನು ಮಾಡುತ್ತಾರೆ ಅದಕ್ಕೆ ಪ್ರತಿಕ್ರಿಯಿಸಿ, ಇವರು ಹೇಗೆ ನಡೆದುಕೊಳ್ಳಬೇಕು ಎನ್ನುವ ಬಗ್ಗೆಯೂ ಸಹ ತರಬೇತಿಯನ್ನು ಪಡೆದುಕೊಳ್ಳಲಿ.

ಇಲ್ಲಿರುವ ಪ್ರಶ್ನೆ 'ಈಶ್ವರಪ್ಪ'. ಇದರ ಜೊತೆಗೆ ಅವರು ಪ್ರತಿನಿಧಿಸುವ ಶಿವಮೊಗ್ಗ ಜಿಲ್ಲೆಯಲ್ಲಿ...

(ಮುಂದು)

(075)/17.02.2022/5.40/ಹೆಚ್‌ವಿ:ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):–**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರ ಜಿಲ್ಲೆಯಾಗಿರುವ ಶಿವಮೊಗ್ಗ ಜಿಲ್ಲೆಯಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಕಿತ್ತು ಹಾಕಿ ಕೇಸರಿ ಧ್ವಜವನ್ನು ಹಾರಿಸಿದ್ದಾರೆ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಸುಳ್ಳು ಹೇಳುತ್ತಿದ್ದಾರೆ. ಇದು ಅವರಿಗೆ ಗೌರವ ತರುವಂತಹ ಸಂಗತಿಯಲ್ಲ. ರಾಷ್ಟ್ರಧ್ವಜವನ್ನು ಕೆಳಗೆ ಇಳಿಸಿ ಕೇಸರಿ ಧ್ವಜವನ್ನು ಹಾರಿಸಿರುವುದು ಸುಳ್ಳು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ. ಮಾನ್ಯ ಕೆ.ಎಸ್.ಈಶ್ವರಪ್ಪನವರು ರಾಜೀನಾಮೆ ನೀಡಬೇಕೆಂದು ನಾವು ಕೇಳುತ್ತಿದ್ದೇವೆ. ಅವರು ರಾಜೀನಾಮೆ ನೀಡುವವರೆಗೂ ನಾವು ಪ್ರತಿಭಟನೆ ಮಾಡುತ್ತಿರುತ್ತೇವೆ,

**(ಗೊಂದಲ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಸನ್ಮಾನ್ಯ ಸಭಾಪತಿಯವರೇ, ತಾವು ಸೌಹಾರ್ದ ಚರ್ಚೆಗಾಗಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಆದರೆ, ಅವರು ಪುನಃ ಅಲ್ಲಿಗೇ ಬರುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ನಾನು ಇಲ್ಲಿಗೆ ಬರದೇ, ಅವರಲ್ಲಿಗೆ ಹೋಗುವುದಕ್ಕೆ ಸಾಧ್ಯವೇ? ನನ್ನ ಹೆಣ ಕೂಡ ಅಲ್ಲಿಗೆ ಹೋಗುವುದಿಲ್ಲ. ಅದನ್ನು ಅವರು ಬರೆದಿಟ್ಟುಕೊಳ್ಳಬೇಕು. ಮಾನ್ಯ ಕೆ.ಎಸ್.ಈಶ್ವರಪ್ಪನವರು ಹಾಗೂ ಮಾನ್ಯ ಗೃಹ ಸಚಿವರು ಒಂದೇ ಜಿಲ್ಲೆಯವರು. ಈ ವಾಗ್ವಾದ ಸುಮಾರು ಒಂದೂವರೆ ತಿಂಗಳುಗಳಿಂದ ನಡೆಯುತ್ತಿದೆ. ಇವರು ಏನು ಮಾಡುತ್ತಿದ್ದರು? ಇವರ ಗುಪ್ತಚರ ಇಲಾಖೆಯವರು ಏನು ಮಾಡುತ್ತಿದ್ದರು? ನಿದ್ದೆ ಮಾಡುತ್ತಿದ್ದರೇ? ಅವರಿಗೆ ಗೊತ್ತಾಗಲಿಲ್ಲವೇ? ಕರ್ನಾಟಕದ ಹೆಣ್ಣು ಮಗಳಾದ ದಿಶಾ ರವಿಯವರನ್ನು ರೈತರ ಹೋರಾಟಕ್ಕೆ ಸಂಬಂಧಿಸಿದ ಟೂಲ್ ಕಿಟ್ ರೂಪಿಸುತ್ತಿದ್ದ ಆರೋಪದ ಮೇಲೆ ದೆಹಲಿಯಿಂದ ಪೋಲೀಸರು ಇಲ್ಲಿಗೆ ಬಂದು ಆಕೆಯನ್ನು ಅರೆಸ್ಟ್ ಮಾಡಿಕೊಂಡು ಹೋಗುತ್ತಾರೆ, ಆಗ ಇವರು ಎಲ್ಲಿಗೆ ಹೋಗಿದ್ದರು?

ಸನ್ಮಾನ್ಯ ಸಭಾಪತಿಯವರೇ, ತಲೆಯ ಮೇಲೆ ಬಟ್ಟೆ ಹಾಕಿಕೊಂಡಿದ್ದಾರೆಂದು ಹೆಣ್ಣುಮಕ್ಕಳ ಮೇಲೆ ಬೀದಿಯಲ್ಲಿಯೇ ದೌರ್ಜನ್ಯ ಎಸಗುತ್ತಿದ್ದಾರೆ, ಇದರ ಬಗ್ಗೆ ಶ್ರೀಮತಿ ಭಾರತಿ ಶೆಟ್ಟಿಯವರು ಮತ್ತು

ಶ್ರೀಮತಿ ತೇಜಸ್ವಿನಿಗೌಡರವರು ಏತಕ್ಕೋಸ್ಕರ ಮಾತನಾಡುತ್ತಿಲ್ಲ. ಅವರುಗಳು ಯಾವ ಸ್ಥಿತಿಯಲ್ಲಿದ್ದಾರೆಂದು ತಾವು ನೋಡಬೇಕು. ಒಂದು ರೀತಿಯ ಭಯದ ವಾತಾವರಣ ಸೃಷ್ಟಿಯಾಗಿದೆ. ಇದನ್ನು ನೋಡುವುದು ಬಿಟ್ಟು ಗೃಹ ಸಚಿವರು ನಮಗೆ ಹೇಳುತ್ತಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿರುವ ಅವರು ನಾವುಗಳು ಮಾತನಾಡುವುದನ್ನೆಲ್ಲ ಕೇಳಿಸಿಕೊಂಡು ನಂತರ ಉತ್ತರ ಕೊಡಬೇಕಾಗಿದೆ. ಹೈಕೋರ್ಟ್‌ನ ಆ ಪ್ರಕರಣದ ಬಗ್ಗೆ ತೀರ್ಪು ಬಂದ ನಂತರ ಚರ್ಚೆ ಮಾಡೋಣ. ಅದಕ್ಕೆ ನಾವು ಹಿಂಜರಿಯುವುದಿಲ್ಲ. ಮಾನ್ಯ ಕೆ.ಎಸ್.ಈಶ್ವರಪ್ಪನವರು ರಾಷ್ಟ್ರ ಧ್ವಜಕ್ಕೆ ಧಕ್ಕೆ ತಂದಿದ್ದಾರೆ, ಇಡೀ ಪ್ರಪಂಚದಲ್ಲಿ ನಾವು ತಲೆ ತಗ್ಗಿಸುವಂತೆ ಮಾಡಿದ್ದಾರೆ. ನಮ್ಮ ತ್ರಿವರ್ಣ ಧ್ವಜಕ್ಕೆ ಅವಮಾನ ಮಾಡಿರುವವರ ಮೇಲೆ ರಾಷ್ಟ್ರ ದ್ರೋಹದಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿ ತಕ್ಷಣ ಅವರನ್ನು ಅರೆಸ್ಟ್ ಮಾಡಿ ಪೊಲೀಸ್ ಠಾಣೆಯಲ್ಲಿ ಇರಿಸಬೇಕು ಮತ್ತು ಜೈಲಿಗೆ ಕಳುಹಿಸಬೇಕು. ಅವರು ಜೈಲಿಗೆ ಹೋಗುವುದಕ್ಕೂ ಮೊದಲು ಮಾನ್ಯ ಸಭಾಪತಿಗಳಾದ ತಾವು ನಿರ್ದೇಶನವನ್ನು ನೀಡಿ ಅವರಿಂದ ರಾಜೀನಾಮೆ ತೆಗೆದುಕೊಳ್ಳುವುದು ಉತ್ತಮ ಎನ್ನುವ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾ ನಾಯಕರೇ, ಇಷ್ಟು ಹೊತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿರುವ ವಿಷಯದ ಬಗ್ಗೆ ಸರ್ಕಾರ ಏನಾದರೊಂದು ತೀರ್ಮಾನಕ್ಕೆ ಬರುವುದಿದ್ದರೆ ಅದನ್ನು ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯಡಿಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅದನ್ನು ತಾವು ತಿರಸ್ಕರಿಸಿದ್ದೀರಿ. ತಿರಸ್ಕೃತಗೊಂಡ ಒಂದು ವಿಚಾರದ ಮೇಲೆ ಮತ್ತೊಮ್ಮೆ ಚರ್ಚೆಗೆ ಅವಕಾಶ ನೀಡಿರುವಂತಹ ಸಂಗತಿಯನ್ನು ನಾನು ಎಲ್ಲಿಯೂ ನೋಡಿಲ್ಲ. ಸೌಹಾರ್ದಯುತ ವಾತಾವರಣವನ್ನು ನಿರ್ಮಾಣ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ವಿರೋಧ ಪಕ್ಷದವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ತಾವು ಇಷ್ಟು ಸುದೀರ್ಘವಾಗಿರುವ ಅವಕಾಶವನ್ನು ನೀಡಿದ್ದೀರಿ.

ಆ ಅವಕಾಶವನ್ನು ಬಳಸಿಕೊಂಡು ವಿರೋಧ ಪಕ್ಷದ ಎಲ್ಲ ಸದಸ್ಯರು ತಮ್ಮತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಒಂದು ಸಾರಿ ತಿರಸ್ಕೃತಗೊಂಡ ವಿಚಾರದ ಬಗ್ಗೆ ಪುನಃ ವಿರೋಧ ಪಕ್ಷದವರು ಚರ್ವಿತಚರ್ವಣದ ರೀತಿಯಲ್ಲಿ ಮಾತನಾಡುತ್ತಿದ್ದರೂ ಸಹ ನಾವೆಲ್ಲರೂ ತಾಳ್ಮೆಯನ್ನು ಕಳೆದುಕೊಳ್ಳದೇ, ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆವು. ಇಲ್ಲಿ ನಡೆದಿರುವ ವಿದ್ಯಮಾನಗಳ ಬಗ್ಗೆ ನಿನ್ನೆಯೇ ತೀರ್ಮಾನ ತೆಗೆದುಕೊಂಡಿರುವುದರಿಂದ ಮತ್ತೊಮ್ಮೆ ಇದರ ಬಗ್ಗೆ ಚರ್ಚೆ ಮಾಡಬೇಕಾಗಿರುವ ಅವಶ್ಯಕತೆ ಇಲ್ಲ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರುಗಳು ಕಾದಿದ್ದಾರೆ. ಅದೇ ರೀತಿಯಲ್ಲಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಪ್ರಶ್ನೋತ್ತರಗಳು, ನಿಯಮ 330 ಮತ್ತು ಗಮನಸೆಳೆಯುವ ಸೂಚನೆ ಮುಂತಾದವುಗಳ ಮೇಲೆ ಚರ್ಚೆ ನಡೆಯಬೇಕಾಗಿದೆ. ಚರ್ವಿತಚರ್ವಣದ ರೀತಿಯಲ್ಲಿ ಈ ವಿವಾದವನ್ನು ರಾಜಕೀಯ ಉದ್ದೇಶಗಳಿಗೆ ಬಳಸುವುದಕ್ಕೆ ಬದಲಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರು ಸಹಕಾರವನ್ನು ನೀಡಿದರೆ, ಇಂದಿನ ಕಾರ್ಯಕಲಾಪಗಳ ಪಟ್ಟಿಯನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಮ್ಮ ಮೇಲೆ ಆರೋಪ ಮಾಡಿದ್ದಾರೆ. ಪೀಠದಿಂದ ಆದೇಶ ಹೊರಬಂದಿದ್ದರೂ ಸಹ ಅದಕ್ಕೆ ವಿರುದ್ಧವಾಗಿ ನಾವು ನಡೆದುಕೊಳ್ಳುತ್ತಿದ್ದೇವೆ ಎನ್ನುವ ಅರ್ಥದಲ್ಲಿ ಅವರು ಮಾತನಾಡಿದ್ದಾರೆ. ಪೀಠ ನೀಡಿರುವ ಆದೇಶದ ಬಗ್ಗೆ ನಮಗೆ ಗೌರವವಿದೆ. ನಮ್ಮ ವಿರೋಧ ಸರ್ಕಾರದ ವಿರುದ್ಧ, ಪೀಠದ ವಿರುದ್ಧ ಅಲ್ಲ.

**ಸಭಾಪತಿಯವರು:-** ನಿನ್ನೆ ನಾನು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದನ್ನು ತಿರಸ್ಕರಿಸಿದ್ದೇನೆ. ಒಂದು ಸೌಹಾರ್ದ ವಾತಾವರಣ ನಿರ್ಮಾಣವಾಗಬೇಕೆನ್ನುವ ಹಿನ್ನೆಲೆಯಿಂದ ಈ ದಿನ ಸುಮಾರು 2 ಗಂಟೆಗಳ ಕಾಲ ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದ್ದೇನೆ. ಈ ದಿನ ನಡೆಯುತ್ತಿರುವುದು ನಿಲುವಳಿ ಸೂಚನೆಯ ಮೇಲಿನ ಚರ್ಚೆ ಅಲ್ಲ. ಒಂದು ಸಂದಿಗ್ಧ ವಾತಾವರಣವನ್ನು ತಿಳಿಗೊಳಿಸುವುದಕ್ಕಾಗಿ ಮತ್ತು ಒಳ್ಳೆಯ ವಾತಾವರಣ ನಿರ್ಮಾಣವಾಗುತ್ತದೆ

ಎನ್ನುವ ಆಶಯದ ಹಿನ್ನೆಲೆಯಲ್ಲಿ ನಾನು ಈ ದಿನ ಚರ್ಚೆಗೆ ಅವಕಾಶವನ್ನು ನೀಡಿದ್ದೇನೆ. ಇದು ತಿರಸ್ಕೃತಗೊಂಡಿರುವ ನಿಲುವಳಿ ಸೂಚನೆಯ ಮೇಲಿನ ಚರ್ಚೆ ಅಲ್ಲ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರ ತೀರ್ಮಾನವಾಗದ ಹೊರತು ಬೇರೆ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾವು ಇದನ್ನು ಒಪ್ಪುವುದಿಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಒಳಗೊಂಡಂತೆ ಕಾಂಗ್ರೆಸ್ ಪಕ್ಷದ ಎಲ್ಲ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ, ಸದನದ ಬಾವಿಯೊಳಗೆ ಧರಣಿ ಕುಳಿತರು)**

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**(ಮೊದಲನೇ ಪಟ್ಟಿ)**

**1. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ):-**

ಸನ್ಮಾನ್ಯ ಸಭಾಪತಿಯವರೇ,

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ (ಕರ್ನಾಟಕ ಅಧಿನಿಯಮದ 14) 311(2)ರ ಪ್ರಕರಣದ ಮೇರೆಗೆ:**

1. 1993ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ಜೀವ ವೈವಿಧ್ಯ ನಿರ್ವಹಣಾ ಸಮಿತಿ) ನಿಯಮಗಳು, 2021 ಅನ್ನು ರಚಿಸಿ, ದಿನಾಂಕ:17.77.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಗ್ರಾಅಪ770 ಗ್ರಾಪಂಅ 2019.

2. 1993ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತ್) (ದೂರ ಸಂಪರ್ಕಗಳ ಮೂಲಸೌಕರ್ಯ ಗೋಪುರ ಮತ್ತು ಓವರ್‌ಗ್ರೌಂಡ್ ಕೇಬಲ್ ಅಥವಾ ಆಪ್ಟಿಕಲ್ ಫೈಬರ್ ಕೇಬಲ್ ಮೂಲಸೌಕರ್ಯ) ನಿಯಮಗಳನ್ನು ರಚಿಸಿ, ದಿನಾಂಕ:02.12.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಗ್ರಾಅಪ 136 ಗ್ರಾಪಂಅ 2021

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ (ಕರ್ನಾಟಕ ಅಧಿನಿಯಮದ 14)311ರ ಪ್ರಕರಣದ ಮೇರೆಗೆ:**

ಕರ್ನಾಟಕ ಸಾಮಾನ್ಯ ಸೇವೆ(ಪಂಚಾಯತ್ ರಾಜ್ ವಿಭಾಗ) (ವೃಂದ ಮತ್ತು ನೇಮಕಾತಿ) ನಿಯಮಗಳು, 2020 ಅನ್ನು(ಸಂಖ್ಯೆ:ಗ್ರಾಅಪ 142 ಕೆಎಸ್ಎಸ್ 2016, ದಿನಾಂಕ:02.09.2021ರ ತಿದ್ದುಪಡಿಯನ್ನು ಒಳಗೊಂಡಂತೆ) ರಚಿಸಿ, ದಿನಾಂಕ:20.07.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಗ್ರಾಅಪ 142 ಕೆಎಸ್ಎಸ್ 2016 ನ್ನು ಮಂಡಿಸುತ್ತಿದ್ದೇನೆ.

**II ಶ್ರೀ ಆರ್.ಅಶೋಕ್(ಕಂದಾಯ ಸಚಿವರು);-**

**1994ರ ಕರ್ನಾಟಕ ಭೂ ಕಂದಾಯ(ಕರ್ನಾಟಕ ಅಧಿನಿಯಮದ 12)198ರ ಪ್ರಕರಣದ ಮೇರೆಗೆ:**

**1.** ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 197ರ ನಿಹಿತವಾಗಿರುವ ಪ್ರಕಾರ, 1969ರ ಕರ್ನಾಟಕ ಭೂ ಮಂಜೂರಾತಿ (ತಿದ್ದುಪಡಿ) ನಿಯಮಗಳ ನಿಯಮ, 22-ಎ ಅನ್ನು ತಿದ್ದುಪಡಿಗೊಳಿಸಿ, ದಿನಾಂಕ: 16.10.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಆರ್‌ಡಿ 161 ಎಲ್‌ಜಿಪಿ 2021.

2. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 197ರ ನಿಹಿತರಾಗಿರುವ ಪ್ರಕಾರ, 1969ರ ಕರ್ನಾಟಕ ಭೂ ಮಂಜೂರಾತಿ (ತಿದ್ದುಪಡಿ) ನಿಯಮಗಳ ನಿಯಮ 8ಕ್ಕೆ ತಿದುದಪಡಿ ಮಾಡಿ ದಿನಾಂಕ:27.10.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಆರ್‌ಡಿ 26 ಎಲ್‌ಜಿಪಿ 2021 ನ್ನು ಮಂಡಿಸುತ್ತಿದ್ದೇನೆ.

III. **ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):- ಸನ್ಮಾನ್ಯ ಸಭಾಪತಿಯವರೇ,**

**1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:**

2011ರ ಕರ್ನಾಟಕ ಕೈಗಾರಿಕ ಭದ್ರತಾ ಪಡೆ (ವೃಂದ ಮತ್ತು ನೇಮಕಾತಿ) ನಿಯಮಗಳು 2021ನ್ನು ರಚಿಸಿ, ದಿನಾಂಕ: 24.01.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 186 ಪೋಸಿಆ 2018 ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಎರಡನೇ ಪಟ್ಟಿ)

****

**I.** **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ):- ಸನ್ಮಾನ್ಯ ಸಭಾಪತಿಯವರೇ,**

(1) **ಕಂಪನಿ ಕಾಯ್ದೆ2013ರ ಕಲಂ 395(1)(ಬಿ)ರನ್ವಯ.**

ಕರ್ನಾಟಕ ರಾಜ್ಯ ಪಾನೀಯ ನಿಗಮದ 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.

(2) **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 68-ಸಿ (4) ಮತ್ತು 68-ಡಿ (2)ರನ್ವಯ.**

1. ಕುಶಾಲನಗರ ಯೋಜನಾ ಪ್ರಾಧಿಕಾರದ 2008-09 ರಿಂದ 2018-19ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಗಳು.
2. ಗೋಕಾಕ್ ನಗರ ಯೋಜನಾ ಪ್ರಾಧಿಕಾರದ 2018-19ನೇ ಸಾಲಿನ ವಾರ್ಷಿಕ ವರದಿ.
3. ಶಿರಸಿ ನಗರ ಯೋಜನಾ ಪ್ರಾಧಿಕಾರದ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳು.
4. ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
5. ಅರಸೀಕೆರೆ ಸ್ಥಳೀಯ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಅರಕಲಗೂಡು ಸ್ಥಳೀಯ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಚನ್ನರಾಯಪಟ್ಟಣ ಸ್ಥಳೀಯ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಬೇಲೂರು-ಹಳೇಬೀಡು ಸ್ಥಳೀಯ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
9. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದರ 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

10. ಗ್ರೇಟರ್ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
11. ಚನ್ನಪಟ್ಟಣ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
12. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2020-21ಸಾಲಿನ ಲೆಕ್ಕಪರಿಶೋಧನಾ ವರದಿ.
13. ಕನಕಪುರ ಯೋಜನಾ ಪ್ರಾಧಿಕಾರದ 2020-21ಸಾಲಿನ ಲೆಕ್ಕಪರಿಶೋಧನಾ ವರದಿ.
14. ಆನೇಕಲ್ ಯೋಜನಾ ಪ್ರಾಧಿಕಾರದ 2019-20ಸಾಲಿನ ಲೆಕ್ಕಪರಿಶೋಧನಾ ವರದಿ.
15. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(3) **ಕಂಪನಿ ಅಧಿನಿಯಮ 2013ರ ಸೆಕ್ಷನ್ 394(2)ರನ್ವಯ.**

1. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ.
2. ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತದ(ಬಿ.ಎ.ಆರ್.ಎಲ್.)ಬೆಂಗಳೂರು ಇದರ 2020-21ನೇ ಸಾಲಿನ ವಾರ್ಷಿಕ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ವರದಿಯನ್ನು ಮಂಡಿಸುತ್ತಿದ್ದೇನೆ.

II. **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)**:- ಸನ್ಮಾನ್ಯ ಸಭಾಪತಿಯವರೇ,

**(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 262(3) ಮತ್ತು 246(12)ರಂತೆ.**

1. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಗ್ರಾಮ ಪಂಚಾಯಿತಿಗಳ ಕ್ರೋಢೀಕೃತ ಇದರ 2016-17, 2017-18 ಮತ್ತು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
5. ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

6. ಕೊಡಗು (ಮಡಿಕೇರಿ) ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 300 ರ ಉಪ ಪ್ರಕರಣ(5)ರನ್ವಯ.**

1. ಯಾದಗಿರಿ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
2. ಉತ್ತರ ಕನ್ನಡ (ಕಾರವಾರ) ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
3. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
4. ಗದಗ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
5. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
6. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
7. ರಾಯಚೂರು ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
8. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
9. ಮೈಸೂರು ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
10. ಬೀದರ್ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
11 ತುಮಕೂರು ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.

**(3) ಕಂಪನಿ ಕಾಯಿದೆ 2013ರ ಸೆಕ್ಷನ್ 394(2) ಪ್ರಕಾರ.**

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ನ (ಕೆ.ಆರ್.ಐ.ಡಿ.ಎಲ್.) 2018-19ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

III. **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಸಾರಿಗೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ರಸ್ತೆ ಸಾರಿಗೆ ನಿಗಮ ಕಾಯ್ದೆ 1950 ಅಧಿನಿಯಮ 33(4) ಮತ್ತು 35(3)ರನ್ವಯ.**

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ಹುಬ್ಬಳ್ಳಿ)2017-18ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

IV. **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ವಸತಿ, ಮೂಲ ಸೌಕರ್ಯಾಭಿವೃದ್ಧಿ ಸಚಿವರ ಪರವಾಗಿ)**:- ಸನ್ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 41ರಂತೆ.**

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(2) **ಕಂಪನಿ ಕಾಯ್ದೆ 1965ರ ಕಲಂ 469 ರನ್ವಯ.**

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(3) **ಕಂಪನಿ ಕಾಯ್ದೆ 2013ರ ಕಲಂ 394 ರನ್ವಯ.**

1. ಕೊಂಕಣ ರೈಲ್ವೆ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
2. ಹಾಸನ-ಮಂಗಳೂರು ರೈಲ್ವೇ ಅಭಿವೃದ್ಧಿ ಕಂಪನಿ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

V. **ಶ್ರೀ ಆರಗ ಜ್ಞಾನೇಂದ್ರ (ಗೃಹ (ಗುಪ್ತಚರ ವಿಭಾಗವನ್ನು ಹೊರತು ಪಡಿಸಿ) ಸಚಿವರು)**:- ಸನ್ಮಾನ್ಯ ಸಭಾಪತಿಯವರೇ,

(1) **ಪರಿಷ್ಕೃತ ಕರ್ನಾಟಕ ಪೋಲೀಸ್ ಅಧಿನಿಯಮ 1963 ಕಲಂ 20ಸಿ, 20ಡಿ ಮತ್ತು 20 ಇ ಪೋಲೀಸ್ ದೂರುಗಳ ಪ್ರಾಧಿಕಾರದ'ನ್ವಯ.**

ರಾಜ್ಯ ಪೋಲೀಸ್ ದೂರುಗಳ ಪ್ರಾಧಿಕಾರದ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳು.

(1) **ಕಂಪನಿಗಳ ಕಾಯ್ದೆ-2013ರ ತಿದುಪಡ್ಡಿ ಕಾಯ್ದೆ 394(2)ರಡಿಯಲ್ಲಿ.**

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

VI. **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದಿ ಸಚಿವರ ಪರವಾಗಿ)**:- ಸನ್ಮಾನ್ಯ ಸಭಾಪತಿಯವರೇ,

(1) **ಭಾರತೀಯ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯದ ಕಾಯ್ದೆ ಅನುಸೂಚಿ 26 (ಕರ್ನಾಟಕ 1986 ಪ್ರಕರಣ 22) ರನ್ವಯ.**

ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

(2) **ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ 50(2) ರನ್ವಯ.**

1. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2019-20ನೇ ಸಾಲಿನ ವಾರ್ಷಿಕ ವರದಿ.
2. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳು.

(3) **ಕಂಪನಿ ಕಾಯ್ದೆ 2013ರ ಪರಿಚ್ಛೇದ 395ರ ಅನುಸಾರ.**

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ(ಕಿಯೋನಿಕ್ಸ್) 2020-21ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**VII.** **ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ (ಲೋಕೋಪಯೋಗಿ ಸಚಿವರು)**:- ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಅಧಿನಿಯಮ 2013, ಕಲಂ 394 ಮತ್ತು 395 ಅಡಿಯಲ್ಲಿ.**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2020-21ನೇ ಸಾಲಿನ ವಾರ್ಷಿಕ

(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ವರದಿಯನ್ನು ಮಂಡಿಸುತ್ತಿದ್ದೇನೆ.

**VIII.** **ಶ್ರೀ ಆನಂದ್ ಸಿಂಗ್ (ಜೀವಿಶಾಸ್ತ್ರ ಮತ್ತು ಪರಿಸರ, ಪ್ರವಾಸೋದ್ಯಮ ಸಚಿವರು):-** ಸನ್ಮಾನ್ಯ ಸಭಾಪತಿಯವರೇ,

**ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಅಧಿನಿಯಮ 2002ರ ಪ್ರಕಾರ.**

ಕರ್ನಾಟಕ ಜೀವ ವೈವಿಧ್ಯ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ವರದಿ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**IX.** **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿಗಳ ಕಾಯ್ದೆ 2013 ನಿಯಮ 395(1)ರನ್ವಯ.**

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ 2017-18ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**X.** **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**ಕಂಪನಿಗಳ ಕಾಯ್ದೆ 2013ರ ಕಲಂ 394 (2) ರನ್ವಯ.**

ಮೈಸೂರು ಪೆಯಿಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್‌ನ 2020-21ನೇ ಸಾಲಿನ ವಾರ್ಷಿಕ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ವರದಿಯನ್ನು ಮಂಡಿಸುತ್ತಿದ್ದೇನೆ.

**XI.** **ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)**

**ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(11) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29 (ಡಿ) ರನ್ವಯ.**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಸಹಕಾರಿ ಕಾರ್ಖಾನೆಗಳ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**XII.** <u>ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಕೃಷಿ ಸಚಿವರು ಪರವಾಗಿ)</u>:-

ಸನ್ಮಾನ್ಯ ಸಭಾಪತಿಯವರೇ,

**<u>ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 40(3) ಮತ್ತು 57ರಂತೆ.</u>**

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇದರ 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**XIII.** **<u>ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ನಗರಾಭಿವೃದ್ಧಿ (ಕೆಯುಡಬ್ಲ್ಯೂಎಸ್‌ಡಿಬಿ ಮತ್ತು ಕೆಯುಐಡಿಎಫ್‌ಸಿ ಸೇರಿದಂತೆ, ಬೆಂಗಳೂರು ಅಭಿವೃದ್ಧಿ, ಬಿ.ಬಿ.ಎಂ.ಪಿ, ಬಿ.ಡಿ.ಎ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್ ಮತ್ತು ನಗರಯೋಜನೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆಯನ್ನು ಹೊರತುಪಡಿಸಿ) ಸಚಿವರ ಪರವಾಗಿ)</u>**:- ಸನ್ಮಾನ್ಯ ಸಭಾಪತಿಯವರೇ,

**<u>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48 (5) ಮತ್ತು 49 ರನ್ವಯ.</u>**

1. ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರದ 2018-19ನೇ ಸಾಲಿನ ವಾರ್ಷಿಕ ವರದಿ ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2017-18, 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
3. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2018-19ನೇ ಸಾಲಿನ ವಾರ್ಷಿಕ ವರದಿ.
5. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
6. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2016-17 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2018-19ನೇ ಸಾಲಿನ ವಾರ್ಷಿಕ

ವರದಿಯನ್ನು ಮಂಡಿಸುತ್ತಿದ್ದೇನೆ.

**XIV. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, (ಪೌರಾಡಳಿತ, ಸಣ್ಣ ಕೈಗಾರಿಕೆಗಳು, ಸಾರ್ವಜನಿಕ ವಲಯ ಉದ್ಯಮಗಳ ಸಚಿವರ ಪರವಾಗಿ)**:- ಸನ್ಮಾನ್ಯ ಸಭಾಪತಿಯವರೇ,

(1) **ಕಂಪನಿಗಳ ಕಾಯ್ದೆ 1956 ಸೆಕ್ಷನ್ 26 ನಿಯಮ 1957 (9) (1) ರನ್ವಯ.**

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2019-20ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**(2) ಕಂಪನಿಗಳ ಕಾಯ್ದೆ 2013ರ ಕಲಂ 394 ಮತ್ತು 395 ರನ್ವಯ.**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಯನ್ನು ಮಂಡಿಸುತ್ತಿದ್ದೇನೆ.

**XV. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)**:- ಸನ್ಮಾನ್ಯ ಸಭಾಪತಿಯವರೇ,

(1) **ಕಂಪನಿ ಕಾಯ್ದೆ, 2013ರ ಸೆಕ್ಷನ್ 395(1)ರನ್ವಯ.**

1. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
3. ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದ 2020-21ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(2) **ವಿದ್ಯುಚ್ಛಕ್ತಿ ಕಾಯ್ದೆ, 2003 ಪರಿಚ್ಛೇದ-104(4) ರಡಿ**
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**XVI. ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ)**:- ಸನ್ಮಾನ್ಯ ಸಭಾಪತಿಯವರೇ,

**ಕಂಪನಿ ಕಾಯ್ದೆ 2013 ಸೆಕ್ಷನ್ 395 ರಂತೆ.**

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತದ 2012-13 ರಿಂದ 2019-20ನೇ ಸಾಲಿನ ವಾರ್ಷಿಕ ವರದಿಗಳು (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಹಾಗೂ 2020-21ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು. ಸದನವನ್ನು ನಾಳೆ ಬೆಳಗ್ಗೆ 10.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 5 ಗಂಟೆ 47 ನಿಮಿಷಗಳಿಗೆ ಮುಂದೂಡಲ್ಪಟ್ಟು, ಪುನಃ ದಿನಾಂಕ 18ನೇ ಫೆಬ್ರವರಿ 2022ರಂದು ಶುಕ್ರವಾರ ಬೆಳಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>